ISSN 2455-2720
Negila Miditha

ನೇಗಿಲ ಮಿಡಿತ

"ರೈತರ ಪತ್ರಿಕೆ"

ಸಂಪುಟ-11 ಸಂಚಿಕೆ-1 ಜನವರಿ-ಫೆಬ್ರವರಿ, 2025



ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಶಿವಮೊಗ್ಗ, ಇರುವಕ್ಕಿ ಮುಖ್ಯ ಆವರಣ- 577 412

ಸಂಪಾದಕೀಯ........

ಪ್ರಿಯ ಓದುಗರೇ,

ಮೈಕ್ರೋ ಫೈನಾನ್ಸ್ ಅಥವಾ ಕಿರು ಬಂಡವಾಳ ಸೇವೆಯು ಆರ್ಥಿಕವಾಗಿ ಹಿಂದುಳಿದ ಮತ್ತು ಕಡಿಮೆ ಆದಾಯ ಹೊಂದಿರುವ ಜನಸಮೂಹಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಕಾರ್ಯಾಚರಣೆಯಾಗಿದೆ. ಈ ಸೇವೆ ಮೂಲಕ ಬಡತನ ನಿವಾರಣೆ, ಸ್ವಾವಲಂಬಿ ಉದ್ಯೋಗಕ್ಕಾಗಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಧಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಸಾಲ ಪಡೆಯುವವರ ಪೈಕಿ ಹೆಚ್ಚಿನವರು ಸಾಂಪ್ರದಾಯಕ ಬ್ಯಾಂಕಿಂಗ್ ಕ್ಷೇತ್ರದಿಂದ ಹೊರಗುಳಿದಿರುತ್ತಾರೆ. ಇಲ್ಲವೇ ಬ್ಯಾಂಕ್‌ಗಳಿಂದ ಸಾಲ ಪಡೆಯಲಾಗದ ಸ್ಥಿತಿಯಲ್ಲಿರುತ್ತಾರೆ. ಈ ಕುರಿತಂತೆ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಬೆಳವಣಿಗೆಯ ಪ್ರಮುಖ ಸಾಧನ ಎಂದೇ ಕೆಲವರು ವಿಶ್ಲೇಷಿಸಿದ್ದರು. ಕಡಿಮೆ ಆದಾಯದ (ರೂ. 3 ಲಕ್ಷದ ಒಳಗೆ ವಾರ್ಷಿಕ ಆದಾಯ ಇರುವ) ಕುಟುಂಬಗಳಿಗೆ ಯಾವುದೇ ಅಡಮಾನ ಇಲ್ಲದಂತೆ ನೀಡುವ ಕಿರುಸಾಲವನ್ನು ಮೈಕ್ರೋಫೈನಾನ್ಸ್ ಸಾಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ವ್ಯಾಖ್ಯಾನಿಸಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕಿರುಬಂಡವಾಳ ಸೇವೆಗಳ ಹಾವಳಿ ಮತ್ತು ಸಮಸ್ಯೆಗಳು ಮುಖ್ಯ ಚರ್ಚೆಯ ವಿಷಯವಾಗಿದೆ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಮೈಕ್ರೋ ಫೈನಾನ್ಸ್‌ಗಳಿಂದ ಉಂಟಾಗಿರುವ ಸಮಸ್ಯೆಗಳು ಗಮನ ಸೆಳೆಯುತ್ತಿವೆ. ಈ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಮುಖ್ಯವಾಗಿ ಮಹಿಳೆಯರು, ಸ್ವ-ಸಹಾಯ ಗುಂಪು (ಎಸ್‌ಹೆಚ್‌ಜಿ ಗುಂಪುಗಳು) ಮತ್ತು ಸಣ್ಣ ಉದ್ದಿಮೆಗಳಿಗೆ ಆರ್ಥಿಕ ನೆರವನ್ನು ಒದಗಿಸುತ್ತವೆ. ಈ ಸೇವೆಗಳ ಮುಖ್ಯ ಉದ್ದೇಶ ಗ್ರಾಮೀಣ ಜನರು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸುವುದಾಗಿದೆ.

ನಬಾರ್ಡ್ ಸಂಸ್ಥೆಯ 2022-23ನೇ ಸಾಲಿನ ಅಧ್ಯಯನದ ಪ್ರಕಾರ ವಿಶ್ವದ ಅತಿದೊಡ್ಡ ಕಿರುಬಂಡವಾಳದ ವಿತರಣೆಯ ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಲಿಂಕೇಜ್‌ನ ಮೂಲಕ ಇಂದು 17.8 ಕೋಟಿ ಕುಟುಂಬಗಳನ್ನು ತಲುಪಿರುತ್ತದೆ ಎಂದು ತನ್ನ ವರದಿಯಲ್ಲಿ ತಿಳಿಸಿದೆ. ಇದೊಂದು ರೀತಿಯಲ್ಲಿ ಆಶಾದಾಯಕ ಬೆಳವಣಿಗೆಯಾಗಿದೆ. ಭಾರತದಲ್ಲಿ 144 ಲಕ್ಷ ಸ್ವಸಹಾಯ ಸಂಘಗಳು ಇದ್ದು, ರೂ. 65,089 ಕೋಟಿ ಠೇವಣಿ ಸಂಗ್ರಹವಿರುತ್ತದೆ. ಇದರಲ್ಲಿ ವಾರ್ಷಿಕವಾಗಿ 2 ಲಕ್ಷ 928 ಕೋಟಿ ಸಾಲ ತೆಗೆದುಕೊಂಡಿದ್ದು, 2,59,664 ಕೋಟಿ ಸಾಲ ಮರುಪಾವತಿ ಆಗದೇ ಬಾಕಿ ಇರುತ್ತದೆ. ಪ್ರತಿ ಸ್ವ-ಸಹಾಯ ಸಂಘಕ್ಕೆ 3.35 ಲಕ್ಷ ಮರುಪಾವತಿ ಆಗದೇ ಇರುವ ಮೊತ್ತವಿರುತ್ತದೆ. 120 ಲಕ್ಷ ಸ್ವ-ಸಹಾಯ ಸಂಘಗಳು ಬ್ಯಾಂಕ್‌ನೊಂದಿಗೆ ಲಿಂಕೇಜ್ ಹೊಂದಿರುತ್ತವೆ. ಅಂದರೆ ಶೇ. 83.52ರಷ್ಟು ಮಹಿಳಾ ಸ್ವ-ಸಹಾಯ ಗುಂಪುಗಳು ಬ್ಯಾಂಕ್‌ಗಳೊಂದಿಗೆ ಲಿಂಕೇಜ್ ಹೊಂದಿರುತ್ತದೆ ಎಂದು ನಬಾರ್ಡ್ ತನ್ನ ವರದಿಯಲ್ಲಿ ತಿಳಿಸಿರುತ್ತದೆ.

ಈ ಮೈಕ್ರೋಫೈನಾನ್ಸ್ ಸೇವೆಗಳು ಬಡಜನರ ಆರ್ಥಿಕ ಪ್ರಗತಿಯ ಭರವಸೆಯ ದಾರಿಯಾಗಿವೆ. ಆದರೆ ಸರ್ಕಾರ ಮತ್ತು ಸಂಸ್ಥೆಗಳು ಈ ಸೇವೆಗಳ ನಿಯಂತ್ರಣಕ್ಕೆ ಗಮನಹರಿಸಿ, ಸುರಕ್ಷಿತ ಹಣಕಾಸು ಪರಿಸರವನ್ನು ನಿರ್ವಹಿಸುವುದು ಅಗತ್ಯ. ಸಾಂಪ್ರದಾಯಕ ಬ್ಯಾಂಕಿಂಗ್ ಸೇವೆಗೆ ಹೊಂದಾಣಿಕೆಯಾಗದ ಜನರಿಗೆ ಇದು ಆರ್ಥಿಕ ಜೀವನದ ಹೊಸ ದಾರಿ ತೆರೆಸಿದರೂ, ಮಿತಿ ಮೀರಿದ ಸಾಲ ಮತ್ತು ಹಾವಳಿಯಿಂದ ದೂರ ದೃಷ್ಟಿಕೋನದಲ್ಲಿ ಕಾರ್ಯ ನಿರ್ವಹಿಸುವುದು ಒಟ್ಟಾರೆ ಅಭಿವೃದ್ಧಿಗೆ ಮಾರ್ಗವಾಗಬಹುದಾಗಿದೆ.

ಪ್ರಸ್ತುತ ಸಂಚಿಕೆಯಲ್ಲಿ ತೆಂಗಿನ ತೋಟದಲ್ಲಿ ನೀರಿನ ಸಮರ್ಪಕ ನಿರ್ವಹಣೆ, ಮಣ್ಣಿನ ಸವೆತ, ಉರಗಗಳು, ಅಡಿಕೆಯಲ್ಲಿ ದುಂಡಾಣು ಎಲೆಪಟ್ಟಿ ರೋಗ, ಗುಣಮಟ್ಟದ ಬೀಜಗಳಿಂದ ಅಧಿಕ ಇಳುವರಿ, ಕೆರೆಗಳಲ್ಲಿ ಮೀನು ಸಾಕಣೆ, ವಿಶ್ವವಿದ್ಯಾಲಯದಿಂದ ಕೌಶಲ್ಯಾಭಿವೃದ್ಧಿ ತರಬೇತಿ, ಛೀ ! ಪೂಪ್ (ಮಲ)ದ ಕಾಫಿ, ಕೃಷಿಯಲ್ಲಿ ಉದ್ಯಮಶೀಲತೆ, ಕಾಳುಮೆಣಸಿನ ತಳಿಗಳು, ಒಂದೆಲಗ, ಜೇಣು ಹುಳು, ಬೇಬಿಕಾರ್ನ್ ಸೇರಿದಂತೆ ಇತ್ಯಾದಿ ವಿಷಯಗಳಲ್ಲಿ ವೈಜ್ಞಾನಿಕ ಮಾಹಿತಿಗಳನ್ನು ಹಾಗೂ ಎಂದಿನಂತೆ ರೈತರಿಗೆ ಪ್ರೇರಣೆಯಾಗುವ ಸಾಧಕ ರೈತ, ಸಾಧಕ ಕೃಷಿ ಉದ್ದಿಮೆದಾರ, ಮೌಲ್ಯವರ್ಧನೆ, ನಮ್ಮ ಸಂಸ್ಥೆ ಮತ್ತು ಪಶ್ನೋತ್ತರ ಅಂಕಣ ಲೇಖನಗಳನ್ನು ಅಳವಡಿಸಲಾಗಿದೆ. ರೈತರು ತಮ್ಮ ಕ್ಷೇತ್ರದಲ್ಲಿ ನಾವೀನ್ಯ ತಾಂತ್ರಿಕತೆಗಳನ್ನು ಅಳವಡಿಸಿ ಕೊಳ್ಳುವುದರಿಂದ ತಮ್ಮ ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಲಿ ಎಂದು ಆಶಿಸುತ್ತೇನೆ.

(ಬಸವರಾಜ ಬೀರಣ್ಣವರ)

ವಿಶ್ವವಿದ್ಯಾಲಯ ಸಂವಹನ ಕೇಂದ್ರದಲ್ಲಿ ಲಭ್ಯವಿರುವ ಪುಸ್ತಕಗಳ ವಿವರ

ಕ್ರ.ಸಂ.	ಪುಸ್ತಕಗಳ ಹೆಸರು	ದರ (ರೂ.)	ಕ್ರ.ಸಂ.	ಪುಸ್ತಕಗಳ ಹೆಸರು	ದರ (ರೂ.)
1.	ಎಣ್ಣೆಕಾಳು ಬೆಳೆಗಳು	60/-	10.	ಸಂರಕ್ಷಿತ ವಾತಾವರಣದಲ್ಲಿ ಆಂಥೂರಿಯಂ ಬೇಸಾಯ	55/-
2.	ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ರೋಗಗಳ ನಿರ್ವಹಣೆ	90/-	11.	ತೋಟಗಾರಿಕೆ ಬೆಳೆಗಳಲ್ಲಿ ಕೊಯ್ಲೋತ್ತರ ನಿರ್ವಹಣೆ ಮತ್ತು ಮೌಲ್ಯವರ್ಧನೆ	60/-
3.	ಕಪ್ಪು ಹೊನ್ನು-ಕಾಳುಮೆಣಸು	60/-			
4.	ಗೇರು ಕೃಷಿ	55/-	12.	Pesticide Usage in Agricultural Crops	80/-
5.	ಪ್ರಮುಖ ತೋಟಗಾರಿಕೆ ಬೆಳೆಗಳಲ್ಲಿ ಕೀಟಗಳ ನಿರ್ವಹಣೆ	155/-	13.	ಅಡಿಕೆ ಸಮಗ್ರ ಕೃಷಿ	100/-
6.	ವಾಣಿಜ್ಯ ಸಂರಕ್ಷಿತ ಪುಷ್ಪಕೃಷಿ	55/-	14.	ಬಾಳೆ	100/-
7.	ಸಮಗ್ರ ಕೃಷಿ ಪದ್ಧತಿಗಳು	100/-	15.	ಕೆರೆ ಪದಕೋಶ	100/-
8	ಪೌಷ್ಟಿಕ ಸಿರಿಧಾನ್ಯಗಳು	55/-	16.	ಜಿ. ಎಂ. ಬೆಳೆಗಳು: ಸವಾಲುಗಳು ಮತ್ತು ಅವಕಾಶಗಳು	150/-
9.	ಕೃಷಿ ಹವಾಮಾನ: ಬದಲಾವಣೆ ಮತ್ತು ನಿರ್ವಹಣೆ	75/-			

ಪುಸ್ತಕ ಪ್ರತಿಗಳಿಗಾಗಿ ಸಂಪರ್ಕಿಸಿ : 944808 38218

ಚಂದಾ ವಿವರ (ರೂ. ಗಳಲ್ಲಿ)

ಬಿಡಿ ಪ್ರತಿ	40/-
ವಾರ್ಷಿಕ (ವೈಯಕ್ತಿಕ)	240/-
ಎರಡು ವರ್ಷಗಳಿಗೆ	480/-
ಐದು ವರ್ಷಗಳಿಗೆ	1200/-
ಹತ್ತು ವರ್ಷಗಳಿಗೆ (ವೈಯಕ್ತಿಕ)	2400/-
ವಾರ್ಷಿಕ (ಸಂಸ್ಥೆಗಳಿಗೆ)	1000/-
ಪೋಷಕರು	10000/-

ನೇಗಿಲ ಮಿಡಿತ

ಸಂಪುಟ–11 ಸಂಚಿಕೆ–1: ಜನವರಿ–ಫೆಬ್ರವರಿ, 2025

ಸಂಪಾದಕ ಮಂಡಳಿ

ಅಧ್ಯಕ್ಷರು : ಡಾ. ಆರ್. ಸಿ. ಜಗದೀಶ
ಕುಲಪತಿಗಳು

ಸಂಪಾದಕರು : ಡಾ. ಬಸವರಾಜ ಬೀರಣ್ಣವರ
ಪ್ರಾಧ್ಯಾಪಕರು

ಸಂಪಾದಕ ಮಂಡಳಿ ಸದಸ್ಯರು

ಡಾ. ಬಿ. ಹೇಮ್ಲಾ ನಾಯಕ್, ಶಿಕ್ಷಣ ನಿರ್ದೇಶಕರು

ಡಾ. ದುಷ್ಯಂತ ಕುಮಾರ್ ಬಿ. ಎಂ., ಸಂಶೋಧನಾ ನಿರ್ದೇಶಕರು

ಡಾ. ಕೆ. ಟಿ. ಗುರುಮೂರ್ತಿ, ವಿಸ್ತರಣಾ ನಿರ್ದೇಶಕರು

ಡಾ. ಬಿ. ಕೆ. ಶಿವಣ್ಣ, ಗ್ರಂಥಪಾಲಕರು

ಸದಸ್ಯ ಕಾರ್ಯದರ್ಶಿ : ಡಾ. ಬಸವರಾಜ ಬೀರಣ್ಣವರ

ಸಹ ಸಂಪಾದಕರು : ಡಾ. ಟಿ. ಎಂ. ಸೌಮ್ಯ
ಪ್ರಾಧ್ಯಾಪಕರು

ಸಹಾಯಕ ಸಂಪಾದಕರು : ಡಾ. ಮಲ್ಲಿಕಾರ್ಜುನ ಎಂ. ಸಿ.
ಸಹಾಯಕ ಪ್ರಾಧ್ಯಾಪಕರು (ಕನ್ನಡ)

: ಡಾ. ಪ್ರಿಯಾಂಕ
ಸಹಾಯಕ ಪ್ರಾಧ್ಯಾಪಕರು (ಇಂಗ್ಲಿಷ್)

ನೇಗಿಲ ಮಿಡಿತಕ್ಕೆ ಪೋಷಕರಾಗಿ
ಕೃಷಿ ಜ್ಞಾನ ರೈತರಿಗೆ ತಲುಪಲು ನೆರವಾಗಿ

ಪುಟ ವಿನ್ಯಾಸ ಮತ್ತು ಅಕ್ಷರ ಜೋಡಣೆ
ಎಂ. ಎಸ್. ಸುಪ್ರಿಯ

ವಿಶ್ವವಿದ್ಯಾಲಯದ ಎಲ್ಲಾ ಪ್ರಕಟಣೆಗಳಿಗೆ ಸಂಪರ್ಕಿಸಿ
ವಿಶ್ವವಿದ್ಯಾಲಯ ಸಂವಹನ ಕೇಂದ್ರ
ಶಿಕ್ಷಣ ನಿರ್ದೇಶನಾಲಯ
ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ
ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ
ಆನಂದಪುರ (ಹೋ.) ಸಾಗರ (ತಾ.), ಶಿವಮೊಗ್ಗ.
ಇರುವಕ್ಕಿ ಮುಖ್ಯ ಆವರಣ–577 412

ಒಳ ಪುಟಗಳ ಮಿಡಿತ

- ತೆಂಗಿನ ತೋಟದಲ್ಲಿ ನೀರಿನ ಸಮರ್ಪಕ ನಿರ್ವಹಣೆ
  – ಸುರೇಶ್ ನಾಯ್ಕ ಕೆ. ಪಿ. 02–03
- ಮಣ್ಣಿನ ಸವೆತ ಮತ್ತು ಅದರ ಸಂರಕ್ಷಣೆ
  – ಮಲ್ಲಿಕಾ ಕೆ. ಮತ್ತು ಸಂಕಲ್ಪ ಸಿ. ಪಿ. 04–05
- ಉರಗಗಳು: ರೈತನ ಶತ್ರು ಅಲ್ಲ ಮಿತ್ರ !
  – ಪೂರ್ಣಿಮಾ ಹೊಳೆಯಣ್ಣವರ ಮತ್ತು ರವಿ ಪಾಟೀಲ 06–08
- ಅಡಿಕೆಯಲ್ಲಿ ಮಂಡಾಣು ಎಲೆಚುಕ್ಕೆ ರೋಗದ ಸಮಗ್ರ ನಿರ್ವಹಣಾ ಕ್ರಮಗಳು
  – ಎಸ್. ಜೆ. ಕಿರಣ್‌ಕುಮಾರ್, ನಾಗರಾಜಪ್ಪ ಅಡಿವಪ್ಪರ್ ಮತ್ತು ಸುದೀಪ್ ಹೆಚ್. ಪಿ. 09
- ಸಾಧಕ ರೈತ (ಅಂಕಣ) –ತುಷ್ಕವಲಯದಲ್ಲಿ ಕೆಂಪು ನೇಪಿಯರ್ ಉತ್ಪಾದನೆ: ಶ್ರೀಮತಿ ಕವಿತ ಮಿಟ್ಟೆ – ರಮೇಶ್ ಎಂ. ಎನ್. 10–11
- ಗುಣಮಟ್ಟದ ಬೀಜಗಳಿಂದ ಅಧಿಕ ಇಳುವರಿ
  – ಗಜೇಂದ್ರ ಖಿದ್ರಾಪೂರೆ ಮತ್ತು ರೇಖಾ ಬಿ. 12–13
- ಕೆರೆಗಳಲ್ಲಿ ಮೀನು ಸಾಕಣೆ
  – ಪ್ರಕಾಶ್ ಪವಾಡಿ ಮತ್ತು ಶ್ರುತಿಶ್ರೀ ಸಿ. 14
- ವಿಶ್ವವಿದ್ಯಾಲಯದಿಂದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು
  – ಸುಧಾರಾಣಿ ಎನ್., ಸಹನಾ ಎಸ್. ಮತ್ತು ಅಂಜಲಿ ಎಂ. ಸಿ. 15
- ಛೀ ! ಪೂಪ್ (ಮಲ)ದ ಕಾಫಿ, ಏನಿದು?
  – ಎಂ. ಮಂಜುನಾಥ 16–17
- ಕೃಷಿಯಲ್ಲಿ ಉದ್ಯಮಶೀಲತೆ
  – ಸುನಿತ ಎ. ಬಿ., ಪ್ರೀತಿ ಮತ್ತು ಸಂಧ್ಯಾ ಜೆ. ಸಿ. 18–19
- ಕಾಳು ಮೆಣಸಿನ ಬೆಳೆಯ ಸುಧಾರಿತ ತಳಿಗಳು
  – ದೇವರಾಜು, ಬಸವಲಿಂಗಯ್ಯ ಮತ್ತು ಸುಷ್ಮಾ ಅಶೋಕ ಚೌಗುಲೆ 20
- ಸಾಧಕ ಕೃಷಿ ಉದ್ದಿಮೆದಾರ (ಅಂಕಣ)– ನಿರಂತರತೆ ಉದ್ಯಮದ ಯಶಸ್ಸಿನ ಗುಟ್ಟು ಜನನಿ ಫೀಡ್ಸ್ : ಶ್ರೀ ರವಿಕುಮಾರ್ ಡಿ.
  – ಮಲ್ಲಿಕಾರ್ಜುನ ಎಂ. ಸಿ., ಕಿರಣ್ ಕುಮಾರ್ ಆರ್. ಪಾಟೀಲ ಮತ್ತು ಬಸವರಾಜ ಬೀರಣ್ಣವರ 21–23
- ಮೌಲ್ಯವರ್ಧನೆ– ನೆಲ್ಲಿಕಾಯಿಯ ಪೌಷ್ಟಿಕ ಮೌಲ್ಯವರ್ಧಿತ ಉತ್ಪನ್ನಗಳು
  – ಶೃತಿ ನಾಯಕ ಮತ್ತು ಪ್ರತಿಭಾ ಹೆಚ್. ದೇವರಮನೆ 24–25
- ಪ್ರಶ್ನೋತ್ತರ ಅಂಕಣ– ಡಾ. ನಾಗರಾಜಪ್ಪ ಅಡಿವಪ್ಪರ್ 25
- ನಮ್ಮ ಸಂಸ್ಥೆ–ಧಾರವಾಡದ ಕೃಷಿ ಮಹಾವಿದ್ಯಾಲಯಕ್ಕೆ ಅಮೃತ ಮಹೋತ್ಸವದ ಸಂಭ್ರಮ
  – ಬಸವರಾಜ ಬೀರಣ್ಣವರ ಮತ್ತು ಮಲ್ಲಿಕಾರ್ಜುನ ಎಂ. ಸಿ. 26
- ಒಂದೆಲಗ: ಮೂಲವೊಂದು ಉಪಯೋಗ ಹಲವು
  – ಸುಷ್ಮ ಎನ್. ಮತ್ತು ರವಿ ಸಿ. ಎಸ್. 27–28
- ಜೇನು ಹುಳು ಹಾಗೂ ಜೇನು ಮೇಣ ಭಕ್ಷಕ ಹಕ್ಕಿಗಳು
  – ಎಂ. ಮಂಜುನಾಥ 29–30
- ಬೇಬಿ ಕಾರ್ನ್
  – ಶಿಲ್ಪಾ ಹೆಚ್. ಡಿ., ಸುರೇಶ್ ನಾಯ್ಕ ಕೆ. ಪಿ. ಮತ್ತು ಚೈತ್ರ ಜೆ. 31–32
- ಮಿಡಿತ ತುಡಿತ

ತೆಂಗಿನ ತೋಟದಲ್ಲಿ ನೀರಿನ ಸಮರ್ಪಕ ನಿರ್ವಹಣೆ

ಸುರೇಶ್ ನಾಯ್ಕ ಕೆ. ಪಿ., 9986409430, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಹೊನ್ನವಿಲೆ

ತೆಂಗು ದೇಶದ ವಾಣಿಜ್ಯ ಬೆಳೆಗಳಲ್ಲಿ ಪ್ರಮುಖವಾದ ತೋಟದ ಬೆಳೆ. ಈ ಬೆಳೆಯ ಪ್ರತಿಯೊಂದು ಭಾಗವು ಉಪಯೋಗವಾಗುವುದರಿಂದ ಇದನ್ನು ಕಲ್ಪ ವೃಕ್ಷವೆಂದು ಕರೆಯಲಾಗುತ್ತಿದೆ. ತೆಂಗಿನ ಮರ ನೆಟ್ಟ ಸಮಯದಿಂದ ಉತ್ತಮವಾದ ಆರೈಕೆ ಮಾಡಿದರೆ, ಬೇಗನೆ ಹಾಗೂ ಜೀವನ ಪರ್ಯಂತ ಉತ್ತಮ ಇಳುವರಿ ದೊರೆಯುತ್ತದೆ. ಆಧುನಿಕ ಬೇಸಾಯ ಪದ್ಧತಿಗಳಲ್ಲಿ ಒಂದಾದ ಸಮರ್ಪಕ ನೀರಿನ ನಿರ್ವಹಣೆಯಿಂದ ಉತ್ತಮ ಇಳುವರಿ ಪಡೆಯಬಹುದು. ತೆಂಗಿನ ಮರಕ್ಕೆ ನೀರು ಕಡಿಮೆಯಾದರೆ ಎಲೆಗಳ ಗಾತ್ರ ಕಿರಿದಾಗುವುದು, ಎಲೆಗಳ ಸಂಖ್ಯೆ ಕಡಿಮೆಯಾಗುವುದು. ಎಲೆಗಳು ಬೇಗನೆ ಒಣಗಿ ಹೋಗುವುದು. ಹೂ ಗೊಂಚಲುಗಳ ಸಂಖ್ಯೆ ಕಡಿಮೆಯಾಗುವುದು. ಎಳೆಯ ಕಾಯಿ ಉದುರುವಿಕೆ ಹೆಚ್ಚಾಗುವುದು ಹಾಗೂ ಕೊಬ್ಬರಿ ಇಳುವರಿ ಕಡಿಮೆಯಾಗುವುದು. ಆದುದರಿಂದ ತೆಂಗಿಗೆ ನೀರನ್ನು ಸಮರ್ಪಕವಾಗಿ ಕೊಡುವುದು ತುಂಬಾ ಅಗತ್ಯವಾಗಿದೆ.

ನೀರಾವರಿ ಪದ್ಧತಿಗಳು

1. ಹಾಯಿ ನೀರಾವರಿ (Flood irrigation): ಈ ಪದ್ಧತಿಯಲ್ಲಿ ಕಾಲುವೆಯಿಂದ ತೋಟಕ್ಕೆ ನೀರನ್ನು ಹಾಯಿಸಲಾಗುವುದು. ಈ ಪದ್ಧತಿಯಲ್ಲಿ ನೀರು ಸಮಾನವಾಗಿ ತೋಟದಲ್ಲಿ ನೆನೆಯುವುದಿಲ್ಲ. ಇದರಿಂದ ಗಣನೀಯ ಪ್ರಮಾಣದ ನೀರು ಜಮೀನಿನ ಕೆಳಭಾಗದಲ್ಲಿ ಮತ್ತು ಮಣ್ಣಿನ ಮೇಲ್ಮೈನಲ್ಲಿ ಸಂಗ್ರಹವಾಗುತ್ತದೆ ಅಥವಾ ಮೇಲ್ಮೈನಿಂದಲೇ ನೀರು ಬಸಿದು ನಷ್ಟವಾಗುತ್ತದೆ.

2. ಸುತ್ತು ಪಾತಿ ನೀರಾವರಿ (Basin irrigation): ಈ ವಿಧಾನದಲ್ಲಿ ಗಿಡದ ಸುತ್ತ ಬುಡದಿಂದ 1 ರಿಂದ 2 ಮೀ. ವ್ಯಾಸದ ಪಾತಿಯನ್ನು ಮಾಡಿ ಕಾಲುವೆಗಳ ಮುಖಾಂತರ ನೀರನ್ನು ಕೊಡಬೇಕು. ಈ ರೀತಿ ಕಾಲುವೆಗಳ ಮುಖಾಂತರ ನೀರನ್ನು ಕೊಡುವುದರಿಂದ ಕಾಲುವೆ ಮಾಡಲು ಭೂಮಿಯು ವ್ಯರ್ಥವಾಗುತ್ತದೆ ಹಾಗೂ ಪ್ರತಿ ಶೇ. 30ರಷ್ಟು ನೀರು ಕಾಲುವೆಗಳಲ್ಲಿ ವ್ಯರ್ಥವಾಗುವುದನ್ನು ತಡೆಯಲು ಪಾತಿಗೆ ನೇರವಾಗಿ ಪ್ಲಾಸ್ಟಿಕ್ ಪೈಪುಗಳ ಮುಖಾಂತರ ನೀರು ಹಾಯಿಸಿದರೆ ನೀರು ಪೋಲಾಗುವುದನ್ನು ತಡೆಗಟ್ಟಬಹುದು.

3. ತುಂತುರು ನೀರಾವರಿ (Sprinkler/ perfo irrigation): ಈ ಪದ್ಧತಿಯಲ್ಲಿ ನೀರನ್ನು ಮಳೆಯ ರೂಪದಲ್ಲಿ ಬೆಳೆಯ ಮೇಲೆ ಕೊಡಲಾಗುತ್ತದೆ. ಕೃತಕ ಮಳೆಯ ಪ್ರಮಾಣವು ಮಣ್ಣಿನ ನೀರು ಇಂಗುವಿಕೆಯ ಪ್ರಮಾಣಕ್ಕಿಂತ ಕಡಿಮೆ ಇರುವಂತೆ ನೋಡಿ ಕೊಳ್ಳುವುದರಿಂದ, ಜಮೀನಿನ ಮೇಲ್ಮೈನಲ್ಲಿ ನೀರು ಹೊರ ಹರಿಯುವುದಿಲ್ಲ. ಈ ಪದ್ಧತಿಯು ತೆಂಗಿನಲ್ಲಿ ಮಿಶ್ರ ಬೆಳೆ/ಅಧಿಕ ಸಾಂಧ್ರತೆಯ, ಬಹು ಬೆಳೆಯ ಪದ್ಧತಿಯನ್ನು ಅನುಸರಿಸಿದಾಗ ತುಂತುರು ನೀರಾವರಿ ಉಪಯೋಗಿಸಿದರೆ, ನೀರನ್ನು ಸಮರ್ಪಕ ರೀತಿಯಲ್ಲಿ ಉಪಯೋಗಿಸಬಹುದು.

4. ಹನಿ ನೀರಾವರಿ (Drip irrigation): ಉಳಿತಾಯ ಹಾಗೂ ಅಧಿಕ ಇಳುವರಿ ಪಡೆಯುವ ದೃಷ್ಟಿಯಲ್ಲಿ ಮಹತ್ತರವಾದ ಅಭಿವೃದ್ಧಿ ಸಾಧಿಸಲು ಈ ವಿಧಾನದಿಂದ ಸಾಧ್ಯವಾಗಿದೆ. ಈ ವಿಧಾನದಲ್ಲಿ ಬೇರಿನ ವಲಯವನ್ನು ಭಾಗಶಃ ನೆನೆಯುತ್ತದೆ. ಆದರೆ ಗಿಡದ ಬೆಳವಣಿಗೆಗೆ ಬೇಕಾದ ನೀರನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿ ದಿನ ಕೊಡುವಂತೆ ಏರ್ಪಾಡು ಮಾಡಲಾಗಿರುತ್ತದೆ. ಈ ವಿಧಾನದಲ್ಲಿ ತೆಂಗಿನ ಬುಡದ ಪ್ರತಿಶತ 15 ರಿಂದ 20ರಷ್ಟು ಭಾಗ ಮಾತ್ರ ತೇವಾಂಶವಾಗಿ, ಗಿಡಗಳಿಗೆ ಬೇಕಾದ ನೀರನ್ನು ಕೊಡಬಹುದು.

ಹನಿ ನೀರಾವರಿಯ ಅನುಕೂಲಗಳು: ಸವಳು ನೀರನ್ನು ನೀರಾವರಿಗೆ ಬಳಸಬಹುದು. ಇಳಿಜಾರು ಹಾಗೂ ಏರು ತಗ್ಗಿನ ಜಮೀನಿಗೆ ಸೂಕ್ತ, ನೀರಿನ ಮಿತ್ರ ಬಳಕೆ, ಇಳುವರಿಯಲ್ಲಿ ಹೆಚ್ಚಳ, ಬೆಳೆ ಉತ್ಪನ್ನಗಳ ಸುಧಾರಿತ ಗುಣಮಟ್ಟ, ನೀರಿನ ಸಮರ್ಪಕ ಬಳಕೆ, ಕಡಿಮೆ ಕಳೆಗಳ ಬೆಳವಣಿಗೆ, ನಿರುಪಯುಕ್ತ ಜಮೀನಿನಲ್ಲೂ ಲಾಭದಾಯಕ, ಸರಾಗ ಬೇಸಾಯ, ಸಹಜ ಕೃಷಿಗೆ ನೆರವಾಗುತ್ತದೆ.

ಹನಿ ನೀರಾವರಿಯಲ್ಲಿ ಪ್ರತಿ ದಿನವೂ, ಬೆಳೆಗೆ ಬೇಕಾದ ಪ್ರಮಾಣದಲ್ಲಿ ನೀರನ್ನು ಕೊಡುವುದರಿಂದ ತೇವಾಂಶವು ಹೆಚ್ಚಿನ ಬಿಗಿತವಿಲ್ಲದೇ ಬೆಳೆಗೆ ಒಂದೇ ಸಮನೆ ದೊರೆಯುವುದರಿಂದ ಯಾವುದೇ ಕಾಲದಲ್ಲಿ ನೀರಿನ ಕೊರತೆಯು ಇಲ್ಲದಂತಾಗುತ್ತದೆ. ಹನಿ ನೀರಾವರಿಯ ಮೂಲಕ ರಸಗೊಬ್ಬರಗಳನ್ನು ತೆಂಗಿಗೆ ಕೊಡುವ ಅವಕಾಶವೂ ಇರುವುದರಿಂದ ನೀರಿನ ಮೂಲಕ ರಸಗೊಬ್ಬರಗಳನ್ನು ಕೊಟ್ಟಾಗ ಪೋಷಕಾಂಶಗಳು ಉತ್ತಮ ದೊರೆಯುವಿಕೆ, ಕಡಿಮೆ ನಷ್ಟವಾಗುವುದು. ಬೆಳೆಯ ಅವಶ್ಯಕತೆಗಳಿಗುಣವಾಗಿ ವಿವಿಧ ಹಂತಗಳಲ್ಲಿ ರಸಗೊಬ್ಬರಗಳನ್ನು ಕೊಡಲು ಅವಕಾಶವಾಗುತ್ತದೆ. ಬೇರಿಗೆ ಹಾನಿಯಾಗದೇ ರಸಗೊಬ್ಬರ ಕೊಡಲು ಅವಕಾಶ ಮತ್ತು ಇವುಗಳಿಂದ ರಸಗೊಬ್ಬರಗಳ ಸಮರ್ಪಕತೆ ಹೆಚ್ಚುತ್ತದೆ.

ನೀರಿನ ಸಮರ್ಪಕ ನಿರ್ವಹಣೆ: ತೆಂಗಿನ ವಿವಿಧ ಬೆಳವಣಿಗೆಯ ಹಂತದಲ್ಲಿ ನೀರಿನ ನಿರ್ವಹಣೆ ಈ ಮುಂದೆ ವಿವರಿಸಲಾಗಿದೆ.

1. ತೆಂಗಿನ ಸಸಿಮಡಿಗಳಲ್ಲಿ ನೀರಿನ ನಿರ್ವಹಣೆ: ಬೀಜದ ತೆಂಗಿನ ಕಾಯಿಗಳನ್ನು ಜೂನ್–ಜುಲೈನಲ್ಲಿ ನೆಡುವುದು. ನೆಟ್ಟ 5 ತಿಂಗಳ ಒಳಗೆ ಕಾಯಿಗಳು ಮೊಳಕೆ ಒಡೆದಿರಬೇಕು. 5 ತಿಂಗಳ ನಂತರ ಮೊಳಕೆ ಒಡೆದ ಕಾಯಿಗಳು ಸೂಕ್ತವಲ್ಲ. ನವೆಂಬರ್‌ನಿಂದ ಮೇವರೆಗೆ ಮರಳು ಭೂಮಿಯಲ್ಲಿ ಎರಡು ದಿನಕ್ಕೊಮ್ಮೆ ಹಾಗೂ ಮರಳು ಮಿಶ್ರಿತ ಜೇಡಿ ಮಣ್ಣು ಮತ್ತು ಕೆಂಪು ಮಣ್ಣು ಭೂಮಿಯಲ್ಲಿ 4 ದಿನಕ್ಕೊಮ್ಮೆ ನೀರನ್ನು ಕೊಡುವುದು ಸೂಕ್ತ.

2. ಮೊದಲ ನಾಲ್ಕು ವರ್ಷದ ಗಿಡಗಳಿಗೆ ನೀರಿನ ನಿರ್ವಹಣೆ: ಈ ಸಮಯದಲ್ಲಿ ಗಿಡಗಳ ಬೇರಿನ ಬೆಳವಣಿಗೆ ನಿಧಾನವಾಗುವುದರಿಂದ ಸುತ್ತ ಪಾತಿ ವಿಧಾನ ಅನುಸರಿಸಿದಾಗ ಎರಡು ದಿನಕ್ಕೊಮ್ಮೆ ನೀರು ಕೊಡುವುದು. ಮೊದಲ ಎರಡು ವರ್ಷದವರೆಗೆ ಸಸಿಗಳಿಗೆ ಅವುಗಳ ಬುಡದಲ್ಲಿ ಒಂದು ಮೀಟರ್ ವೃತ್ತಾಕಾರದಲ್ಲಿ ಪಾತಿಯನ್ನು ಮಾಡಿ, 2 ದಿನಕ್ಕೊಮ್ಮೆ ಪ್ರತಿ ಗಿಡಕ್ಕೆ 25–30 ಲೀಟರ್ ನೀರನ್ನು ಒದಗಿಸಬೇಕು. 3 ಮತ್ತು 4ನೇ ವರ್ಷದ ಗಿಡಗಳಿಗೆ 4 ದಿನಕ್ಕೊಮ್ಮೆ 75–60 ಲೀಟರ್ ನೀರನ್ನು ಒದಗಿಸಬೇಕಾಗುತ್ತದೆ.

ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವುದಾದರೆ, ಒಂದು ಮತ್ತು ಎರಡು ವರ್ಷದ ಗಿಡಗಳಿಗೆ ಬುಡದಿಂದ 50 ಸೆಂ. ಮೀ. ದೂರದಲ್ಲಿ ವಿರುದ್ಧ ದಿಕ್ಕಿನಲ್ಲಿ ಎರಡು ಹನಿ ಸಾಧನಗಳನ್ನು ಅಳವಡಿಸಿ, ಗಂಟೆಗೆ 2 ಲೀಟರ್ ದರದಲ್ಲಿ 4 ಗಂಟೆ ಸಮಯ ನೀರನ್ನು ಬಿಡಬೇಕು. ಮೂರು ಮತ್ತು ನಾಲ್ಕನೇ ವರ್ಷದ ಗಿಡಗಳಿಗೆ, ಗಿಡದ ಬುಡದಿಂದ 75 ಸೆಂ.ಮೀ. ಅಂತರದಲ್ಲಿ ಮೂರು ಹನಿ ಸಾಧನಗಳನ್ನು ಅಳವಡಿಸಬೇಕು. ಗಂಟೆಗೆ 2 ಲೀ. ದರದಲ್ಲಿ ಇಟ್ಟು 3 ಗಂಟೆಗಳ ಸಮಯ ನೀರನ್ನು ಕೊಡಬೇಕಾಗುತ್ತದೆ.

3. ನಾಲ್ಕು ವರ್ಷದ ನಂತರದ ಪ್ರಾಯದ ಗಿಡಗಳಿಗೆ ನೀರಿನ ನಿರ್ವಹಣೆ: ಪ್ರಾಯದ ಗಿಡವು ತಿಂಗಳಿಗೆ ಒಂದು ಗರಿಯನ್ನು ಹಾಗೂ ಒಂದು ಹೂ ಗೊಂಚಲನ್ನು ಬಿಡುತ್ತದೆ. ಆದ್ದರಿಂದ ಒಂದು ತೆಂಗಿನ ಗಿಡದಲ್ಲಿ ವಿವಿಧ ಗಾತ್ರದ ತೆಂಗಿನ ಕಾಯಿಗಳು ವರ್ಷವಿಡಿ ದೊರೆಯುತ್ತವೆ. ಪ್ರಾಯದ ಗಿಡದಲ್ಲಿ, ಗಿಡದ ಬುಡದಿಂದ 2 ಮೀಟರ್ ವೃತ್ತಾಕಾರದಲ್ಲಿ, ಪ್ರತಿಶತ 80ರಷ್ಟು ಬೇರುಗಳು ಕಾರ್ಯ ಪ್ರವೃತ್ತ ಬೇರುಗಳಿರುತ್ತವೆ. ಆದ್ದರಿಂದ 2 ಮೀ. ವೃತ್ತಾಕಾರದಲ್ಲಿ ಪಾತಿಯನ್ನು ಮಾಡಿ, 4 ದಿನಕ್ಕೊಮ್ಮೆ 200–250 ಲೀಟರ್‌ನಷ್ಟು ನೀರನ್ನು ಕೊಡಬೇಕು.

ಹನಿ ನೀರಾವರಿಯನ್ನು ಅನುಸರಿಸಿದಾಗ ಗಿಡದ ಬುಡದಿಂದ ಒಂದು ಮೀ. ಅಂತರದಲ್ಲಿ 4 ಸಮನಾಂತರ ಸ್ಥಳಗಳಲ್ಲಿ ಒಂದು ಘನ ಅಡಿಯ ಗುಂಡಿಗಳನ್ನು ಮಾಡಿ, ಅದರಲ್ಲಿ ಒಂದು ಅಡಿ ಉದ್ದನೆಯ ಪಿ.ವಿ.ಸಿ. ಪೈಪ್ ಅನ್ನು ಇಟ್ಟು ಗುಂಡಿಗಳನ್ನು ತೆಂಗಿನ ನಾರಿನಿಂದ ಅಥವಾ ಒಣಗಿದ ಹುಲ್ಲಿನಿಂದ ಮುಚ್ಚಬೇಕು. ತೇವಾಂಶವನ್ನು ಸಂರಕ್ಷಿಸಲು ತೆಂಗಿನ ಬುಡದಲ್ಲಿ ತೆಂಗಿನ ನಾರಿನ ಹುಡಿಯನ್ನು ಅಥವಾ ಗರಿಗಳನ್ನು ಹರಡಬೇಕು. ಈ ರೀತಿ ಮಾಡುವುದರಿಂದ ನೀರು ಸುಲಭವಾಗಿ ದೊರೆತು ಭೂಮಿಯಿಂದ ಆವಿಯಾಗುವುದನ್ನು ತಡೆಯಬಹುದು. ಹನಿ ಸಾಧನಗಳನ್ನು ಈ ನಾಲ್ಕು ಪಿ.ವಿ.ಸಿ ಪೈಪನ್ನು ಅಳವಡಿಸಿ, ಪ್ರತಿ ಹನಿ ಸಾಧನದಿಂದ 2 ಲೀಟರ್ ಪ್ರಮಾಣದಲ್ಲಿ 2 ಗಂಟೆಗಳ ಕಾಲ ನೀರನ್ನು ಬಿಡಬೇಕು. ಹನಿ ನೀರಾವರಿ ಸಾಧನವನ್ನು ಅಳವಡಿಸಿ ನೀರು ಹಾಯಿಸುವುದರಿಂದ ಪ್ರತಿ ಶತ 25 ರಷ್ಟು ಬೇರಿನ ವಲಯ ಪ್ರತಿ ದಿನ ಪಡೆದು, ಗಿಡದ ಬೆಳವಣಿಗೆ ಹಾಗೂ ಫಲವತ್ತತೆಯನ್ನು ಹೆಚ್ಚಿಸುತ್ತದೆ. ನೀರು ಕಡಿಮೆ ಇರುವ ಪ್ರದೇಶದಲ್ಲಿ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವುದರಿಂದ ಕಡಿಮೆ ನೀರಿನಲ್ಲಿ ಹೆಚ್ಚಿನ ಗಿಡಗಳಿಗೆ ನೀರನ್ನು ಕೊಡಬಹುದು. ಮಣ್ಣಿನ ತೇವಾಂಶವನ್ನು ಕಾಪಾಡಿಕೊಂಡು ಬರಲು ತೆಂಗಿನ ಚಿಪ್ಪುಗಳನ್ನು ಮಣ್ಣಿನಲ್ಲಿ ಹೂಳಬಹುದು ಅಥವಾ ಮಣ್ಣಿನ ಮೇಲೆ ಹೊದಿಕೆಯಾಗಿ ಹಾಕಬಹುದು. ತೆಂಗಿನ ನಾರು ದೊರೆಯುವ ಪ್ರದೇಶದಲ್ಲಿ ಅದನ್ನು ತೆಂಗಿನ ಬುಡದಲ್ಲಿ ಹರಡುವುದರಿಂದ ನೀರಿನ ಆವಿಯನ್ನು ತಪ್ಪಿಸಬಹುದು.

4. ನೀರಾವರಿ ಮೂಲಕ ರಾಸಾಯನಿಕ ಗೊಬ್ಬರ ನೀಡಿಕೆ: ಸಾಮಾನ್ಯವಾಗಿ ರಾಸಾಯನಿಕ ಗೊಬ್ಬರಗಳನ್ನು ಅಥವಾ ಪುಡಿಯ ರೂಪದಲ್ಲಿ ಎರಚುವ ಪದ್ಧತಿ ರೂಢಿಯಲ್ಲಿರುತ್ತದೆ. ಈ ರೀತಿಯ ಪದ್ಧತಿಗಳಲ್ಲಿ ಹಾಕಿದ ಗೊಬ್ಬರವು ಮಳೆಯ ನೀರಿನಲ್ಲಿ ಕೊಚ್ಚಿ ಹೋಗಬಹುದು. ಭೂಮಿಯಲ್ಲಿ ಬಸಿದು ಹೋಗಬಹುದು ಅಥವಾ ವಾತಾವರಣದಲ್ಲಿ ಆವಿ ಆಗಬಹುದು. ಯೂರಿಯಾ, ಅಮೋನಿಯಾ, ನೈಟ್ರೇಟ್ ರೂಪದ ಗೊಬ್ಬರಗಳನ್ನು ಹಾಕುವುದರಿಂದ ಬಸಿದು ಹೋಗುವಿಕೆಯನ್ನು ಈಗಾಗಲೇ ಸಂಶೋಧನೆ ಮೂಲಕ ದೃಢಪಡಿಸಲಾಗಿದೆ.

ರಾಸಾಯನಿಕ ಗೊಬ್ಬರದ ಮೂಲಕ ನೀರಾವರಿಯ ಅನುಕೂಲಗಳು: ಬೇರಿನ ವಲಯದಲ್ಲಿ ಉತ್ತಮ ತೇವಾಂಶವಿರುವುದರಿಂದ ಪೂರ್ಣ ಪ್ರಮಾಣದ ರಸಗೊಬ್ಬರದ ಬಳಕೆಯಾಗುತ್ತದೆ. ಮೇಲುಗೊಬ್ಬರ ಕೊಡುವಾಗ ಬೇರಿನ ವಲಯದಲ್ಲಿ ಆಗುವ ದುಷ್ಪರಿಣಾಮ ತಪ್ಪಿಸಬಹುದು. ಬೆಳೆಗೆ ಬೇಕಾದ ಹಂತದಲ್ಲಿ ಗೊಬ್ಬರವನ್ನು ಕೊಡಬಹುದು. ಗೊಬ್ಬರ ಹಾಕಲು ಬೇಕಾದ ಕೂಲಿಯ ಖರ್ಚನ್ನು ಉಳಿಸಬಹುದು. ಹೆಚ್ಚು ಗೊಬ್ಬರವನ್ನು ಬಳಸುವ ಬೆಳೆಗಳಲ್ಲಿ ರಾಸಾಯನಿಕ ನೀರಾವರಿ ಅಳವಡಿಸುವುದರಿಂದ ಶೇ. 25–20 ರಷ್ಟು ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಬಹುದು.

ಬಳಸುವ ವಿಧಾನ: ಹನಿ ನೀರಾವರಿ ಮೂಲಕ ರಾಸಾಯನಿಕ ಗೊಬ್ಬರದ ಮಿಶ್ರಣವನ್ನು ಕಲಸಲು ವೆಂಚುರಿಯನ್ನು ಅಳವಡಿಸುವುದು. ರಾಸಾಯನಿಕ ದ್ರಾವಣವಿರುವ ತೊಟ್ಟಿಯಲ್ಲಿ ಶೋಧಕ ಜಾಲರಿಯನ್ನು ಜೋಡಿಸಿ, ವೆಂಚುರಿಯ ಮೂಲಕ ರಾಸಾಯನಿಕ ದ್ರಾವಣವನ್ನು ಮುಖ್ಯ ಕೊಳವೆಯಲ್ಲಿ ಬರುವ ನೀರಿನ ಜೊತೆಗೆ ಮಿಶ್ರಣ ಮಾಡಬಹುದು. ರಸಗೊಬ್ಬರಗಳನ್ನು ಸಾಂದ್ರತೆ ವ್ಯತ್ಯಾಸವಿರುವ ಟ್ಯಾಂಕರ್‌ನಲ್ಲಿ ಕರಗಿಸಿ, ಮೈನ್ ಪೈಪಿನ ಮುಖಾಂತರ ಗಿಡಗಳಿಗೆ ಬಿಡಬಹುದು. ನಂತರ ಉಪ ಕೊಳವೆ ಹಾಗೂ ಕವಲು ಕೊಳವೆಗಳ ಮೂಲಕ ಹಾದು ಗಿಡದ ಬುಡಕ್ಕೆ ನೀರಿನ ಜೊತೆಗೆ ಸಸ್ಯಗಳಿಗೆ ಬೇಕಾದ ರಸಗೊಬ್ಬರಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಬಹುದು. ನೀರಾವರಿಯಲ್ಲಿ ಉಪಯೋಗಿಸುವ ಗೊಬ್ಬರಗಳು ನೀರಿನಲ್ಲಿ ಕರಗುವ ಗುಣವನ್ನು ಹೊಂದಿರಬೇಕು. ಸುಣ್ಣದಿಂದ ತಯಾರಾದ ಗೊಬ್ಬರಗಳನ್ನು ರಂಜಕಯುಕ್ತ ಗೊಬ್ಬರ ಹಾಗೂ ಗಂಧಕಯುಕ್ತ ಗೊಬ್ಬರಗಳೊಂದಿಗೆ ಬೆರಸಬಾರದು. ನೀರಿನಲ್ಲಿ ರಸಸಾರವನ್ನು (pH) ಪರಿವರ್ತಿಸಬಾರದು. ಈ ಪದ್ಧತಿಯಲ್ಲಿ ಪ್ರತಿ ತೆಂಗಿನ ಗಿಡಕ್ಕೆ ಶಿಫಾರಸ್ಸು ಮಾಡಿದ NPK ಗೊಬ್ಬರದಲ್ಲಿ ಪ್ರತಿಶತ 50ರಷ್ಟು ನೀಡುವುದರಿಂದ ಹೆಚ್ಚಿನ ತೆಂಗಿನ ಇಳುವರಿ ಪಡೆಯಬಹುದು. ರೈತರ ಅನುಕೂಲಕ್ಕೆ ತಕ್ಕಂತೆ ಹನಿ ನೀರಾವರಿ ಕೊಡುವ ತಿಂಗಳುಗಳಲ್ಲಿ ಗೊಬ್ಬರಗಳನ್ನು ತಿಂಗಳಿಗೊಮ್ಮೆ ಕೊಡುವುದರಿಂದ ಉತ್ತಮ ಇಳುವರಿ ಕಂಡುಬಂದಿರುತ್ತದೆ.

ಮಣ್ಣಿನ ಸವೆತ ಮತ್ತು ಅದರ ಸಂರಕ್ಷಣೆ

✍ ಮಲ್ಲಿಕಾ ಕೆ., 7795039261 ಮತ್ತು ಸಂಕಲ್ಪ ಸಿ. ಪಿ., ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ

ಬೆಳೆಗಳಿಗೆ ಮಣ್ಣು ಮತ್ತು ನೀರು ಅತಿ ಮುಖ್ಯವಾದ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಮನುಷ್ಯ ತನ್ನ ಎಲ್ಲಾ ದಿನನಿತ್ಯದ ಚಟುವಟಿಕೆಗಳು ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳಿಗೆ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಅವಲಂಬನೆ ಹೊಂದಿರುತ್ತಾನೆ. ಈ ನೈಸರ್ಗಿಕ ಸಂಪನ್ಮೂಲಗಳು ಇತ್ತೀಚಿನ ದಿನಗಳಲ್ಲಿ ಕ್ಷೀಣಿಸುತ್ತಿವೆ. ಇದಕ್ಕೆ ಮುಖ್ಯ ಕಾರಣ ಜನಸಂಖ್ಯೆ ಮತ್ತು ಮನುಷ್ಯನ ಅತಿಯಾದ ಆಸೆಯಿಂದ, ಮಣ್ಣಿನ ಸವೆತಕ್ಕೆ ಕಾರಣವಾಗಿದ್ದು, ನೀರು ಅಥವಾ ಗಾಳಿಯ ಪ್ರಭಾವವು ಮಣ್ಣಿನ ಕಣಗಳನ್ನು ಬೇರ್ಪಡಿಸಿದಾಗ ಮತ್ತು ತೆಗೆದುಹಾಕಿದಾಗ, ಮಣ್ಣು ಹದಗೆಡುತ್ತದೆ. ಸವೆತದಿಂದಾಗಿ ಮಣ್ಣಿನ ಫಲವತ್ತತೆ ಕಡಿಮೆಯಾಗಿ, ನೀರಿನ ಗುಣಮಟ್ಟ ಕಳಪೆಯಾಗುತ್ತ ಹೋಗುತ್ತದೆ. ಮಣ್ಣು ಒಂದು ಅಮೂಲ್ಯವಾದ ಸಂಪತ್ತು ಸುಮಾರು 1 ಸೆಂ.ಮೀ. ನಷ್ಟು ಮಣ್ಣು ಉತ್ಪಾದನೆ ಆಗಬೇಕಾದರೆ ಸುಮಾರು 300–1000 ವರ್ಷಗಳು ಬೇಕಾಗುತ್ತದೆ. ಇಂತಹ ಮಣ್ಣು ನಾಶವಾಗಲು ಒಂದು ದಿನ ಸುರಿಯುವ ಮಳೆ ಸಾಕು. ಪ್ರತಿ ವರ್ಷ ಹೆಕ್ಟೇರಿಗೆ 17 ಟನ್ ಸವಕಳಿ ಉಂಟಾಗುತ್ತದೆ.

ಮಣ್ಣಿನ ಸವಕಳಿ ಪ್ರಕಾರಗಳು

1. ನೈಸರ್ಗಿಕ ಸವಕಳಿ

ಮಳೆ ನೀರು, ಗಾಳಿ, ಹಿಮ ಇವುಗಳಿಂದ ಭೂಮಿಯ ಮೇಲ್ಭಾಗದ ಸಾರಯುಕ್ತ ಮಣ್ಣು ಕೊಚ್ಚಿಕೊಂಡು, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಹೋಗುತ್ತದೆ. ಮಣ್ಣಿನ ಉತ್ಪಾದನೆ ಮತ್ತು ಸವಕಳಿ ಸಮತೋಲನವಾಗಿದ್ದಾಗ ನೈಸರ್ಗಿಕವಾಗಿ ಭೂಮಿಯ ಫಲವತ್ತತೆಯ ಮೇಲೆ ಯಾವುದೇ ವ್ಯತಿರಿಕ್ತವಾದ ಪರಿಣಾಮ ಬೀರುವುದಿಲ್ಲ.

2. ಕೃತಕ ಸವಕಳಿ

ಮನುಷ್ಯ ಭೂಮಿಯ ಮೇಲೆ ಇರುವ ಗಿಡಮರಗಳನ್ನು ಅಂದರೆ ಅರಣ್ಯಗಳನ್ನು ನಾಶ ಮಾಡಿ ಅವೈಜ್ಞಾನಿಕವಾದ ಬೇಸಾಯ ಕ್ರಮಗಳನ್ನು ಕೈಗೊಂಡ ಮೇಲೆ ಭೂಮಿಯ ಸವಕಳಿಯು ಹೆಚ್ಚಾಗಿರುತ್ತದೆ. ಫಲವತ್ತಾದ ಮಣ್ಣು, ನೀರು ಮತ್ತು ಗಾಳಿಯ ಮುಖಾಂತರ ಸವಕಳಿಯಾಗುತ್ತಿದೆ. ಇದರಿಂದ ಭೂಮಿಯು ಫಲವತ್ತತೆ ಕಳೆದುಕೊಂಡು ಬಂಜರಾಗುತ್ತಿದೆ. ಈ ಸವಕಳಿ ಪ್ರಕಿಯೆಯಲ್ಲಿ ಗಾಳಿ ಮತ್ತು ನೀರು ಮಹತ್ತರವಾದ ಪಾತ್ರವಹಿಸುತ್ತದೆ. ಇವುಗಳು ಮಣ್ಣನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೊತ್ತೊಯ್ಯುತ್ತವೆ.

ನೀರಿನಿಂದಾಗುವ ಸವಕಳಿಗಳು

1. ಮಣ್ಣು ಸಿಡಿಯುವಿಕೆ ಸವಕಳಿ (Splash erosion)

ಮಳೆಯ ಹನಿಗಳು ಭೂಮಿಗೆ ಬಿದ್ದಾಗ ಮಣ್ಣಿನ ಕಣಗಳು ಒಂದಕ್ಕೊಂದು ಬೇರ್ಪಟ್ಟು ಚದರುತ್ತವೆ. ಈ ಪ್ರತ್ಯೇಕಗೊಂಡ ಕಣಗಳು ಮಣ್ಣಿನ ಮೇಲ್ಭಾಗದಲ್ಲಿ ಪಸರಿಸುತ್ತವೆ. ಈ ಕ್ರಿಯೆಯಿಂದ ಮಣ್ಣಿನ ರಚನೆಯು ನಷ್ಟವಾಗುತ್ತದೆ.



2. ತೆಳುಪದರು ಸವಕಳಿ (Sheet erosion)

ಮಳೆಯು ನಿರಂತರವಾಗಿ ಬರುತ್ತಿರುವಾಗ ಈ ಸವಕಳಿಯು ಸಿಡಿಯುವಿಕೆ ಸವಕಳಿಯ ನಂತರ ಆರಂಭವಾಗುತ್ತದೆ. ಮಣ್ಣಿನಲ್ಲಿ ನೀರನ್ನು ಇಂಗುವ ಸಾಮರ್ಥ್ಯ ಕಡಿಮೆ ಆದ ಮೇಲೆ ಮಳೆಯ ನೀರು ಹರಿಯಲು ಪ್ರಾರಂಭವಾಗುತ್ತದೆ. ಆಗ ನೀರಿನ ಜೊತೆಯಲ್ಲಿ ಮಣ್ಣಿನ ಒಂದೊಂದು ತೆಳುಪದರು ನಿರಂತರವಾಗಿ ಕೊಚ್ಚಿಕೊಂಡು ಹೋಗುತ್ತದೆ. ತೆಳು ಪದರು ಸವಕಳಿ ಪ್ರಕ್ರಿಯೆಯು ಬಹಳ ನಿಧಾನವಾಗಿ ನಡೆಯುತ್ತದೆ ಮತ್ತು ಇದು ಬಹಳ ಅಪಾಯಕಾರಿಯಾದ ಸವಕಳಿ ಇದನ್ನು ಬೇಸಾಯ ಕ್ರಮಗಳಿಂದ ಸರಿಪಡಿಸಬಹುದು.

3. ಝರಿ ಅಥವಾ ಸಣ್ಣ ಕೊರಕಲಿನ ಸವಕಳಿ (Rill erosion)

ಈ ಸವಕಳಿಯು ತೆಳುಪದರ ಸವಕಳಿ ನಂತರ ಉಂಟಾಗುತ್ತದೆ. ಬಿದ್ದಂತಹ ಮಳೆಯ ನೀರು ವಿವಿಧ ಭಾಗಗಳಿಂದ ಹರಿದು ನೀರಿನ ಜೊತೆಯಲ್ಲಿ ಮಣ್ಣನ್ನು ಎಳೆದು ತರುತ್ತದೆ. ಆಗ ಅಲ್ಲಲ್ಲಿ ಸಣ್ಣ ಸಣ್ಣ ಕೊರಕಲುಗಳಾಗಿ ಮಾರ್ಪಾಡಾಗುತ್ತದೆ. ಈ ಸವಕಳಿಯನ್ನು ಬೇಸಾಯ ಕ್ರಮಗಳಿಂದ ಸರಿಪಡಿಸಬಹುದು.

ಕಿಚ್ಚಿಗೆ ಇರುವೆ ಮುತ್ತೋಲ್ಲ, ನೀರಿಗೆ ಎಣ್ಣೆ ಸೇರೋಲ್ಲ!

4. ಬೃಹತ್ ಕೊರಕಲಿನ ಸವಕಳಿ (Gully erosion)

ಝರಿ ಅಥವಾ ಸಣ್ಣ ಕೊರಕಲಿನ ಸವಕಳಿಯು ಆದ ಜಾಗದಲ್ಲಿ ಯಾವುದೇ ಸಂರಕ್ಷಣೆ ಕ್ರಮಕೈಗೊಳ್ಳದಿದ್ದರೆ, ನೀರು ದೊಡ್ಡ ಪ್ರಮಾಣದಲ್ಲಿ ಹರಿದು ಅದರ ಕೊರೆಯುವ ಶಕ್ತಿಯನ್ನು ಹೆಚ್ಚಿಸಿ ದೊಡ್ಡ ದೊಡ್ಡ ಕೊರಕಲಾಗಿ ಮಾರ್ಪಾಡಾಗುತ್ತದೆ. ಈ ಸವಕಳಿಯನ್ನು ತಡೆಯದಿದ್ದರೆ ಕೊರಕಲುಗಳು ದಿನದಿಂದ ದಿನಕ್ಕೆ ಅಗಲ ಮತ್ತು ಆಳವಾಗಿ ಜಮೀನಿನಲ್ಲಿರುವ ಫಲವತ್ತಾದ ಮಣ್ಣು ನಶಿಸಿಹೋಗುತ್ತದೆ.

5. ಹಳ್ಳಗಳ ಸವಕಳಿ (Stream bank erosion)

ಈ ಸವಕಳಿಯಲ್ಲಿ ಕೊರಕಲುಗಳು ಅತೀ ಅಗಲ ಮತ್ತು ಆಳವಾಗಿ ಮಾರ್ಪಾಡಾಗಿ ಹಳ್ಳಗಳ ರೂಪದಲ್ಲಿ ನೀರು ಹರಿಯುತ್ತದೆ. ಈ ಸವಕಳಿಯು ಮಣ್ಣಿನ ಸಮೇತ ಅತೀ ವೇಗವಾಗಿ ನದಿ ಮತ್ತು ಸಮುದ್ರವನ್ನು ಸೇರುತ್ತದೆ.

ಮಣ್ಣಿನ ಸವಕಳಿಗೆ ಮುಖ್ಯ ಅಂಶಗಳು

1. ಮಳೆ 2. ಇಳುಕಲಿನ ಉದ್ದ ಮತ್ತು ಇಳುಕಲಿನ ಪ್ರಮಾಣ, 3. ಮಣ್ಣಿನ ಪ್ರಕಾರ, 4. ಸಸ್ಯಗಳು

ಸವಕಳಿಯ ಪರಿಣಾಮಗಳು

ಫಲವತ್ತತೆ ಕಡಿಮೆಯಾಗುತ್ತದೆ, ಉತ್ಪಾದನೆ ಮಟ್ಟ ಕುಸಿಯುತ್ತದೆ, ಅಂತರ್ಜಲ ಮಟ್ಟ ಕಡಿಮೆಯಾಗುತ್ತದೆ. ಕೆರೆ, ನದಿ ಮತ್ತು ಜಲಾಶಯಗಳಲ್ಲಿ ಹೂಳು ಅಥವಾ ಗೋಡು ತುಂಬಿಕೊಳ್ಳುವುದು, ನೀರಿನ ನಷ್ಟ ಉಂಟಾಗುತ್ತದೆ. ಪರಿಸರದಲ್ಲಿ ಅಸಮತೋಲನ ಉಂಟಾಗುತ್ತದೆ. ಕೃಷಿ ಮತ್ತು ಕುಡಿಯುವುದಕ್ಕೆ ನೀರಿನ ಸಮಸ್ಯೆ ಉಂಟಾಗುತ್ತದೆ ಕೃಷಿ ಜಮೀನು ಅನುಪಯುಕ್ತವಾಗುತ್ತದೆ.

ಗಾಳಿಯಿಂದಾಗುವ ಸವಕಳಿಗಳು (Wind erosion)

ಗಾಳಿಯಿಂದ ಮಣ್ಣಿನ ಕಣಗಳು ಬೇರ್ಪಡುತ್ತವೆ. ನಂತರ ಗಾಳಿಯಲ್ಲಿ ಸೇರಿಕೊಂಡು ಘರ್ಷಣೆ ಸಾಮರ್ಥ್ಯ ಅಧಿಕವಾಗಿ ಕಣಗಳು ಬೇರ್ಪಡುವ ಸಾಮರ್ಥ್ಯ ಹೆಚ್ಚಾಗುತ್ತದೆ.

ಕಣಗಳ ಚಲಿಸುವ ಕ್ರಿಯೆ (ಕಣಗಳ ಗಾತ್ರಕ್ಕೆ ಅನುಗುಣವಾಗಿ)

1. ಕಣಗಳ ಚಲನೆಯಿಂದಾಗುವ ಸವಕಳಿ (Suspension)

ಮಣ್ಣಿನ ಕಣಗಳ ಗಾತ್ರ 0.05 ಮಿ.ಮೀ. ಗಿಂತ ಕಡಿಮೆ ಇದ್ದಾಗ ಕಣಗಳು ಗಾಳಿಯಲ್ಲಿ ತೇಲುತ್ತಾ ಬಹುದೂರ ಸಾಗುತ್ತವೆ. ಗಾಳಿ ಸ್ಥಬ್ಧವಾದೊಡನೆ ಕಣಗಳು ನೆಲಕ್ಕೆ ಬೀಳುತ್ತವೆ. ಈ ಚಲನೆಯಿಂದ ಶೇ. 15–40 ರಷ್ಟು ಮಣ್ಣಿನ ಕಣಗಳು ಸ್ಥಳಾಂತರಗೊಳ್ಳುತ್ತವೆ.

2. ಕಣಗಳು ತೂರಿಹೋಗುವುದರಿಂದಾಗುವ ಸವಕಳಿ (Saltation)

ಮಣ್ಣಿನ ಕಣಗಳ ಗಾತ್ರ 0.1–0.5 ಮಿ.ಮೀ. ಇದ್ದು, ಕಣಗಳು ಗಾಳಿಯಲ್ಲಿ ಜಿಗಿಯುತ್ತಾ ಸಾಗುತ್ತವೆ. ಇದರಿಂದ ಶೇ. 50–70 ರಷ್ಟು ಮಣ್ಣಿನ ಕಣಗಳು ಸ್ಥಳಾಂತರಗೊಳ್ಳುತ್ತವೆ.

ಕಣಗಳು ದೂಡಿ ಒಯ್ಯುವುದರಿಂದಾಗುವ ಸವಕಳಿ (Surface creep)

ಮಣ್ಣಿನ ಕಣಗಳ ಗಾತ್ರ 0.5–2 ಮಿ.ಮೀ. ಇದ್ದು ಇವುಗಳು ಭೂಮಿಯ ಮೇಲೆ ತೆವಳುತ್ತಾ ಸಾಗುತ್ತವೆ. ಇದರಿಂದ ಶೇ. 5–25 ರಷ್ಟು ಮಣ್ಣಿನ ಕಣಗಳು ಸ್ಥಳಾಂತರಗೊಳ್ಳುತ್ತವೆ.

ಗಾಳಿಯ ಸವಕಳಿಯನ್ನು ತಡೆಯುವ ವಿಧಾನಗಳು

ಜಮೀನಿನ ಮೇಲೆ ಸಾವಯವ ಪದಾರ್ಥಗಳನ್ನು ಹರಡುವುದು. ಗಾಳಿಗೆ ಅಡ್ಡವಾಗಿ ಬೇಸಾಯ ಕ್ರಮಗಳನ್ನು ಅನುಸರಿಸುವುದು. ಒಣಗಿದ ಮಣ್ಣಲ್ಲಿ ಉಳುಮೆ ಮಾಡಬಾರದು. ಮಳೆ ಬಿದ್ದ ನಂತರ ಉಳುಮೆ ಮಾಡುವುದು. ಗಾಳಿಯನ್ನು ತಡೆಯುವ ಮರಗಳನ್ನು ಬೆಳೆಸುವುದು. ಅತಿಯಾದ ಮೇಯಿಸುವಿಕೆಯನ್ನು ತಪ್ಪಿಸುವುದು. ಬೆಳೆಗಳ ಸರದಿ ಕ್ರಮವನ್ನು ಬಳಸಿಕೊಂಡು ಭೂಮಿಯಲ್ಲಿ ಕೃಷಿ ಮಾಡುವುದು. ನೀರಿನ ಒಳನುಸುಳುವಿಕೆ ಪ್ರೋತ್ಸಾಹಿಸಿ ಮತ್ತು ನೀರು ಹರಿಯುವಿಕೆಯನ್ನು ಕಡಿಮೆಗೊಳಿಸುವುದು.

ಚಂದಾದಾರರ ಗಮನಕ್ಕೆ

ಚಂದಾದಾರರ ಪತ್ರಿಕೆ ಸಕಾಲದಲ್ಲಿ ತಲುಪದಿದ್ದಲ್ಲಿ, ಪ್ರತಿ ಪಡೆಯಲು ಆಯಾ ಸಂಚಿಕೆ ಕೊನೆಯೊಳಗೆ ದೂರು ಸಲ್ಲಿಸಬೇಕು. ನಂತರ ಬಂದ ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

94808 38218

editorucc@uahs.edu.in

ಉರಗಗಳು: ರೈತನ ಶತ್ರು ಅಲ್ಲ ಮಿತ್ರ !

✍ ಪೂರ್ಣಿಮಾ ಹೊಳೆಯಣ್ಣವರ, 9538445854 ಮತ್ತು ರವಿ ಪಾಟೀಲ, ಕೃಷಿ ಮಹಾವಿದ್ಯಾಲಯ, ಧಾರವಾಡ

ಹಾವುಗಳೆಂದರೆ (ಉರಗ) ಎಲ್ಲರಿಗೂ ಭಯವೇ ! ಹೀಗಾಗಿ ಹಾವುಗಳು ಕಂಡರೆ ದೂರ ಓಡುವವರೇ ಹೆಚ್ಚು. ಎಲ್ಲಾ ಹಾವುಗಳು ಅತ್ಯಂತ ಅಪಾಯಕಾರಿ ಮತ್ತು ವಿಷಕಾರಿ ಜೀವಿಗಳು ಎನ್ನುವುದು ನಮ್ಮ ಕಲ್ಪನೆ. ಹಾವುಗಳು ಸರೀಸೃಪ ಜಾತಿಗೆ ಸೇರಿದ ಪ್ರಾಣಿಗಳು. ಭಾರತದ ಜನರಲ್ಲಿ ಹಾವುಗಳ ಬಗ್ಗೆ ವಿಶೇಷ ನಂಬಿಕೆ, ಮೂಢನಂಬಿಕೆ, ಭಯ ಮತ್ತು ಭಕ್ತಿ ಎಲ್ಲವನ್ನೂ ಕಾಣಬಹುದು. ಹಾವುಗಳು ನಿಸರ್ಗದಲ್ಲಿಯ ಆಹಾರ ಸರಪಳಿಯ ಅತೀ ಮುಖ್ಯ ಕೊಂಡಿಯಾಗಿವೆ. ಎಲ್ಲಾ ಹಾವುಗಳು ಮಾಂಸಹಾರಿಯಾಗಿದ್ದು ಕೃಷಿ ಬೆಳೆ ಮತ್ತು ಉತ್ಪನ್ನಗಳನ್ನು ನಾಶಪಡಿಸುವ ಇಲಿಗಳನ್ನು ನಿಯಂತ್ರಿಸುತ್ತವೆ. ಹಾವುಗಳು ಪರಿಸರದಲ್ಲಿ ತನ್ನದೇ ಆದ ಮಹತ್ವ ಹೊಂದಿದ್ದು, ಪರಿಸರ ಸಮತೋಲನ ಕಾಪಾಡುವಲ್ಲಿ ಪ್ರಮುಖ ಜೀವಿಗಳಾಗಿವೆ.

ಹಾವುಗಳು ರೈತ ಸ್ನೇಹಿ ಎಂದರೆ ನಂಬುವಿರಾ?

ಹಾವುಗಳು ಪರಭಕ್ಷಕಗಳಾಗಿ ಇಲಿ, ಕಪ್ಪೆ, ಕೀಟಗಳು, ಹಕ್ಕಿಗಳ ಮೊಟ್ಟೆ, ಮರಿ ಸೇರಿದಂತೆ ಹಲವು ವೈವಿಧ್ಯಮಯ ಆಹಾರ ಪದ್ಧತಿ ಹೊಂದಿದ್ದು, ಕೊನೆಗೆ ಹದ್ದುಗಳು ಸೇರಿದಂತೆ ಹಲವು ಪ್ರಾಣಿಗಳಿಗೆ ತಾವೇ ಆಹಾರವಾಗಿ ನೈಸರ್ಗಿಕ ಆಹಾರ ಸರಪಳಿಯಲ್ಲಿ ಪ್ರಮುಖ ಕೊಂಡಿಯಾಗಿವೆ. ಹಾಗಾಗಿ ಜೀವವೈವಿಧ್ಯತೆಯ ರಕ್ಷಣೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಹಾವುಗಳು, ಇಲಿ ಮತ್ತು ಹೆಗ್ಗಣಗಳಂತ ದಂಶಕ ಪ್ರಾಣಿಗಳ ಪ್ರಮುಖ ಬೇಟೆಗಾರ ಪ್ರಾಣಿಯಾದ ಕಾರಣ ಇವುಗಳನ್ನು "ರೈತನ ಮಿತ್ರ" ಎಂತಲೂ ಕರೆಯುತ್ತಾರೆ. ಏಕೆಂದರೆ ಪ್ರತಿ ವರ್ಷ ಇಂತಹ ದಂಶಕಗಳಿಂದ ನಾಶವಾಗುವ ಕೃಷಿ ಬೆಳೆ ಮತ್ತು ಅದರ ಉತ್ಪನ್ನಗಳ ಪ್ರಮಾಣ ಎಷ್ಟೆಂದರೆ ಇದು ವರ್ಷಪೂರ್ತಿ ಸುಮಾರು 20 ಕೋಟಿ ಜನರಿಗೆ ಆಹಾರವನ್ನು ನೀಡಬಹುದೆಂದು ಅಂದಾಜಿಸಲಾಗಿದೆ. ದಂಶಕಗಳು ಬಹುತೇಕ ಎಲ್ಲಾ ಕ್ಷೇತ್ರದಲ್ಲಿ ಬೆಳೆ ಮತ್ತು ಜಾಗತಿಕ ಆಹಾರ ಭದ್ರತೆಯ ಮೇಲೆ ಪರಿಣಾಮ ಬೀರಿವೆ. ದಂಶಕ ಪ್ರಾಣಿಗಳು ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು, ತರಕಾರಿಗಳಂತಹ ಬೆಳೆಗಳು, ಎಣ್ಣೆಬೀಜಗಳ ಬೆಳೆಗಳ ಫಲ ಕೊಡುವ ಹಂತಗಳಲ್ಲಿ ಹಾನಿಮಾಡುತ್ತವೆ ಮತ್ತು ಅವು ಉತ್ಪಾದನೆಯ ಸಮಯದಲ್ಲಿ ವಾರ್ಷಿಕವಾಗಿ ಶೇ. 5–10 ರಷ್ಟು ನಷ್ಟಕ್ಕೆ ಕಾರಣವಾಗಿದೆ. ದಂಶಕಗಳ ಸಂಖ್ಯೆ ತಗ್ಗಿಸಲು ನೈಸರ್ಗಿಕ, ಪರಿಸರ ಸ್ನೇಹಿ ಮತ್ತು ಉಚಿತ ಸೇವೆಯನ್ನು ನೀಡುತ್ತಿರುವ ಹಾವುಗಳು ನಿಜವಾಗಿಯೂ "ರೈತರ ಸ್ನೇಹಿತರು". ಹಾಗಂತ, ಎಲ್ಲಾ ಹಾವುಗಳು ಅಪಾಯಕಾರಿಯಂತೇನಿಲ್ಲ. ಅದಕ್ಕೇ, ಅವುಗಳ ಬಗ್ಗೆ ನಾವು ತಳಿದುಕೊಳ್ಳಬೇಕು.

ಭಾರತವು ಹಾವುಗಳ ಕಡಿತದ ರಾಜಧಾನಿ!

ಜಾಗತಿಕವಾಗಿ ಹಾವುಗಳ ಕಡಿತದಿಂದ ಪ್ರತಿವರ್ಷ ಸುಮಾರು 27 ಲಕ್ಷ ಜನರು ಗಂಭೀರವಾದ ಗಾಯಗಳು ಅಥವಾ ಶಾಶ್ವತ ಅಂಗವೈಕಲ್ಯವನ್ನು ಅನುಭವಿಸುವದಲ್ಲದೇ ಸುಮಾರು 1,38,000 ಜನರು ಪ್ರತಿ ವರ್ಷ ಹಾವು ಕಡಿತದಿಂದ ಸಾಯುತ್ತಾರೆ. ಅದರಲ್ಲೂ, ಹಾವು ಕಚ್ಚುವಿಕೆಯ ಹೆಚ್ಚಿನ ಸಂಖ್ಯೆ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದಲ್ಲಿ ಕಂಡುಬರುತ್ತದೆ. ಭಾರತವನ್ನೊಳಗೊಂಡು ಏಷ್ಯಾದಲ್ಲಿ ಪ್ರತಿ ವರ್ಷ ಸುಮಾರು 20 ಲಕ್ಷ ಹಾವು ಕಡಿತದ ಪ್ರಕರಣಗಳು ಬಂದರೆ, ಆಫ್ರಿಕಾದಲ್ಲಿ ಸುಮಾರು 44 ರಿಂದ 58 ಲಕ್ಷಗಳು ಎಂದು ಅಂದಾಜಿಸಲಾಗಿದೆ. ದಕ್ಷಿಣ ಏಷ್ಯಾ ಖಂಡ ಜಾಗತಿಕ ಹಾವು ಕಡಿತದ ಸಾವಿನಲ್ಲಿ ಸುಮಾರು ಶೇ. 70 ರಷ್ಟು ಪಾಲಿದೆ.

ಇಡೀ ವಿಶ್ವದಲ್ಲೇ ಹಾವು ಕಡಿತದಿಂದ ಸಾವನ್ನಪ್ಪುವ ಪ್ರಕರಣಗಳು ಅತಿಹೆಚ್ಚು ದಾಖಲಾಗುವುದು ಭಾರತದಲ್ಲಿ! ಈ ಹಿನ್ನಲೆಯಲ್ಲಿ ಭಾರತವನ್ನು ಹಾವುಗಳ ಕಡಿತದ ರಾಜಧಾನಿ (Capital of snake bite) ಎಂತಲೂ ಕರೆಯುತ್ತಾರೆ. ಇತ್ತೀಚಿನ ಅಧ್ಯಯನ ವರದಿಯೊಂದರ ಪ್ರಕಾರ ಭಾರತದಲ್ಲಿ ಪ್ರತಿವರ್ಷ 2 ರಿಂದ 3 ಲಕ್ಷ ಜನ ಹಾವು ಕಡಿತಕ್ಕೆ ಗುರಿಯಾಗುತ್ತಿದ್ದು, ವಾರ್ಷಿಕವಾಗಿ ಸುಮಾರು 58,000 ಜನ ಹಾವು ಕಡಿತದಿಂದ ಸಾವನ್ನಪ್ಪುತ್ತಿದ್ದಾರೆ. ಇದೊಂದು ದೊಡ್ಡ ಸಂಖ್ಯೆ. ಇದರ ಜೊತೆಗೆ ಸಾವಿರಾರು ಜನ ಹಾವು ಕಡಿತದಿಂದ ಶಾಶ್ವತ ಅಂಗವಿಕಲತೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಹಾವು ಕಡಿತವನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಹಾಗೆಂದು ಕಂಡಕಂಡಲ್ಲಿ ಅವುಗಳನ್ನು ಕೊಲ್ಲುವುದಲ್ಲ. ಅವುಗಳಿಂದ ನಾವು ಹೇಗೆ ಸುರಕ್ಷಿತೆಯಿರಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕು.

ಹಾವು: ಪರಿಸರ ವ್ಯವಸ್ಥೆಯ ಎಂಜಿನಿಯರ್ ಇದ್ದಂತೆ

ಪ್ರಪಂಚದಾದ್ಯಂತ ಸುಮಾರು ಶೇ. 85–90 ರಷ್ಟು ಹಾವುಗಳು ವಿಷರಹಿತವಾಗಿವೆ ಎಂದರೆ ನಂಬುವಿರಾ? ಸಾಮಾನ್ಯವಾಗಿ ಹಾವುಗಳು ಆಕ್ರಮಣಕಾರಿ ಸ್ವಭಾವವನ್ನು ಹೊಂದಿರುವುದಿಲ್ಲ ಮತ್ತು ಕೇವಲ ತಮ್ಮ ರಕ್ಷಣೆಗಾಗಿ ಅಥವಾ ಬೆದರಿಕೆ ಒಡ್ಡಿದಾಗ ಮಾತ್ರ ಪ್ರಚೋದನೆಗೆ ಒಳಗಾಗಿ ಕಚ್ಚುತ್ತವೆ. ಜಾನುವಾರುಗಳಿಗೆ ಕೋಡು, ಬಾಲ ಮತ್ತು ಕಾಲುಗಳಿರುವುದರಿಂದ ತಮ್ಮ ರಕ್ಷಣೆಗಾಗಿ ಬಳಸುತ್ತವೆ. ಆದರೆ ಹಾವುಗಳಿಗೆ ಈ ಯಾವುದೂ ಇಲ್ಲ ! ಅದಕ್ಕೆ ಬಾಯಿಯಿಂದ ಕಚ್ಚುತ್ತವೆ. ಹಾವು ಕಡಿತದ ಭಯದಿಂದ ಹಾವುಗಳನ್ನು ಕೊಲ್ಲುವುದು ಸರಿಯಲ್ಲ. ಹಾವಿನ ಸಂಖ್ಯೆಯು ಕಡಿಮೆಯಾಗುವುದರಿಂದ ಪರಿಸರಕ್ಕೆ ಮಾತ್ರವಲ್ಲದೇ ಮನುಷ್ಯರಿಗೂ ಹಾನಿಕಾರಕವಾಗಿದೆ. ಹಾವುಗಳು ಪರಭಕ್ಷಕಗಳಾಗಿ, ಬೇಟೆಯಾಗಿ, ಪರಿಸರ ವ್ಯವಸ್ಥೆಯ ಎಂಜಿನಿಯರ್‌ಗಳಾಗಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತವೆ ಮತ್ತು ಹಾವಿನ ವಿಷದಿಂದ ಅನೇಕ ಅತ್ಯಮೂಲ್ಯ ಔಷಧಿಗಳನ್ನು ವೈದ್ಯಕೀಯ ಅಭ್ಯಾಸದಲ್ಲಿ ನಮ್ಮ ಆರೋಗ್ಯಕ್ಕೆ ಬಳಸಲಾಗುತ್ತದೆ. ಅಂತಲೇ ಪ್ರತಿವರ್ಷ ಅಕ್ಟೋಬರ್ 21 ರಂದು ರಾಷ್ಟ್ರೀಯ ಸರೀಸೃಪ ಜಾಗೃತಿ ದಿನ (National reptile awareness day) ಅಂಗವಾಗಿ ಉರಗಗಳ (ಹಾವುಗಳ) ರಕ್ಷಣೆಗಾಗಿ ಹಾಗೂ ಅವುಗಳ ಸಂತತಿಯನ್ನು ಉಳಿಸುವ ಸಲುವಾಗಿ ತಿಳುವಳಿಕೆ ಬೆಳೆಸಲು ಆಚರಿಸಲಾಗುತ್ತದೆ.

ಭಾರತದಲ್ಲಿ ಕಂಡುಬರುವ ವಿಷಕಾರಿ ಹಾವುಗಳಾವವು?

ನಮ್ಮ ದೇಶದಲ್ಲಿ ಸುಮಾರು 270 ಪ್ರಭೇದದ ಹಾವುಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಹೆಚ್ಚಿನವು ವಿಷಕಾರಿ ಅಲ್ಲ ಮತ್ತು ಕೇವಲ

ನಾಲ್ಕು ಜಾತಿಯ ಹಾವುಗಳು ಮಾತ್ರ ಮನುಷ್ಯನಿಗೆ ಅಪಾಯ ತರಬಲ್ಲಂತಹ ವಿಷಕಾರಿ ಹಾವುಗಳೆಂದರೆ ನಂಬುವಿರಾ? ಅವುಗಳು ನಾಗರ ಹಾವು (Cobra), ಕಟ್ಟು ಹಾವು (Common Krait), ಕೊಳಕು ಮಂಡಲ (Russell's viper), ಮತ್ತು ಗರಗಸ–ಹುರುಪೆಯ ಮಂಡಲ ಹಾವು (Saw-scaled viper). ಇವುಗಳನ್ನು ದೊಡ್ಡ ನಾಲ್ಕು ಹಾವು (Big Four) ಎಂದೂ ಕರೆಯುತ್ತಾರೆ. ಭಾರತದಲ್ಲಾಗುವ ಹಾವಿನ ಕಡಿತಗಳಲ್ಲಿ ಶೇ. 90 ರಷ್ಟು ಇದೇ ನಾಲ್ಕು ಹಾವುಗಳಿಂದ ಆಗಿರುತ್ತವೆ. ಯಾಕೆಂದರೆ ಇವು ಜನರ ವಸತಿ ಸ್ಥಾನದ ಸನಿಹದಲ್ಲಿ ವಾಸಿಸುತ್ತವೆ. ಆದ್ದರಿಂದಲೇ, ನಾವು ಇವುಗಳಿಂದ ಹೇಗೆ ಸುರಕ್ಷಿತವಾಗಿರಬೇಕು ಎಂದು ತಿಳಿದುಕೊಳ್ಳಲು ಅವುಗಳ ಬಗ್ಗೆ ಅರಿತುಕೊಳ್ಳಬೇಕು.

ನಾಲ್ಕು ವಿಷಕಾರಿ ಹಾವುಗಳು

1. ನಾಗರ ಹಾವು (Spectacled Cobra): ಭಾರತದಲ್ಲಿ ಕಂಡುಬರುವ ನಾಗರಹಾವು ತುಂಬಾ ವಿಷಕಾರಿ ಹಾವು. ಹಿಂದೂ ಧರ್ಮದಲ್ಲಿ ಇದನ್ನು ಪೂಜಿಸಲಾಗುತ್ತದೆ. ಭಾರತದ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ಈ ಹಾವುಗಳು ಸುಲಭವಾಗಿ ಕಾಣಿಸುತ್ತವೆ. ಅಗಲವಾದ ತಲೆ. ಕಂದು, ಹಳದಿ, ಬೂದು ಮತ್ತು ಕಪ್ಪು ಬಣ್ಣಗಳ ಮಿಶ್ರಿತ ಮಾದರಿಗಳು ಕಾಣಸಿಗುತ್ತವೆ. ಉದ್ರೇಕ ಇಲ್ಲವೇ ಕೋಪಗೊಂಡಾಗ ತನ್ನನ್ನು ತಾನು ರಕ್ಷಿಸಲು ತಲೆಯ ಭಾಗದ ಚರ್ಮವನ್ನು ಅಗಲಿಸಿ ಹೆಡೆಯನ್ನು ತೋರಿಸುತ್ತದೆ. ವಯಸ್ಕ ಹಾವಿನ ಉದ್ದವು 1 ಮೀ. ನಿಂದ 1.5 ಮೀ. ವರೆಗೆ ಇರುತ್ತದೆ. ಇದರ ಕಡಿತದಿಂದ ಮನುಷ್ಯ ಪಾರಾಗುವುದು ತುಂಬಾ ಕಷ್ಟ. ವಿಷವು ನರಗಳ ಅಂತರಗಳ ಮೇಲೆ ನೇರವಾಗಿ ಕಾರ್ಯನಿರ್ವಹಿಸುವುದರಿಂದ ಸ್ನಾಯುಗಳನ್ನು ಪಾರ್ಶ್ವವಾಯುವಿಗೆ ಒಳಪಡಿಸುತ್ತದೆ ಮತ್ತು ತೀವ್ರವಾದ ಉಸಿರಾಟದ ವೈಫಲ್ಯ ಅಥವಾ ಹೃದಯ ಸ್ತಂಭನಕ್ಕೆ ಕಾರಣವಾಗುತ್ತದೆ.

ಇವು ಕೃಷಿ ಭೂಮಿಯ ಪ್ರದೇಶದಲ್ಲಿ ಹಾಗೂ ದಟ್ಟ ಕಾಡುಗಳಲ್ಲಿ ಸಾಮಾನ್ಯವಾಗಿ ವಾಸಿಸುವ ಹಾವುಗಳು. ಹಗಲು ಮತ್ತು ರಾತ್ರಿಯಲ್ಲಿಯೂ ಚುರುಕಾಗಿರುವ ಹಾವು. ಕೃಷಿ ಭೂಮಿ ಮತ್ತು ಕಾಳು ಸಂಗ್ರಹಿಸುವ ಗೋದಾಮುಗಳಲ್ಲಿಯೂ ಕಾಣ ಸಿಗುತ್ತವೆ. ಗೆದ್ದಲು ಮಾಡಿರುವ ಹುತ್ತದಲ್ಲಿ ಅಥವಾ ಇಲಿಗಳ ಬಿಲದಲ್ಲಿ ಅಡಗಿರುತ್ತವೆ. ಆಹಾರಕ್ಕಾಗಿ ಮುಖ್ಯವಾಗಿ ಇಲಿ, ಕಪ್ಪೆ, ಹಕ್ಕಿಗಳು ಮತ್ತು ಇತರೆ ಹಾವುಗಳನ್ನು ತಿನ್ನುತ್ತವೆ. ಸಾಮ್ಯಾನವಾಗಿ ನಾಚಿಕೆ ಸ್ವಭಾವದ ಈ ಹಾವು ಕೆಣಕಿದಾಗ ಮಾತ್ರ ತನ್ನ ರಕ್ಷಣೆಗೆ ದೇಹದ ಮುಂದಿನ ಭಾಗವನ್ನು ಮೇಲೆತ್ತಿ ತಲೆಯ ಭಾಗವನ್ನು ಅಗಲಿಸಿ ಹೆಡೆಯನ್ನು ತೋರಿಸುತ್ತಾ ಹೆದರಿಸಲು ಪ್ರಯತ್ನಿಸುತ್ತದೆ. ಆಕಸ್ಮಿಕವಾಗಿ ಅಥವಾ ಅದನ್ನು ಹೊಡೆಯಲು ಹೋದರೆ ಮಾತ್ರ ಕಚ್ಚುತ್ತದೆ.

2. ಕಟ್ಟಾವು (Common krait): ಇದು ಭಾರತದ ಅತ್ಯಂತ ವಿಷಕಾರಿ ಹಾವು ಎಂದು ಪರಿಗಣಿಸಲಾಗಿದೆ. ವಯಸ್ಕ ಹಾವು ಸರಾಸರಿ 100 ಸೆಂ.ಮೀ. ಇರುತ್ತವೆ. ತೆಳುವಾದ ದೇಹ, ತಲೆ ಕುತ್ತಿಗೆಗಿಂತ ಸ್ವಲ್ಪ ಅಗಲವಾದದ್ದು. ದೇಹವು ಹೊಳೆಯುವ ಕಪ್ಪು ಅಥವಾ ಮಾಸಲು ನೀಲಿ–ಬೂದು, ಅಥವಾ ಕಂದು–ಮಿಶ್ರಿತ ಕಪ್ಪು. ದೇಹದ ಮೇಲೆ ಇರುವ ಬಿಳಿ ಬಣ್ಣದ ಅಡ್ಡಪಟ್ಟಿಗಳು ತಲೆ ಮತ್ತು ದೇಹದ ಮುಂಭಾಗದಲ್ಲಿ ಗೋಚರಿಸುವುದಿಲ್ಲ. ದೇಹದ ಮಧ್ಯಭಾಗದಲ್ಲಿ ತಲೆಯಿಂದ ಬಾಲದವರೆಗೆ ಅಗಲವಾದ ಭತುಷ್ಕೋನವಿರುವ ಹುರುಪೆಗಳನ್ನು ಕಾಣಬಹುದು.

ಇದು ವಿವಿಧ ರೀತಿಯ ಆವಾಸಸ್ಥಾನಗಳಲ್ಲಿ ವಾಸಿಸುತ್ತದೆ, ಹೊಲಗಳು ಮತ್ತು ಗೆದ್ದಲಿನ ದಿಬ್ಬಗಳು, ಇಟ್ಟಿಗೆಯ ರಾಶಿಗಳು, ಇಲಿಗಳ ಕುಳಿಗಳು ಮತ್ತು ಮನೆಗಳ ಒಳಭಾಗದಲ್ಲಿಯೂ ಕೂಡ ಇರುತ್ತದೆ. ಇದು ಆಗಾಗ್ಗೆ ನೀರಿನಲ್ಲಿ ಅಥವಾ ನೀರಿನ ಮೂಲದ ಸಮೀಪದಲ್ಲಿ ವಾಸಿಸುತ್ತದೆ. ರಾತ್ರಿ ಹೊತ್ತು ಬಹಳ ಚುರುಕಾಗಿರುತ್ತದೆ. ಆಹಾರಕ್ಕಾಗಿ ಇತರೆ ಹಾವುಗಳು, ಇಲಿ, ಕಪ್ಪೆ ಮತ್ತು ಹಲ್ಲಿಗಳನ್ನು ತಿನ್ನುತ್ತದೆ. ಇದರ ಒಂದು ಕಚ್ಚುವಿಕೆಯ ನಂತರ, ಒಂದೇ ಸಮಯದಲ್ಲಿ ಹೊರಬರುವ ವಿಷವು 60 ರಿಂದ 70 ಜನರನ್ನು ಕೊಲ್ಲುತ್ತದೆ. ಇದು ಕಚ್ಚಿದ ನಂತರ ಯಾವುದೇ ನೋವು ಇರುವುದಿಲ್ಲ ಆದರೆ ಸುಮಾರು 4–8 ಗಂಟೆಗಳ ನಂತರ ಸಾವು ಸಂಭವಿಸುತ್ತದೆ. ಅತೀ ತೀಕ್ಷ್ಣವಾದ ವಿಷವು ನರವ್ಯೂಹದ ಮೇಲೆ ಪ್ರಭಾವ ಬೀರಿ ನಿಶ್ಚೇತಗೊಳಿಸುತ್ತದೆ.

3. ಕೊಳಕು ಮಂಡಲ (Russell's Viper): ಭಾರತದಲ್ಲಿ, ಪಶ್ಚಿಮ ಕರಾವಳಿ ಮತ್ತು ಅದರ ಬೆಟ್ಟಗಳ ಉದ್ದಕ್ಕೂ ಮತ್ತು ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ ರಾಜ್ಯ ಮತ್ತು ಉತ್ತರದಿಂದ ಬಂಗಾಳದಲ್ಲಿ ಬಹಳ ಸಾಮಾನ್ಯವಾಗಿದೆ. ವಯಸ್ಕ ಹಾವು ಸರಾಸರಿ 100 ಸೆಂ.ಮೀ. ವರೆಗೆ ಬೆಳೆಯಬಲ್ಲದು. ದಪ್ಪ ಶರೀರ. ಒರಟಾದ ವೈ ಚರ್ಮವನ್ನು ಹೊಂದಿದೆ. ಕುತ್ತಿಗೆಗಿಂತ ಅಗಲವಾದ ತ್ರಿಕೋನಕಾರದ ತಲೆ. ಚಿಕ್ಕ ಮತ್ತು ತೆಳುವಾದ ಬಾಲ. ಕಂದು ಅಥವಾ ಹಳದಿ–ಮಿಶ್ರಿತ ಕಂದು, ಬೂದು–ಕೆಂಪು ಬಣ್ಣಗಳಲ್ಲಿ ಇರುತ್ತದೆ. ದೇಹದ ಉದ್ದಕ್ಕೂ ಕಂದು ಅಥವಾ ಕಪ್ಪು ಬಣ್ಣದ ಅಂಡಾಕೃತಿಯ/ಗುಂಡಗಿರುವ ಮಚ್ಚೆಗಳ ಸಾಲು. ಸಾಮಾನ್ಯವಾಗಿ ಹಗಲಿನಲ್ಲಿ, ಉಷ್ಣತೆ ಹೆಚ್ಚಾಗಿರುವ ವೇಳೆಯಲ್ಲಿ, ಮುಳ್ಳುಪೊದರು, ಬಿದಿರು ಮೆಳೆಗಳು ಇದರ ಮೆಚ್ಚಿನ ತಾಣಗಳು. ಮಂಡಲ ಹಾವಿನ ಪ್ರಧಾನ ಆಹಾರ ಇಲಿ, ಹೆಗ್ಗಣ, ಕಪ್ಪೆ, ಹಲ್ಲಿ, ಓತಿಕ್ಯಾತ ಮತ್ತು ಇತರೆ ಹಾವುಗಳನ್ನು ತಿನ್ನಬಲ್ಲದು. ಸಾಮಾನ್ಯವಾಗಿ ನಿಶಾಚರಿ. ನಿಧಾನವಾಗಿ ಚಲಿಸುವ ಈ ಹಾವು ಕೋಪ ಬಂದಾಗ ಇಲ್ಲವೇ ಕೆಣಕಿದರೆ ತನ್ನ ದೇಹವನ್ನು ಸುತ್ತು ಹಾಕಿಕೊಂಡು ಆಕ್ರಮಣಕ್ಕೆ ಮುಂದಾಗುತ್ತದೆ. ಕೆಲವೊಮ್ಮೆ ಹಾವು ಬಾಯಿ ತೆರೆದಕ್ಷಣ ವಿಷ ಚಿಮ್ಮುವುದೂ ಉಂಟು. ಇದರ ವಿಷಕ್ಕೆ ರಕ್ತಹೆಪ್ಪುಗಟ್ಟುವ ಕ್ರಿಯೆಯನ್ನು ಶಿಥಿಲಗೊಳಿಸುವ ಶಕ್ತಿ ಇದೆ. ದಂಶನಕ್ಕೆ ಒಳಗಾದ ಅಂಗ ಬಾತುಕೊಂಡು ಅಲ್ಲಿ ವಿಪರೀತ ಉರಿಉಂಟಾಗುತ್ತದೆ ಮತ್ತು ಕಚ್ಚಿದ ಜಾಗದಲ್ಲಿ ಕೊಳೆಯುವಿಕೆಯನ್ನು ಉಂಟುಮಾಡುತ್ತದೆ. ವಿಷ ಮಾರಣಾಂತಿಕವು ಹೌದು.

4. ಗರಗಸ ಮಂಡಲ (Saw scaled viper): ಭಾರತ (ಮಹಾರಾಷ್ಟ್ರ, ರಾಜಸ್ಥಾನ, ಉತ್ತರ ಪ್ರದೇಶ, ಮತ್ತು ಪಂಜಾಬ್‌ನ) ಕಲ್ಲಿನ ಪ್ರದೇಶಗಳಲ್ಲಿ ಕಂಡುಬರುತ್ತದೆ. ಅವು ಸಾಮಾನ್ಯವಾಗಿ ರಾತ್ರಿ ಸಮಯದಲ್ಲಿ ಹೆಚ್ಚು ಚುರುಕಾಗಿರುತ್ತದೆ ಮತ್ತು ಅತ್ಯಂತ ಆಕ್ರಮಣಕಾರಿಯಾಗಿರುತ್ತದೆ. ಇವುಗಳ ಕಡಿತದಿಂದ ಬೇಗನೆ ಸಾವು ಸಂಭವಿಸುತ್ತದೆ. ದೇಹವು ಚಿಕ್ಕದ್ದಾಗಿರುತ್ತದೆ. ನೋಡಲು ಚರ್ಮ ಒರಟಾಗಿರುತ್ತದೆ. ತಲೆಯು ಕುತ್ತಿಗೆಗಿಂತ ಅಗಲವಾಗಿರುತ್ತದೆ. ತಿಳಿಕಂದು, ಗಾಢ–ಕಂದು, ಕೆಂಪು, ಬೂದು ಅಥವಾ ಮರಳಿನ ಬಣ್ಣಗಳಲ್ಲಿ



ಕಾಣಸಿಗುವುದು. ಮೈಮೇಲೆ ಅಡ್ಡಾದಿಡ್ಡಿಯಾಗಿರುವ ಗೆರೆಗಳಿರುತ್ತವೆ. ತಲೆ ಮೇಲ್ಭಾಗದಲ್ಲಿ ನಿರ್ದಿಷ್ಟ ಬಾಣದ ಗುರುತಿರುತ್ತದೆ. ವಿಷವು ಮುಖ್ಯವಾಗಿ ಸಿನಾಪ್ಟಿಕ್ ನ್ಯೂರೋಟಾಕ್ಸಿನ್ ಮತ್ತು ಕಾರ್ಡಿಯೋಟಾಕ್ಸಿನ್ ಅನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ನಿಶಾಚರಿ. ಆಹಾರಕ್ಕಾಗಿ ಇಲಿ, ಕಪ್ಪೆ, ಹಲ್ಲಿ, ಚೇಳು ಮತ್ತು ಕೀಟಗಳನ್ನು ತಿನ್ನುತ್ತದೆ. ವಿಷವು ಅತ್ಯಂತ ತೀಕ್ಷ್ಣವಾಗಿದೆ.

ಹಾವು ಕಚ್ಚಿದಾಗ ಮಾಡಬೇಕಾಗಿದ್ದೇನು?

- ಎಲ್ಲ ವಿಷಕಾರಿ ಹಾವುಗಳು ಕಚ್ಚಿದಾಗ ಅದಕ್ಕೆ ಮದ್ದುಂಟು. ಆದರೆ, ಕೆಲವೊಂದು ಮುಂಜಾಗ್ರತೆ ವಹಿಸಬೇಕು. ಹಾವು ಕಚ್ಚಿಸಿಕೊಂಡ ಮನುಷ್ಯನನ್ನು ಗಾಬರಿಗೊಳ್ಳದಂತೆ ಸಮಾಧಾನದಿಂದಿರಲು ಸಹಾಯ ಮಾಡಬೇಕು. ಏಕೆಂದರೆ ಗಾಬರಿಯಿಂದ ರಕ್ತದೊತ್ತಡದ ವೇಗ ಹೆಚ್ಚಾಗಿ ವಿಷವು ಬೇಗನೆ ದೇಹದಲ್ಲಿ ಹರಡುತ್ತದೆ.

- ಹಾವು ಕಡಿದ ಭಾಗವನ್ನು ಹೆಚ್ಚು ಅಲ್ಲಾಡಿಸದೆ ತಟಸ್ಥವಾಗಿರುವಂತೆ ನೋಡಿಕೊಳ್ಳಬೇಕು. ಹಾವು ಕಚ್ಚಿದ ಜಾಗವನ್ನು ಸಾಬೂನಿನಿಂದ ತೊಳೆದು ಚೆನ್ನಾಗಿ ಸ್ವಚ್ಛಗೊಳಿಸಿದರೇ ಸೋಂಕಿನ ಅಪಾಯ ಕಡಿಮೆಯಾಗುತ್ತದೆ. ಬಾಯಿಂದ ಹೀರುವ ಕೆಲಸ ಮಾಡಲೇಬಾರದು.

- ನಾಗರ ಹಾವು ಅಥವಾ ಕಟ್ಟು ಹಾವು ಕಚ್ಚಿದ್ದರೆ ಹಾವು ಕಚ್ಚಿದ ಜಾಗದಿಂದ ಮೇಲೆ ಬ್ಯಾಂಡೇಜ್ ಅಥವಾ ಬಟ್ಟೆಯಿಂದ ಮಾಡಿದ ಕಟ್ಟನ್ನು ಕಟ್ಟಿ ರಕ್ತ ಪರಿಚಲನೆಯನ್ನು ಕಡಿಮೆ ಮಾಡಬೇಕು. ಕಟ್ಟು ತುಂಬಾ ಬಿಗಿ ಅಥವಾ ತುಂಬಾ ಸಡಿಲು ಇರಬಾರದು.

- ತಕ್ಷಣವೇ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಬೇಕು. ಈ ಸಮಯದಲ್ಲಿ ಆತ ಯಾವುದೇ ಕಾರಣಕ್ಕೂ ಉತ್ತೇಜನವಾಗದಂತೆ ಮತ್ತು ಸುಸ್ತಾಗದಂತೆ ನೋಡಿಕೊಳ್ಳಬೇಕು. ಕೂಡಲೇ ಆಸ್ಪತ್ರೆಯಲ್ಲಿ ಮದ್ದನ್ನು (ಪ್ರತಿವಿಷ) ಕೊಡಿಸಬೇಕು.

ಹಾವು ಕಡಿದಾಗ ಜೀವ ಉಳಿಸುವ ಏಕೈಕ ಔಷಧಿಯೆಂದರೆ ಆಸ್ಪತ್ರೆಗಳಲ್ಲಿ ಸಿಗುವ ಪ್ರತಿವಿಷ (Antivenom) ಮಾತ್ರ. ಭಾರತದಲ್ಲಿ ತಯಾರಾಗುವ ಪ್ರತಿವಿಷವು ಮೇಲ್ಕಾಣಿಸಿದ ನಾಲ್ಕೂ ವಿಷಕಾರಿ ಹಾವುಗಳ ವಿಷಗಳ ಮೇಲೆ ಔಷಧಿಯಂತೆ ಕೆಲಸ ಮಾಡುತ್ತದೆ. ಯಾವುದೇ ಹಾವಿನ ಕಡಿತಕ್ಕೊಳಗಾದ ವ್ಯಕ್ತಿಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿದರೆ ವೈದ್ಯರು ದೇಹಕ್ಕೆ ಕೊಡುವ ಲವಣಯುಕ್ತ (Saline) ದ್ರಾವಣದ ಮೂಲಕ ಪ್ರತಿವಿಷವನ್ನು ಹನಿ ಹನಿಯಾಗಿ ರೋಗಿಯ ರಕ್ತಕ್ಕೆ ಸೇರಿಸುತ್ತಾರೆ. ಪ್ರತಿವಿಷದಲ್ಲಿರುವ ಪ್ರತಿಕಾಯಗಳು ರೋಗಿಯ ರಕ್ತದಲ್ಲಿರುವ ಹಾವಿನ ವಿಷದ ಘಟಕಗಳನ್ನು ತಟಸ್ಥಗೊಳಿಸಿ ವಿಷತ್ವವನ್ನು ತಡೆಯುತ್ತವೆ. ಹಾವಿನ ವಿಷ ತಟಸ್ಥಗೊಳ್ಳುತ್ತಿದ್ದಂತೆ ವಿಷದ ಪ್ರಭಾವ ತಗ್ಗಿ ರೋಗಿ ಗುಣಮುಖನಾಗುತ್ತಾನೆ. ಆದರೆ, ಈ ಎಲ್ಲ ಕ್ರಿಯೆ ಹಾವು ಕಚ್ಚಿದನಂತರ ಆದಷ್ಟು ಬೇಗ ಪ್ರಾರಂಭವಾಗಬೇಕು.

ರೈತ ಸ್ನೇಹಿ ಹಾವುಗಳ ಸಂರಕ್ಷಣೆ

ಜನರು ಹಾವುಗಳಿಂದ ತೊಂದರೆ ಇಲ್ಲವೇ ಪ್ರಾಣಹಾನಿ ಎಂದು ಅಂದುಕೊಂಡಿರುತ್ತಾರೆ. ರೈತರು ಬೆಳೆದ ಆಹಾರ ಧಾನ್ಯಗಳನ್ನು ಗೋದಾಮುಗಳಲ್ಲಿ ಸಂಗ್ರಹಿಸಲಾಗುತ್ತದೆ. ಭಾರತದಲ್ಲಿ ಇಲಿಗಳು ಇಂತಹ ಬೆಳೆದ ಧಾನ್ಯಗಳಲ್ಲಿ ಶೇ. 20 ರಷ್ಟು ತಿಂದು ಹಾಳುಗೆಡವುತ್ತವೆ. ಇಲಿಗಳ ಸಂಖ್ಯೆಯನ್ನು ಸ್ವಾಭಾವಿಕವಾಗಿ ಹತೋಟಿಯಲ್ಲಿಡಲು ಹಾವುಗಳಿಂದ ಮಾತ್ರ ಸಾಧ್ಯ. ಭಾರತದಲ್ಲಿ ವನ್ಯಜೀವಿ ರಕ್ಷಣಾ ಕಾಯ್ದೆ 1972 ರ ಪ್ರಕಾರ ಯಾವುದೇ ಹಾವನ್ನು ಕೊಲ್ಲುವುದು ಅಥವಾ ಘಾಸಿಗೊಳಿಸುವುದು ಶಿಕ್ಷಾರ್ಹ ಅಪರಾಧವಾಗಿದೆ. ಆದ್ದರಿಂದ ಹಾವು ಕಂಡಾಗ ಅವುಗಳನ್ನು ತಮ್ಮಷ್ಟಕ್ಕೆ ತಾವು ದೂರ ಹೋಗಲು ಬಿಡಬೇಕು. ಆದರೆ ವಾಸಸ್ಥಾನಗಳಲ್ಲಿ, ಮನೆ ಅಂಗಳದಲ್ಲಿ, ಕೈ–ತೋಟಗಳಲ್ಲಿ ಕಂಡುಬಂದರೆ, ಅದನ್ನು ಹೆದರಿಸದೇ ತಕ್ಷಣ ಹಾವು ಹಿಡಿಯುವವರನ್ನು ಕರೆಸಬೇಕು. ಆದ್ದರಿಂದ ನಮ್ಮೆಲ್ಲರ ಹತ್ತಿರ ನಮ್ಮ ಊರು/ಪಟ್ಟಣದಲ್ಲಿರುವ ಹಾವು ಹಿಡಿಯುವವರ ಫೋನ್ ಸಂಖ್ಯೆ ಗೊತ್ತಿರಬೇಕು.

ಕೃಷಿ ಭೂಮಿಯಲ್ಲಿ ಮುಂಜಾಗ್ರತಾ ಕ್ರಮಗಳು

ರೈತರು ಕೃಷಿಭೂಮಿಯಲ್ಲಿ ಓಡಾಡುವಾಗ ಅತೀ ಎಚ್ಚರಿಕೆಯಿಂದ ಇರುವುದು ಅಗತ್ಯ. ಕೃಷಿ ಭೂಮಿಯ ಸುತ್ತ ಇರುವ ಅನಗತ್ಯ ಪೊದೆ ಗಿಡಗಳನ್ನು ಕಡಿದು ಸ್ವಚ್ಛವಾಗಿರಿಸಿಕೊಳ್ಳಬೇಕು. ಹಾವುಗಳು ಹೆಚ್ಚಾಗಿ ರಾತ್ರಿ ಹೊತ್ತು ಚಟುವಟಿಕೆಯಿಂದ ಇರುತ್ತವೆ. ಹಾಗಾಗಿ ಆದಷ್ಟು ರಾತ್ರಿ ಹೊತ್ತು ಹೊಲಗದ್ದೆಗಳಲ್ಲಿ ಕೆಲಸಕ್ಕೆ ತೊಡಗಬಾರದು. ರಾತ್ರಿ ಕೆಲಸ ಅನಿವಾರ್ಯವಾದಾಗ ಸರಿಯಾದ ಬೆಳಕಿನ ವ್ಯವಸ್ಥೆಯೊಂದಿಗೆ ಕೆಲಸಮಾಡಬೇಕು ಮತ್ತು ಬೂಟ್‌ಗಳನ್ನು ಧರಿಸಿರಬೇಕು. ಆಕಸ್ಮಿಕವಾಗಿ ಹಾವು ಕಚ್ಚಿದರೆ ತಡ ಮಾಡದೆ ಆಸ್ಪತ್ರೆಗೆ ಹೋಗಬೇಕು. ಯಾವುದೇ ಹಾವು ಕಂಡರೆ ಅರಣ್ಯ ಇಲಾಖೆ ಅಥವಾ ಸ್ಥಳೀಯ ಉರಗ ರಕ್ಷಕರಿಗೆ ಕರೆಮಾಡಿ ಹಾವನ್ನು ರಕ್ಷಿಸಬೇಕು. ಯಾವುದೇ ಕಾರಣಕ್ಕೆ ಹಾವನ್ನು ಮುಟ್ಟುವುದಾಗಲಿ ಅಥವಾ ಹೊಡೆಯುವುದಾಗಲಿ ಮಾಡಬಾರದು.

ಭಾರತದಲ್ಲಿ ವಾಸಿಸುವ ಹೆಚ್ಚಿನ ಹಾವುಗಳು ವಿಷಕಾರಿ ಆಗಿಲ್ಲದೇ ಇರುವುದರಿಂದ ಮತ್ತು ರೈತರಿಗೆ ಉಪಕಾರಿ ಯಾಗಿರುವುದರಿಂದ ಅವುಗಳಿಗೆ ತೊಂದರೆ ಕೊಡಬಾರದು. ವಿಷಕಾರಿ ಹಾವುಗಳ ಕಡಿತಕ್ಕೆ ಪ್ರತಿವಿಷವಿರುವುದರಿಂದ ಯಾವುದೇ ಭಯದ ಅವಶ್ಯಕತೆಯಿಲ್ಲ. ಕೃಷಿಭೂಮಿಯ ಸನಿಹದಲ್ಲಿರುವ ಹಾವುಗಳ ಬಗ್ಗೆ ವೈಜ್ಞಾನಿಕ ಮಾಹಿತಿ ತಿಳಿದುಕೊಂಡು 'ಜೀವಿಸು ಮತ್ತು ಜೀವಿಸಲು ಬಿಡು' (Live and Let Live) ಎಂಬ ತತ್ವವನ್ನು ಪಾಲಿಸಬೇಕು. ರೈತರು ಪ್ರಕೃತಿಯೊಂದಿಗೆ ಜೀವಿಸಲು ಕಲಿತವರಾದ್ದರಿಂದ ಈ ತತ್ವದ ಪಾಲನೆ ಕಷ್ಟವಾಗುವುದಿಲ್ಲ. ಆದರೆ ಹಾವಿನ ಬಗ್ಗೆ ನಮ್ಮಲ್ಲಿರುವ ಪೂರ್ವಗ್ರಹಿತ ಮಾಹಿತಿ ಮತ್ತು ಭಯದಿಂದ ಹೊರಬಂದು ಅವುಗಳೂ ಇತರೇ ಪ್ರಾಣಿಗಳಂತೆ ನಿಸರ್ಗದ ಒಂದು ಭಾಗ ಎಂದು ಪರಿಗಣಿಸೋಣ.

ಅಡಿಕೆಯಲ್ಲಿ ದುಂಡಾಣು ಎಲೆಪಟ್ಟಿ ರೋಗದ ಸಮಗ್ರ ನಿರ್ವಹಣಾ ಕ್ರಮಗಳು

✍ ಎಸ್. ಜೆ. ಕಿರಣ್‌ಕುಮಾರ್, 9480838989, ನಾಗರಾಜಪ್ಪ ಅಡಿವಪ್ಪರ್ ಮತ್ತು ಸುದೀಪ್ ಹೆಚ್. ಪಿ., ಅಡಿಕೆ ಸಂಶೋಧನಾ ಕೇಂದ್ರ, ನವಿಲೆ, ಶಿವಮೊಗ್ಗ

ಅಡಿಕೆ ಬೆಳೆಯು ನಮ್ಮ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಮಲೆನಾಡು ಮತ್ತು ಕರಾವಳಿ ಪ್ರಾಂತ್ಯದ ಸಾಂಪ್ರದಾಯಿಕ ಬೆಳೆಯಾಗಿದೆ. ಅಡಿಕೆ ಬೆಳೆಯನ್ನು ಇತ್ತೀಚಿನ ದಿನಗಳಲ್ಲಿ ಮೈದಾನ ಮತ್ತು ಬಯಲುಸೀಮೆ ಪ್ರದೇಶಗಳಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಬೆಳೆಯ ವಿಸ್ತೀರ್ಣವು ಹೆಚ್ಚಾದಂತೆ ಬೆಳೆಗೆ ಬಾಧಿಸುವ ರೋಗಗಳ ಪ್ರಮಾಣವು ಹೆಚ್ಚುತ್ತಿದೆ. ಇದು ಅಡಿಕೆ ಬೆಳೆಯ ಇಳುವರಿ ಕಡಿಮೆಯಾಗುವುದಕ್ಕೂ ಕಾರಣವಾಗುತ್ತಿದೆ. ಕೊಳೆರೋಗ, ಸುಳಿಕೊಳೆ ರೋಗ, ಎಲೆಚುಕ್ಕೆ ರೋಗ, ಹಳದಿ ಎಲೆ ರೋಗಗಳು ಮಲೆನಾಡು ಮತ್ತು ಕರಾವಳಿ ಪ್ರದೇಶದ ಅಡಿಕೆ ಬೆಳೆಯನ್ನು ಬಾಧಿಸುವ ಪ್ರಮುಖ ರೋಗಗಳಾದರೆ ಹಿಂಗಾರು ಒಣಗುವ ರೋಗ, ಅಣಬೆ ರೋಗ ಮತ್ತು ದುಂಡಾಣು ಎಲೆಪಟ್ಟಿ ರೋಗಗಳು ಅರೆಮಲೆನಾಡು, ಮೈದಾನ ಮತ್ತು ಬಯಲು ಪ್ರದೇಶದಲ್ಲಿನ ಪ್ರಮುಖ ರೋಗಗಳಾಗಿವೆ. ಜಾಂತಮೊನಾಸ್ ವೆಸಿಕೋಲಾ ಎಂಬ ದುಂಡಾಣುವಿನಿಂದ ಬರುವ ದುಂಡಾಣು ಎಲೆಪಟ್ಟಿ ರೋಗವು ಸಣ್ಣ ವಯಸ್ಸಿನ ಅಡಿಕೆ ಮರಗಳನ್ನು ಹೆಚ್ಚು ಬಾಧಿಸುತ್ತದೆ. ಈ ರೋಗವು ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. 2–5 ವರ್ಷದೊಳಗಿನ ಅಡಿಕೆ ಮರಗಳಲ್ಲಿ ಈ ರೋಗದ ತೀವ್ರತೆಯು ಅಧಿಕವಾಗಿರುತ್ತದೆ. ಹಾಗೆಯೇ ಈ ರೋಗದಿಂದ ಶೇ. 50ಕ್ಕಿಂತ ಹೆಚ್ಚಿನ ಗಿಡಗಳು ರೋಗಗ್ರಸ್ಥವಾಗಿರುವುದು ಕಂಡುಬಂದಿದೆ ಹಾಗೂ ರೋಗದ ನಿಯಂತ್ರಣಕ್ಕೆ ಸೂಕ್ತಕ್ರಮಗಳನ್ನು ಅನುಸರಿಸುವುದರಿಂದ ಯಶಸ್ವಿಯಾಗಿ ಈ ರೋಗವನ್ನು ತಡೆಯಬಹುದು.

ರೋಗದ ಲಕ್ಷಣಗಳು

ರೋಗವು ಆರಂಭಿಕ ಹಂತದಲ್ಲಿ ಎಲೆಯ ಗರಿಗಳ ಕೆಳಭಾಗದಲ್ಲಿ ನೀರಿನಿಂದ ಒದ್ದೆಯಾದಂತಹ ಹಳದಿ ಮಿಶ್ರಿತ ಕಪ್ಪು ಬಣ್ಣದ ಮಚ್ಚೆಗಳಂತೆ ಕಂಡುಬರುತ್ತದೆ. ರೋಗವು ಅಧಿಕವಾದಂತೆ ಎಲೆಯ ಕೆಳಭಾಗದಲ್ಲಿರುವ ಕಪ್ಪುಮಚ್ಚೆಗಳು ಕೂಡಿಕೊಂಡು ಉದ್ದವಾಗಿ ಎಲೆಗಳ ಮಧ್ಯದ ದಿಂಡಿಗೆ ಸಮನಾಂತರವಾಗಿ ಬೆಳೆಯುತ್ತದೆ. ನಂತರದ ಹಂತದಲ್ಲಿ ಎಲೆಯ ಮುಖ್ಯ ದಿಂಡಿನ ಹಿಂಭಾಗದಲ್ಲಿ ನೀರಿನಿಂದ ಕೂಡಿಕೊಂಡ ಅಂಟು ದ್ರಾವಣವು ಉತ್ಪತ್ತಿಯಾಗುತ್ತದೆ. ಹೀಗೆ ಬೆಳೆದ ಮಚ್ಚೆಗಳು ಮತ್ತು ಅಂಟು ದ್ರಾವಣವು ಕಪ್ಪು ಬಣ್ಣಕ್ಕೆ ತಿರುಗಿ ಎಲೆಯು ಒಣಗುತ್ತದೆ. ರೋಗದ ತೀವ್ರತೆಯು ಅಧಿಕವಾದಂತೆ ಗಿಡದ ಸಂಪೂರ್ಣ ಎಲೆಗಳನ್ನು ಬಾಧಿಸುತ್ತದೆ. ಅಂತಿಮವಾಗಿ ಗಿಡದ ಸುಳಿಯ ಭಾಗವು ಕೊಳೆತುಹೋಗುತ್ತದೆ.

ರೋಗದ ಹರಡುವಿಕೆಗೆ ಪೂರಕವಾದ ಅಂಶಗಳು: ರೋಗದ ತೀವ್ರತೆಯು ಜುಲೈಯಿಂದ ಫೆಬ್ರವರಿ ತಿಂಗಳಿನ ಅವಧಿಯಲ್ಲಿ ಹೆಚ್ಚಾಗಿರುತ್ತದೆ. 20°ಸೆ. ಯಿಂದ 30° ಸೆ. ಉಷ್ಣಾಂಶ ಮತ್ತು ಶೇ. 85–90ರ ಆರ್ದ್ರತೆಯು ರೋಗಾಣುವಿನ ಅಭಿವೃದ್ಧಿಗೆ ಪೂರಕವಾಗಿರುತ್ತದೆ ಹಾಗೂ ಹೆಚ್ಚಿನ ಮಳೆಯು ರೋಗದ ಹರಡುವಿಕೆಗೆ ಸಹಾಯ ಮಾಡುತ್ತದೆ. ಎಲೆಗಳ ಮೇಲೆ ತೇವಾಂಶ ಇದ್ದಲ್ಲಿ ರೋಗಾಣು ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುತ್ತದೆ. ರೋಗಾಣುವು ರೋಗಬಾಧಿತ ಹಳೆಯ ಎಲೆಗಳು ಹಾಗೂ ಮಣ್ಣಿನಲ್ಲಿ ವಾಸವಾಗಿರುತ್ತದೆ. ರೋಗವು ಗಾಳಿ, ಮಣ್ಣು ಮತ್ತು ಮಳೆಯ ಹನಿಗಳ ಮೂಲಕ ಹರಡುತ್ತದೆ. ಸಿಂಚನ ನೀರಾವರಿಯ ಹನಿಗಳು ರೋಗವು ಹರಡುವುದಕ್ಕೆ ಅನುಕೂಲಕರವಾಗಿರುತ್ತದೆ. ಮೆಕ್ಕೆಜೋಳವನ್ನು ಅಂತರಬೆಳೆಯಾಗಿ ಬೆಳೆದ ತೋಟಗಳಲ್ಲಿ ಈ ರೋಗದ ಬಾಧೆಯು ಹೆಚ್ಚಾಗಿರುತ್ತದೆ.

ಹತೋಟಿ ಕ್ರಮಗಳು

- ಜೈವಿಕ ಕಾರಕಗಳಿಂದ ಪುಷ್ಟಿಗೊಳಿಸಿದ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಮರಕ್ಕೆ 12–15 ಕೆ.ಜಿ ಯನ್ನು ಮುಂಗಾರಿನ ಪ್ರಾರಂಭದ ಸಮಯದಲ್ಲಿ ಕೊಡಬೇಕು (1 ಟನ್ ಗೊಬ್ಬರಕ್ಕೆ 2 ಕೆ.ಜಿ ಟ್ರೈಕೊಡರ್ಮಾ ಮತ್ತು ಸುಡೊಮೊನಾಸ್ ಬೆರೆಸಿ 15 ದಿನ ನೆರಳಿನಲ್ಲಿಡಬೇಕು ನಂತರ ಗಿಡಗಳಿಗೆ ನೀಡಬೇಕು).
- ರೋಗಪೀಡಿತ ಎಲೆಗಳನ್ನು ಸಂಪೂರ್ಣವಾಗಿ ತೆಗೆದು ಸುಡಬೇಕು ಮತ್ತು ಇಂತಹ ರೋಗಬಾಧಿತ ಎಲೆಗಳನ್ನು ಗೊಬ್ಬರದ ತಯಾರಿಕೆಯಲ್ಲಿ ಬಳಸಬಾರದು. ತೋಟದಲ್ಲಿ ನೀರು ನಿಲ್ಲದ ಹಾಗೆ ಬಸಿಗಾಲುವೆ ವ್ಯವಸ್ಥೆಯನ್ನು ಮಾಡಬೇಕು.
- ಮುಂಜಾಗ್ರತವಾಗಿ ಉಷ್ಣಾಂಶ ಕಡಿಮೆ ಇರುವ ಸಮಯದಲ್ಲಿ (25–30°ಸೆ.) ಜೈವಿಕಕಾರಕವಾದ ಸುಡೊಮೊನಾಸ್ ಅನ್ನು 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಂಪೂರ್ಣವಾಗಿ ಗಿಡದ ಎಲ್ಲಾ ಎಲೆಗಳಿಗೆ ಸಿಂಪರಣೆ ಮಾಡಬೇಕು. ಇದರಿಂದ ರೋಗದ ಅಭಿವೃದ್ಧಿಯನ್ನು ಪ್ರಾಥಮಿಕ ಹಂತದಲ್ಲಿಯೇ ತಡೆಯಬಹುದು.
- ಸಿಂಚನ ನೀರಾವರಿಯನ್ನು ಸೀಮಿತಗೊಳಿಸಿ, ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವುದರಿಂದ ರೋಗದ ಹರಡುವಿಕೆಯನ್ನು ತಡೆಯಬಹುದು. ರೋಗವು ಹೆಚ್ಚಾಗುತ್ತಿರುವುದು ಕಂಡುಬಂದಲ್ಲಿ, ಪ್ರತಿ ಲೀಟರ್ ನೀರಿಗೆ 3.0 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಜೊತೆಗೆ 3 ಮಿ.ಲೀ. ಕಸುಗಾಮೈಸಿನ್ ಮಿಶ್ರಣ ಮಾಡಿ 20 ದಿನಗಳ ಅಂತರದಲ್ಲಿ ಎರಡು ಬಾರಿ ಸಿಂಪರಣೆ ಮಾಡುವುದರಿಂದ ರೋಗವನ್ನು ನಿಯಂತ್ರಿಸಬಹುದು.

ಸಾಧಕ ರೈತ

ಶುಷ್ಕವಲಯದಲ್ಲಿ ಕೆಂಪು ನೇಪಿಯರ್ ಉತ್ಪಾದನೆ: ಶ್ರೀಮತಿ ಕವಿತ ಮಿಟ್ಟೆ

✍ ರಮೇಶ ಎಂ. ಎನ್., 9630437467, ಕೃಷಿ ಸಂಶೋಧನ ಪರಿಷತ್– ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ, ಸಂಶೋಧನಾ ಕೇಂದ್ರ, ಬಳ್ಳಾರಿ

ಶುಷ್ಕವಲಯದಲ್ಲಿ ಜಾನುವಾರುಗಳಿಗೆ ಹಸಿರು ಮೇವು ತಕ್ಕಮಟ್ಟಿಗೆ ಸಿಗುವುದು ಮಳೆಗಾಲದಲ್ಲಿ ಮಾತ್ರ! ಮಿಕ್ಕಂತೆ ಜಾನುವಾರುಗಳು ಒಣ ಹುಲ್ಲಿನ ಮೇಲೆ ಅವಲಂಬಿತವಾಗಿರುತ್ತವೆ. ಇದಕ್ಕೆ ಪೂರಕವಾಗಿ ಅವುಗಳ ಬೆಳವಣಿಗೆ, ಆರೋಗ್ಯ ಹಾಗೂ ಉತ್ಪಾದನ ಸಾಮರ್ಥ್ಯ ಸರಾಸರಿಯಾಗಿ ಕಡಿಮೆ ಇರುತ್ತದೆ. ಆದ್ದರಿಂದ ಅವುಗಳನ್ನು ಸಾಕಿದ ರೈತರಿಗೆ ಆರ್ಥಿಕವಾಗಿ ಅಷ್ಟೇನು ಲಾಭ ತರುವ ಉದ್ಯಮವಾಗಿರುವುದಿಲ್ಲ. ಸದಾ ಹಸಿರು ಹುಲ್ಲು ಅಥವ ಹಸಿರು ಮೇವನ್ನು ತಿನ್ನುವ ಜಾನುವಾರುಗಳು ಉತ್ತಮ ಆರೋಗ್ಯದೊಂದಿಗೆ ಬೆಳೆಯುವುದಲ್ಲದೆ, ಉತ್ತಮ ಹಾಲು ಅಥವಾ ಮಾಂಸ ಉತ್ಪಾದನೆ ನೀಡುವುದರ ಜೊತೆಗೆ, ರೈತರಿಗೆ ಆರ್ಥಿಕವಾಗಿ ಲಾಭ ತರುತ್ತವೆ.

ಈ ನಿಟ್ಟಿನಲ್ಲಿ ಶುಷ್ಕವಲಯದ ಸಣ್ಣ ಹಿಡುವಳಿದಾರರು ತಮ್ಮ ಜಾನುವಾರುಗಳಿಗೆ ಹಸಿರು ಮೇವನ್ನು ಮಳೆಗಾಲದಲ್ಲಿ ಮಾತ್ರ ಒದಗಿಸಲು ಸಾಧ್ಯ. ಈ ಅಸಾಧ್ಯ ಪರಿಸ್ಥಿತಿಯನ್ನು ಸಾಧ್ಯಗೊಳಿಸಲು, ರೈತರು ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಮೇಯಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳುವುದರ ಜೊತೆಗೆ, ವ್ಯವಸ್ಥಿತವಾಗಿ ಮೇವಿನ ಬೆಳೆಗಳನ್ನು ತಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದಾರೆ. ಈ ಮೇವು ಬೆಳೆಯುವ ಕಾರ್ಯವನ್ನು ತಮ್ಮ ಅಲ್ಪ ಜಮೀನಿನಲ್ಲಿ ಅಳವಡಿಸಿಕೊಂಡಿರುವ ಶ್ರೀಮತಿ ಕವಿತಾ ಮಿಟ್ಟೆಯವರು ಓರ್ವ ಯಶಸ್ವಿ ನೇಪಿಯರ್ ಬೆಳೆಗಾರರಾಗಿದ್ದಾರೆ.

ಬಳ್ಳಾರಿಯ ಶ್ರೀಮತಿ ಕವಿತ ಮಿಟ್ಟೆಯವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ (ಶ್ರೀ ಗಿರೀಶ್ ಮಿಟ್ಟೆಯವರ ಪತ್ನಿ) ಇವರು ಮೂಲತಃ ಹಾಸನ ಜಿಲ್ಲೆ, ಆಲೂರು ತಾಲೂಕಿನ, ಬೆಳೆಮೆ ಗ್ರಾಮದವರು. ಇವರು ಮದುವೆಯಾಗಿ ಶುಷ್ಕವಲಯದ ಬಳ್ಳಾರಿ ಸೀಮೆ ಸೇರಿದ ಮೇಲೂ, ತೋಟ ಮಾಡುವ ಹಂಬಲ ಹಾಗೂ ಕೃಷಿ ಮಾಡುವ ತುಡಿತವನ್ನು ಬೆಂಬಿಡದೆ, ಬಳ್ಳಾರಿಯಿಂದ ಸುಮಾರು 30 ಕಿ. ಮೀ. ದೂರವಿರುವ ರಾಂಪುರ ಗ್ರಾಮದ ಹತ್ತಿರ, ಹತ್ತು ಗುಂಟೆ ಜಾಗವನ್ನು ಗುತ್ತಿಗೆ ಪಡೆದು, ಕುರಿ, ಮೇಕೆ, ಕೋಳಿ ಸಾಕುವ ಹಾಗೂ ಅವುಗಳಿಗೆ ಬೇಕಾಗುವ ಮೇವನ್ನು ತಾವೆ ಬೆಳೆಯುವ ಕಾರ್ಯವನ್ನು 2022 ರಲ್ಲಿ ಶುರುಮಾಡಿ, ಹೊಸ ಮೇವಿನ ಬೆಳೆಗಳನ್ನು ಅಳವಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಶ್ರೀಮತಿ ಮಿಟ್ಟೆಯವರಿಗೆ ಆಸ್ಟ್ರೇಲಿಯಾ ಮೂಲದ ಕೆಂಪು ನೇಪಿಯರ್ ಹುಲ್ಲಿನ ಪರಿಚಯವು, ಬಳ್ಳಾರಿಯ ಪಶುಸಂಗೋಪನೆ ಇಲಾಖೆ ತರಬೇತಿಯಿಂದ ಹುಲ್ಲಿನ ವಿಚಾರ ತಿಳಿದ ಮೇಲೆ, ತಮ್ಮ ಸ್ನೇಹಿತರ ಮೂಲಕ ನಾಟಿ–ಕಡ್ಡಿಗಳು ದೊರೆಯುವ ಸ್ಥಳವನ್ನು ಪತ್ತೆಮಾಡಿ, ಕುಣಿಗಲ್ ಪ್ರಾಂತ್ಯದಿಂದ ನಾಟಿ–ಕಡ್ಡಿಗಳನ್ನು ತರಿಸಿ, ಸುಮಾರು 4 ರಿಂದ 5 ಗುಂಟೆ ಜಾಗದಲ್ಲಿ ಮೇವಿಗಾಗಿ ಬೆಳೆಯುತ್ತಿದ್ದಾರೆ. ಇದರ ಜೊತೆಗೆ ಭಾರತೀಯ ಕೃಷಿ ಸಂಶೋಧನ ಪರಿಷತ್– ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ, ಸಂಶೋಧನಾ ಕೇಂದ್ರ, (ICAR-IISWC Research Centre, Ballari) ಬಳ್ಳಾರಿಯಿಂದ ಪಡೆದಿರುವ ಛಾಯ (ನಿಡೊಸ್ಕೊಲಸ್ ಅಕೊನಿಫೊಲಿಯಸ್) ಮೇವಿನ ಗಿಡವನ್ನು ತಮ್ಮ ಜಮೀನಿನ ಬೇಲಿ ಮತ್ತು ಬದುವಿನ ಅಂಚಿನಲ್ಲಿ ಬೆಳೆಸುತ್ತಿದ್ದಾರೆ.

ಶ್ರೀಮತಿ ಮಿಟ್ಟೆಯವರು ಸುಮಾರು 80 ಟಗರುಗಳನ್ನು, ಸುಮಾರು ಒಂದು ಸಾವಿರ ಕೋಳಿಗಳನ್ನು, ಒಂದು ನಾಟಿ ಹಸುವನ್ನು ಹಾಗೂ ಊರ ಹೊರಗಿನ ಮನೆ ಕಾವಲಿಗೆ ಬೇಕಾದ ಎರಡು ಮುಧೋಳ ತಳಿ ನಾಯಿಗಳನ್ನು ಸಾಕಿದ್ದಾರೆ. ಮೊದಲಿಗೆ, ಒಂದು ಸಾವಿರ ಕೆಂಪು ನೇಪಿಯರ್ ನಾಟಿ–ಕಡ್ಡಿಗಳನ್ನು ತರಿಸಿ, ಅವುಗಳನ್ನು ಸಾಲಿನಿಂದ ಸಾಲಿಗೆ 3 ಅಡಿ ಅಂತರದಲ್ಲಿ ಹಾಗೂ ಕಡ್ಡಿಯಿಂದ ಕಡ್ಡಿಗೆ ಒಂದು ಅಡಿ ಅಂತರದಲ್ಲಿ ನಾಟಿಮಾಡಿ, ವಾರಕ್ಕೆ ಎರಡು ಬಾರಿ ನೀರುಣಿಸಿ ಬೆಳೆಸಿದ್ದಾರೆ. ಇದು ಒಂದು ಬಾರಿ ನಾಟಿಮಾಡಿದ ಮೇಲೆ 5 ವರ್ಷಗಳವರೆಗೆ ಬೆಳೆಯುತ್ತಲೇ ಇರುತ್ತದೆ ಎಂದು ಅವರು ಹೇಳುತ್ತಾರೆ. ಒಂದು ವರ್ಷಕ್ಕೆ 4 ರಿಂದ 5 ಬಾರಿ ಕಟಾವಿಗೆ ಬರುತ್ತದೆ. ಮೊದಲ ಕಟಾವು ಸುಮಾರು 80 ರಿಂದ 90 ದಿನಗಳಲ್ಲಿ ಬರುತ್ತದೆ. ಶ್ರೀಮತಿ ಮಿಟ್ಟೆಯವರು, ಮೊದಲ ಕಟಾವಿನಲ್ಲಿ ಸುಮಾರು 1–2 ಟನ್‌ಗಳಷ್ಟು ಹಸಿ ಹುಲ್ಲನ್ನು ಬೆಳೆದಿದ್ದಾರೆ. ನಂತರ ಎರಡು ಮತ್ತು ಮೂರನೇ ಕಟಾವಿನಿಂದ 3 ಟನ್‌ಗಳಷ್ಟು ಹಸಿ ಹುಲ್ಲನ್ನು ಬೆಳೆಯುತ್ತಿದ್ದಾರೆ. ಕೆಂಪು ನೇಪಿಯರ್ ಹುಲ್ಲನ್ನು ಅವರು ವರ್ಷಪೂರ್ತಿ ಸಾಕುವ 25 ಟಗರುಗಳಿಗೆ ಹಾಗೂ ವಿಶೇಷವಾಗಿ 100 ನಾಟಿಕೋಳಿಗಳಿಗೆ ಮೇವಾಗಿ ಬಳಸುತ್ತಿದ್ದಾರೆ.

ಕೆಂಪು ನೇಪಿಯರ್ ಮೇವಿನಲ್ಲಿ ಹೆಚ್ಚು ನಾರಿನಂಶವಿದ್ದು, ಜೊತೆಗೆ ಹೆಚ್ಚಿನ ನೀರಿನಂಶ ಹೊಂದಿರುತ್ತದೆ. ಇದು ಸುಮಾರು 10 ರಿಂದ 15 ಅಡಿ ಎತ್ತರ ಬೆಳೆಯುತ್ತದೆ. ಇದರ ಕಾಂಡ ಕಬ್ಬಿನ ಜಲ್ಲೆಯಂತೆ ದಪ್ಪವಾಗಿದ್ದು, ತುಂಬ ನೀರಿನಂಶ ಹೊಂದಿರುವುದರಿಂದ ಹಾಗೂ ಹೆಚ್ಚು ಸಿಹಿಯಾದ ಶರ್ಕರಪಿಷ್ಟ ಮತ್ತು ಹೆಚ್ಚು ಪ್ರೋಟೀನ್ ಅಂಶವಿರುವುದರಿಂದ, ಕುರಿ, ಮೇಕೆ, ಕೋಳಿ ಹಾಗೂ ಹಸುಗಳು ತುಂಬ ಇಷ್ಟಪಟ್ಟು ತಿನ್ನುತ್ತವೆ.

ಕೆಂಪು ನೇಪಿಯರ್ ಹುಲ್ಲನ್ನು ಬೆಳೆಯಲು ಅತಿ ಹೆಚ್ಚು ನೀರು ಬೇಕಿಲ್ಲವೆಂದಿದ್ದಾರೆ. ಮೊದಲು ನಾಟಿಮಾಡಿದಾಗ ವಾರಕ್ಕೆ ಎರಡು ಬಾರಿ ನೀರು ಬೇಕಾಗುತ್ತದೆ. ತದನಂತರದಲ್ಲಿ ವಾರಕ್ಕೆ ಒಂದು ಬಾರಿ ಅಥವಾ 15 ದಿನಕ್ಕೆ ಒಂದು ಬಾರಿ, ಹಾಗೂ ಋತುಮಾನಕ್ಕೆ ಅನುಗುಣವಾಗಿ, ನೀರು ಕೊಟ್ಟರೆ ಸಾಕು ಎನ್ನುತ್ತಾರೆ. ಇದರಿಂದ ಮೇವು ಸೊಗಸಾಗಿ ಬೆಳೆಯುತ್ತದೆ ಎನ್ನುತ್ತಾರೆ. ಇವರು ಮೊದಲು ನಾಟಿಮಾಡಿ, ಚಿಗುರು ಬಂದ ನಂತರ, ಅಂದರೆ ಒಂದು ತಿಂಗಳ ನಂತರ, 5 ಕೆಜಿ ಯೂರಿಯ ಗೊಬ್ಬರವನ್ನು ಹಾಗೂ 200 ಕೆಜಿ ಕುರಿ ಗೊಬ್ಬರವನ್ನು ಕೊಡುತ್ತಾರೆ. ಸುಮಾರು 90 ದಿನಗಳ ನಂತರ ಮೇವಿನ ಕಟಾವನ್ನು ಮೊದಲ ಸಾಲಿನಿಂದ ಶುರುಮಾಡಿ, ಸುಮಾರು 45 ದಿನಗಳ ಅವರ್ತಕಾಲದಲ್ಲಿ ಸಂಪೂರ್ಣ ಕಟಾವನ್ನು ಮುಗಿಸುತ್ತಾರೆ. ಈ ಆವರ್ತಕಾಲದಲ್ಲಿ ಮೊದಲು ಕಟಾವು ಮಾಡಿದ ಸಾಲು, ಮತ್ತೆ ಕಟಾವಿಗೆ ಸಿದ್ಧವಾಗಿರುತ್ತದೆ. ಆದ್ದರಿಂದ ಅವರು ತಮ್ಮ 25 ಟಗರುಗಳಿಗೆ, 100 ನಾಟಿ ಕೋಳಿಗಳಿಗೆ ಹಾಗೂ ಒಂದು ನಾಟಿ ಆಕಳಿಗೆ ವರ್ಷಪೂರ್ತಿ ಬೇಕಾಗುವಷ್ಟು ಹಸಿರು ಮೇವನ್ನು ಬೆಳೆಯುತ್ತಿದ್ದಾರೆ.

ಇದರ ಜೊತೆಗೆ, ಶ್ರೀಮತಿ ಮಿಟ್ಟೆಯವರು ಕೆಂಪು ನೇಪಿಯರ್ ನಾಟಿ–ಕಡ್ಡಿಗಳನ್ನು ಒಂದು ಕಡ್ಡಿಗೆ ಮೂರು ರೂಪಾಯಿಯಂತೆ, ಆಸಕ್ತ ರೈತರಿಗೆ ಮಾರುತ್ತಾರೆ. ಒಂದು ಕಟಾವಿನಲ್ಲಿ, ಸುಮಾರು 5 ರಿಂದ 8 ಸಾವಿರ ಕಡ್ಡಿಗಳನ್ನು ಮಾರಾಟ ಮಾಡಿದ್ದಾರೆ ಹಾಗೂ ಅದರಿಂದ ಸುಮಾರು, 15 ರಿಂದ 25 ಸಾವಿರ ವಾರ್ಷಿಕ ಆದಾಯಗಳಿಸಿದ್ದಾರೆ. ಒಟ್ಟು ಮೇವಿನ ಬೆಳೆಯಿಂದ ವಾರ್ಷಿಕವಾಗಿ 75 ಸಾವಿರ ರೂಪಾಯಿ ನಿವ್ವಳ ಆದಾಯ ಬರುತ್ತದೆ ಎಂದು ಮಿಟ್ಟೆಯವರು ಹೇಳುತ್ತಾರೆ. ಅವರ ಪ್ರಕಾರ ಮಾರಾಟಕ್ಕಾಗಿ, ಈ ಕೆಂಪು ನೇಪಿಯರ್ ಹುಲ್ಲನ್ನು ಬೆಳೆದರೆ ಹೆಚ್ಚಿನ ಆದಾಯವನ್ನು ಪಡೆಯಬಹುದೆನ್ನುತ್ತಾರೆ. ಆದರೆ, ಇದು ಮೇವಿನ ಬೆಳೆಯಾಗಿರುವುದರಿಂದ, ಮೇವಿಗಾಗಿ ತಮ್ಮ ತಮ್ಮ ತೋಟ ಮತ್ತು ಹೊಲಗಳಲ್ಲಿ ಬೆಳೆದುಕೊಳ್ಳುವುದು ಸೂಕ್ತ ಎಂದು ಅವರು ತಿಳಿಸುತ್ತಾರೆ.

ಒಬ್ಬ ರೈತ ಮಹಿಳೆಯಾಗಿ ಶ್ರೀಮತಿ ಕವಿತಾ ಮಿಟ್ಟೆಯವರು ತಮ್ಮ ಸಂಗಾತಿ ಶ್ರೀ ಗಿರೀಶ್ ಮಿಟ್ಟೆಯವರ ಸಂಪೂರ್ಣ ಸಹಕಾರದೊಂದಿಗೆ ಕೋಳಿ ಮರಿಗಳ ಪಾಲನೆ ಉದ್ಯಮ ಇತ್ತೀಚಿಗೆ ಆರಂಭಿಸಿದ್ದಾರೆ. ಈ ಉದ್ಯಮದ ಮೂಲಕ, ಚಿಕ್ಕ ಕೋಳಿ ಮರಿಗಳ ಸಾಕುವ ರೈತರ ಸಂಕಷ್ಟವನ್ನು ದೂರಮಾಡುವ ಸಾಹಸಕ್ಕೆ ಕೈಹಾಕಿದ್ದಾರೆ. ಸೋನಾಲಿ ಎಂಬ ಮೈಸೂರು ನಾಟಿ ಕೋಳಿ ತಳಿಯ ಒಂದು ದಿನದ ಮರಿಗಳನ್ನು ಮೈಸೂರಿನಿಂದ ತರಿಸಿ, ಅವುಗಳಿಗೆ ಆಹಾರ, ನೀರು ಹಾಗೂ ಸಮಯಕ್ಕೆ ಸರಿಯಾಗಿ ಲಸಿಕೆಗಳನ್ನು ಹಾಕಿ, 15 ದಿನ ಅಥವಾ ಒಂದು ತಿಂಗಳವರೆಗೆ ಅವುಗಳ ಪಾಲನೆ ಮಾಡಿ, 100 ರಿಂದ 150 ರೂಪಾಯಿಗೆ ಸಾಕಲು ಇಚ್ಛೆಯುಳ್ಳ ರೈತರಿಗೆ ಮಾರಾಟ ಮಾಡುತ್ತಾರೆ. ಹುಲ್ಲನ್ನು ಕತ್ತರಿಸುವ ಯಂತ್ರದಿಂದ ಕೋಳಿ ಹಾಗೂ ಮರಿಗಳಿಗೆ ತಿನ್ನಲು ಸಹಕಾರಿಯಾಗುವಂತೆ ಸಣ್ಣ ಸಣ್ಣ ತುಂಡುಗಳಾಗಿ ಕೆಂಪು ನೇಪಿಯರ್ ಕತ್ತರಿಸಿ ಕೋಳಿ ಹಾಕುತ್ತಾರೆ.

ಇದೆಲ್ಲವುದರ ಮೇಲೆ, ಶ್ರೀಮತಿ ಕವಿತಾ ಮಿಟ್ಟೆಯವರು ತಮ್ಮ ಬಳಿ ಬರುವ ಕೃಷಿ ಹಾಗೂ ಕೃಷಿ ಎಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳಿಗೆ, ತಮ್ಮ ಕೃಷಿ ಅನುಭವವನ್ನು ನಿರರ್ಗಳವಾಗಿ ವಿವರಿಸುತ್ತಾರೆ. ಜೊತೆಗೆ, ಭಾರತೀಯ ಕೃಷಿ ಸಂಶೋಧನ ಪರಿಷತ್–ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆ, ಸಂಶೋಧನಾ ಕೇಂದ್ರ,ಯ ಸಹಯೋಗದೊಂದಿಗೆ, ಪರಿಶಿಷ್ಟ ಜಾತಿ–ಉಪಯೋಜನೆಯಡಿಯಲ್ಲಿ, ಪರಿಶಿಷ್ಟ ಜಾತಿ ರೈತರ ಜಮೀನಿನಲ್ಲಿ ಕೆಂಪು ನೇಪಿಯರ್ ಹುಲ್ಲನ್ನು ನಾಟಿ ಮಾಡಲು ನಾಟಿ–ಕಡ್ಡಿಗಳನ್ನು ಒದಗಿಸುತಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಶ್ರೀಮತಿ ಕವಿತಾ ಮಿಟ್ಟೆ
ರಾಂಪುರ, ಬಳ್ಳಾರಿ, ಮೊ. 98806 95985.

ನೇಗಿಲ ಮಿಡಿತ ಪತ್ರಿಕೆಗೆ ಚಂದಾದಾರರಾಗಿ

ಗುಣಮಟ್ಟದ ಬೀಜಗಳಿಂದ ಅಧಿಕ ಇಳುವರಿ

✍ ಗಜೇಂದ್ರ ಖಿದ್ರಾಪೂರೆ[1], 7760826996 ಮತ್ತು ರೇಖಾ ಬಿ.[2], [1]ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ, [2]ಕೃಷಿ ವಿಜ್ಞಾನ ಕೇಂದ್ರ, ವಿ.ಸಿ. ಫಾರ್ಮ್, ಮಂಡ್ಯ

ಕೃಷಿಯಲ್ಲಿ ಬಿತ್ತನೆ ಬೀಜದ ಪಾತ್ರವು ಬಹಳ ಪ್ರಮುಖವಾಗಿದೆ ಮತ್ತು ಬೀಜದ ಅನುವಂಶಿಕ ಶುದ್ಧತೆಯು ಬೀಜ ಸಾಮರ್ಥ್ಯದ ವಾಹಕವಾಗಿ ಕಾರ್ಯನಿರ್ವಹಿಸುತ್ತದೆ. ಪ್ರತಿಯೊಬ್ಬ ರೈತರು ಅನುವಂಶಿಕವಾಗಿ ಶುದ್ಧವಾದ, ಶೇಕಡಾವಾರು ಹೆಚ್ಚಿನ ಮೊಳಕೆಯೊಡೆಯುವ ಮತ್ತು ಆರೋಗ್ಯಕರ ಬೀಜಗಳನ್ನು ಕೃಷಿಗೆ ಬಳಸುವುದರಿಂದ ಅಧಿಕ ಇಳುವರಿ ಪಡೆಯಬಹುದಾಗಿದೆ.

ಉತ್ತಮ ಗುಣಮಟ್ಟದ ಬೀಜಗಳು

- ಕಡಿಮೆ ಬೆಲೆಯಲ್ಲಿ ಸಕಾಲದಲ್ಲಿ ಲಭ್ಯವಾಗುವುದರಿಂದ ರೈತರಿಗೆ ಉತ್ತಮ ಇಳುವರಿ ಮತ್ತು ಲಾಭವನ್ನು ಪಡೆಯಬಹುದು.
- ಉತ್ಪಾದನೆಯನ್ನು ಹೆಚ್ಚಿಸಲು ಗುಣಮಟ್ಟದ ಬೀಜ ಬಹಳ ಮುಖ್ಯ. ಯಶಸ್ವಿ ಬೆಳೆ ಉತ್ಪಾದನೆಗೆ ಮೊದಲ ಹೆಜ್ಜೆ ಉತ್ತಮ ಗುಣಮಟ್ಟದ ಬೀಜದ ಬಳಕೆ. ಗುಣಮಟ್ಟದ ಬೀಜವು ಅಗತ್ಯವಾದ ಅನುವಂಶಿಕ ಮತ್ತು ಭೌತಿಕ ಶುದ್ಧತೆಯನ್ನು ಹೊಂದಿರುತ್ತದೆ. ಬೀಜವು ದೈಹಿಕವಾಗಿ ಸದೃಢತೆ ಮತ್ತು ಆರೋಗ್ಯ ಸ್ಥಿತಿಯೊಂದಿಗೆ ಇರುತ್ತದೆ.
- ಇಳುವರಿಯನ್ನು ಹೆಚ್ಚಿಸಲು ಗುಣಮಟ್ಟದ ಬೀಜಗಳನ್ನು ಉಪಯೋಗಿಸುವುದು ಒಂದು ಪ್ರಮುಖ ಅಂಶವೆಂದು ಪರಿಗಣಿಸಲಾಗುತ್ತದೆ.
- ಗುಣಮಟ್ಟದ ಬೀಜಗಳ ಬಳಕೆಯು ದೇಶದ ಆಹಾರ ಭದ್ರತೆಯನ್ನು ಸುಧಾರಿಸಿ, ದೇಶಕ್ಕೆ ಹೆಚ್ಚಿನ ಉತ್ಪಾದನೆಯಲ್ಲಿ ಗಣನೀಯವಾಗಿ ಸಹಾಯ ಮಾಡುತ್ತದೆ.

ಬೀಜ ಎಂದರೆ ಏನು?

ಬೀಜವು ಬಿತ್ತನೆಗೆ ಬಳಸುವ ಅಥವಾ ಪುನರುತ್ಪಾದನೆಯ ಉದ್ದೇಶಕ್ಕಾಗಿ ಬಳಸುವ ವಸ್ತುವಾಗಿದೆ. ವೈಜ್ಞಾನಿಕವಾಗಿ, ಬೀಜವು ಫಲವತ್ತಾದ ಪಕ್ವಗೊಂಡ ಅಂಡಾಣು, ಭ್ರೂಣ, ಆಹಾರ ಸಂಗ್ರಹಣೆ ಮತ್ತು ರಕ್ಷಣಾತ್ಮಕ ಬೀಜದ ಕವಚವನ್ನು ಒಳಗೊಂಡಿರುತ್ತದೆ. ಬೀಜ ಕಾಯ್ದೆ 1966ರ ಪ್ರಕಾರ ಬೀಜ ಎಂದರೆ ಬಿತ್ತನೆಗೆ ಉಪಯೋಗಿಸುವ ಯಾವುದೆ ವಸ್ತುವಾಗಿರಬಹುದು ಮತ್ತು ಅದು ಬೆಳೆದು ಸಸಿ, ಮರವಾಗಿ ಪರಿವರ್ತನೆ ಆಗುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಉದಾಹರಣೆಗೆ ಗಡ್ಡೆ, ಗೆಣಸು, ಬೇರು, ಕಾಂಡ ಮತ್ತು ಎಲ್ಲಾ ರೀತಿಯ ಬಿತ್ತನೆಗೆ ಬಳಸುವ ವಸ್ತುಗಳನ್ನು ಬೀಜವೆಂದು ಹೇಳಬಹುದು.

ಗುಣಮಟ್ಟದ ಬೀಜ ವೈಶಿಷ್ಟತೆಗಳು

- ಬೀಜವು ಅನುವಂಶಿಕವಾಗಿ ಶುದ್ಧವಾಗಿರುತ್ತದೆ. ಉದಾಹರಣೆಗೆ: ತಳಿವರ್ಧಕ ಬೀಜ–ಶೇ. 100, ಮೂಲ ಬೀಜ–ಶೇ. 99, ಪ್ರಮಾಣೀಕರಣ ಬೀಜ–ಶೇ. 98, ನಿಜ ಬೀಜ–ಶೇ. 95 ಅನುವಂಶಿಕ ಶುದ್ಧತೆಯನ್ನು ಹೊಂದಿರುತ್ತದೆ.
- ಬೀಜವು ಭೌತಿಕ ಶುದ್ಧತೆಯನ್ನು ಹೊಂದಿರಬೇಕು (ಇತರೆ ಬೆಳೆ ಬೀಜ, ಕಳೆ ಬೀಜ ಮತ್ತು ಜಡ ವಸ್ತುಗಳ ಮಿಶ್ರಣವಿರಬಾರದು). ಬೀಜವು ಹೆಚ್ಚಿನ ಮೊಳಕೆಯೊಡೆಯುವ ಶಕ್ತಿ, ಮೊಳಕೆಯೊಡೆಯುವ ಪ್ರಮಾಣ ಮತ್ತು ಮೊಳಕೆಯೊಡೆಯುವ ಸಾಮರ್ಥ್ಯವನ್ನು ಹೊಂದಿರಬೇಕು.
- ಬೀಜವು ಬೀಜದಿಂದ ಹರಡುವ ರೋಗ ಮತ್ತು ಕೀಟಗಳಿಂದ ಮುಕ್ತವಾಗಿರಬೇಕು. ಬೀಜವು ಮೊಳಕೆಯೊಡೆಯುವ ಸಾಮರ್ಥ್ಯದೊಂದಿಗೆ ಹೆಚ್ಚಿನ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಮರ್ಥ್ಯವನ್ನು ಹೊಂದಿರುತ್ತದೆ.
- ಬೀಜವು ಯಾವುದೇ ದೌರ್ಬಲ್ಯವಿಲ್ಲದೆ ಮತ್ತು ಆರೋಗ್ಯಕರವಾಗಿರಬೇಕು. ಆರೋಗ್ಯಕರವಾದ ಸಸ್ಯಗಳನ್ನು ಉತ್ಪಾದಿಸಲು ಬೀಜವು ಸಮಾನವಾದ ಗಾತ್ರ ಮತ್ತು ತೂಕ ಹೊಂದಿರುತ್ತದೆ.

ಗುಣಮಟ್ಟದ ಬೀಜದ ಪ್ರಾಮುಖ್ಯತೆ

ಬೆಳೆ ಉತ್ಪಾದನೆಯಲ್ಲಿ ಬೀಜವು ಅತ್ಯಂತ ಅಗತ್ಯವಾದ ಪರಿಕರ. ಬೆಳೆ ಉತ್ಪಾದನೆಯಲ್ಲಿ ಬೇರೆ ಪರಿಕರಗಳ ಪ್ರಕ್ರಿಯೆಯು ಬಳಸಿದ ಬಿತ್ತನೆ ಬೀಜದ ಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ. ಗುಣಮಟ್ಟದ ಬೀಜದ ಇಳುವರಿಯು ಸಾಮಾನ್ಯ ಬೀಜಕ್ಕೆ ಹೋಲಿಸಿದರೆ ಹೆಚ್ಚು. ಬಿತ್ತನೆ ಬೀಜದ ವೆಚ್ಚವು ಇತರ ಪರಿಕರಗಳ ವೆಚ್ಚಕ್ಕೆ ಹೋಲಿಸಿದರೆ ತುಂಬಾ ಕಡಿಮೆ ಹೀಗಾಗಿ ಗುಣಮಟ್ಟದ ಬೀಜ ಬಳಕೆ ಮತ್ತು ಉತ್ಪಾದನೆ ತುಂಬಾ ಅಗತ್ಯ. ಉತ್ತಮ ಗುಣಮಟ್ಟದ ಬೀಜದ ಉಪಯೋಗದಿಂದ ರೈತರ ಆದಾಯವನ್ನು ಹೆಚ್ಚಿಸಬಹುದು. ಹಾಗೆಯೇ, ಗುಣಮಟ್ಟದ ಬೀಜದಿಂದ ಬೆಳೆದ ಉತ್ಪನ್ನಗಳಿಗೆ ತುಂಬಾ ಬೇಡಿಕೆ ಇದ್ದು ಸುಲಭವಾಗಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಬಹುದು. ಸುಧಾರಿತ ತಳಿಗಳು ಮತ್ತು ಉತ್ತಮ ಗುಣಮಟ್ಟದ ಬೀಜಗಳ ಇಳುವರಿಯು ಸಾಮಾನ್ಯ ಬೀಜದ ಇಳುವರಿಗೆ ಹೋಲಿಸಿದಾಗ ಶೇ.20–25 ಹೆಚ್ಚಳವಾಗಿರುತ್ತದೆ. ಗುಣಮಟ್ಟದ

ಬೀಜೋತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಆಹಾರ ಭದ್ರತೆಯನ್ನು ಹೆಚ್ಚಿಸಬಹುದು.

ಸುಧಾರಿತ ಬೀಜಗಳ ಪಾತ್ರ

ಸುಧಾರಿತ ಬೀಜಗಳು ಹೊಸ ತಂತ್ರಜ್ಞಾನದ ವಾಹಕವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆಹಾರ ಭದ್ರತೆಗೆ ಒಂದು ಮೂಲಭೂತ ಸಾಧನ. ಕೃಷಿಗೆ ಅಷ್ಟೊಂದು ಸೂಕ್ತವಿಲ್ಲದ ಪ್ರದೇಶದಲ್ಲೂ ಕೂಡ ಉತ್ತಮವಾದ ಬೆಳೆ ಬೆಳೆಯಲು ಪ್ರಮುಖ ಆಧಾರವಾಗಿರುತ್ತದೆ. ನೈಸರ್ಗಿಕ ವಿಕೋಪಗಳ ನಂತರ ಕೃಷಿಭೂಮಿಯನ್ನು ತ್ವರಿತವಾಗಿ ಮರುಸ್ಥಾಪಿಸಲು ಬೀಜ ಒಂದು ಉತ್ತಮವಾದ ಮಾರ್ಗವಾಗಿದೆ.

ಗುಣಮಟ್ಟದ ಬೀಜಗಳಿಂದಾಗುವ ಪ್ರಯೋಜನಗಳು

ಉತ್ತಮ ಗುಣಮಟ್ಟದ ಬೀಜಗಳು ಅನುವಂಶಿಕವಾಗಿ ಶುದ್ಧವಾಗಿರುತ್ತವೆ ಮತ್ತು ತಳಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಂಡು ಹೆಚ್ಚಿನ ಲಾಭವನ್ನು ನೀಡುತ್ತವೆ. ರೋಗ, ಕೀಟ, ಕಳೆ ಮತ್ತು ಇತರೆ ಬೆಳೆ ಬೀಜಗಳಿಂದ ಮುಕ್ತವಾಗಿರುತ್ತವೆ. ಬೀಜ ಮೊಳಕೆ ಪ್ರಮಾಣ ಉತ್ತಮವಾಗಿದ್ದು, ಒಟ್ಟಿಗೆ ಮೊಳಕೆಯೊಡೆದು ಒಂದೇ ತೆರನಾಗಿ ಕಾಣುತ್ತವೆ. ಹವಾಮಾನ ವೈಪರಿತ್ಯ ಸಮಯದಲ್ಲೂ ಉತ್ತಮವಾದ ಇಳುವರಿ ನೀಡಲು ಸಹಾಯ ಮಾಡುತ್ತವೆ. ಗುಣಮಟ್ಟದ ಬೀಜಗಳು ರಸಗೊಬ್ಬರಗಳು ಮತ್ತು ಪೋಷಕಾಂಶಗಳ ಪ್ರಯೋಜನವನ್ನು ಉತ್ತಮವಾಗಿ ಬಳಸಿಕೊಳ್ಳುತ್ತವೆ. ಉತ್ತಮ ಗುಣಮಟ್ಟದ ಬೀಜಗಳಿಂದ ಬೆಳೆದ ಬೆಳೆಗಳು ಒಂದೇ ಸಮಯಕ್ಕೆ ಕಟಾವಿಗೆ ಬರುತ್ತವೆ ಮತ್ತು ಬೆಳೆದ ಬೆಳೆ ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯ ಹಾಗೂ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆ ದೊರೆಯುತ್ತದೆ.

ಗುಣಮಟ್ಟದ ಬೀಜಗಳು ಆದಾಯವನ್ನು ಹೇಗೆ ಹೆಚ್ಚಿಸುತ್ತವೆ

ಗುಣಮಟ್ಟದ ಬೀಜಗಳು ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಏಕೆಂದರೆ ಬೀಜವು ಹೆಚ್ಚಿನ ಮೊಳಕೆಯೊಡೆಯುವಿಕೆಯ ಪ್ರಮಾಣ, ರೋಗ ನಿರೋಧಕತೆ ಮತ್ತು ಸ್ಥಳೀಯ ಪರಿಸ್ಥಿತಿಗಳಿಗೆ ಉತ್ತಮ ಹೊಂದಾಣಿಕೆಯಂತಹ ಗುಣಲಕ್ಷಣಗಳನ್ನು ಹೊಂದಿದ್ದು, ಹೆಚ್ಚಿನ ಇಳುವರಿಯೊಂದಿಗೆ ಆರೋಗ್ಯಕರ ಸಸ್ಯಗಳಿಗೆ ಕಾರಣವಾಗುತ್ತವೆ. ಸುಧಾರಿತ ಬೀಜಗಳು ಉತ್ಪಾದಕತೆಯನ್ನು ಹೆಚ್ಚಿಸುವ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಉದಾಹರಣೆಗೆ; ಬರ ಅಥವಾ ಕೀಟ ನಿರೋಧಕತೆ ಮತ್ತು ಸುಧಾರಿತ ಪೌಷ್ಟಿಕಾಂಶದ ಅಂಶ. ಇವೆಲ್ಲವು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಗೊಂಡು ಕೃಷಿ ಉತ್ಪಾದನೆಗೆ ಪೂರಕವಾಗಿ ಸಹಾಯಮಾಡುತ್ತವೆ.

1. ಹೆಚ್ಚಿನ ಇಳುವರಿ ಸಾಮರ್ಥ್ಯ: ಸಾಂಪ್ರದಾಯಿಕ ಅಥವಾ ಕಡಿಮೆ–ಗುಣಮಟ್ಟದ ಬೀಜಗಳಿಗೆ ಹೋಲಿಸಿದರೆ ಹೆಚ್ಚಿನ ಇಳುವರಿ ಸಾಮರ್ಥ್ಯವನ್ನು ಹೊಂದಲು ಗುಣಮಟ್ಟದ ಬೀಜಗಳನ್ನು ಸ್ಥಳೀಯವಾಗಿ ಸುಧಾರಿಸಲಾಗುತ್ತದೆ. ಇದರಿಂದಾಗಿ ಆದಾಯ ಹೆಚ್ಚುತ್ತದೆ.

2. ಕೀಟ ಮತ್ತು ರೋಗಗಳಿಗೆ ಪ್ರತಿರೋಧ: ಗುಣಮಟ್ಟದ ಬೀಜಗಳಲ್ಲಿ ಸಾಮಾನ್ಯವಾಗಿ ಕೀಟ ಮತ್ತು ರೋಗಗಳಿಗೆ ವಿರುದ್ಧವಾಗಿ ಹೋರಾಡುವ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸಿ, ಬೆಳೆ ನಷ್ಟದ ಅಪಾಯವನ್ನು ಕಡಿಮೆ ಮಾಡುವುದಲ್ಲದೆ, ಕೀಟ ಮತ್ತು ರೋಗ ನಿರ್ವಹಣೆ ಕ್ರಮದ ಅಗತ್ಯವನ್ನು ಕಡಿಮೆ ಮಾಡಿ ಹೆಚ್ಚಿನ ಲಾಭವನ್ನು ಖಚಿತ ಪಡಿಸುತ್ತದೆ.

3. ಪರಿಸರದ ಪರಿಸ್ಥಿತಿಗೆ ಉತ್ತಮ ಹೊಂದಾಣಿಕೆ: ಬರಗಾಲ ಮತ್ತು ಸಮಸ್ಯಾತ್ಮಕ ಮಣ್ಣಿನಲ್ಲೂ ಕೂಡ ಉತ್ತಮವಾಗಿ ಹೊಂದಿಕೊಂಡು, ಬೆಳೆ ಯಶಸ್ಸಿಗೆ ಉತ್ತಮವಾದ ಅವಕಾಶವನ್ನು ಒದಗಿಸಿಕೊಟ್ಟು, ಲಭ್ಯವಿರುವ ಪರಿಕರಗಳ ಸಹಾಯದಿಂದ ಹೆಚ್ಚಿನ ಆದಾಯಕ್ಕೆ ಕಾರಣವಾಗುತ್ತದೆ.

4. ಸುಧಾರಿತ ಗುಣಮಟ್ಟ: ಗುಣಮಟ್ಟದ ಬೀಜಗಳು ಉತ್ತಮ ಗುಣಮಟ್ಟದ ಉತ್ಪನ್ನಗಳ ಉತ್ಪಾದನೆಗಳಿಗೆ ಕಾರಣವಾಗುತ್ತವೆ. ಇದು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯನ್ನು ತಂದುಕೊಡುತ್ತದೆ. ಹಾಗೆಯೇ, ಇದು ರೈತರಿಗೆ ಹೆಚ್ಚಿನ ಆದಾಯಕ್ಕೆ ಕಾರಣವಾಗುತ್ತದೆ.

5. ವರ್ಧಿತ ಏಕರೂಪತೆ: ಗುಣಮಟ್ಟದ ಬೀಜಗಳ ಗಾತ್ರ, ಆಕಾರ ಮತ್ತು ಪಕ್ವತೆಯಂತಹ ಹೆಚ್ಚು ಏಕರೂಪದ ಗುಣಲಕ್ಷಣಗಳೊಂದಿಗೆ ಬೆಳೆಗಳನ್ನು ಉತ್ಪಾದಿಸುತ್ತದೆ. ಈ ಏಕರೂಪತೆ ಕೊಯ್ಲು ಸಂಸ್ಕರಣೆ ಮತ್ತು ಮಾರಾಟವನ್ನು ಸರಳಗೊಳಿಸಿ ವೆಚ್ಚದಲ್ಲಿ ಉಳಿತಾಯವಾಗಿ, ಹೆಚ್ಚಿನ ಆದಾಯಕ್ಕೆ ಕಾರಣವಾಗುತ್ತದೆ.

6. ವೇಗವಾಗಿ ಮೊಳಕೆಯೊಡೆಯುವಿಕೆ ಮತ್ತು ಬೆಳವಣಿಗೆ: ಗುಣಮಟ್ಟದ ಬೀಜಗಳು ವಿಶಿಷ್ಟವಾಗಿ ಹೆಚ್ಚಿನ ಮೊಳಕೆಯೊಡೆಯುವುದರ ಜೊತೆಗೆ ವೇಗವಾಗಿ ಬೆಳೆದು ಬೇಗನೆ ಕೊಯ್ಲುಮಾಡಲು ಅನುವು ಮಾಡಿಕೊಡುತ್ತದೆ. ಇದು ಬೆಳೆಯ ತ್ವರಿತ ವಹಿವಾಟಿಗೆ ಮತ್ತು ವರ್ಷಕ್ಕೆ ಹೆಚ್ಚು ಬೆಳೆ ಬೆಳೆಯಲು ಕಾರಣವಾಗುತ್ತದೆ.

7. ಪರಿಕರಗಳ ವೆಚ್ಚದಲ್ಲಿ ಕಡಿಮೆ: ಕಡಿಮೆ ಗುಣಮಟ್ಟದ ಬೀಜಗಳಿಗೆ ಹೋಲಿಸಿದರೆ ಗುಣಮಟ್ಟದ ಬೀಜಗಳಿಗೆ ರಸಗೊಬ್ಬರಗಳು, ಕೀಟನಾಶಕಗಳು ಮತ್ತು ನೀರಿನಂತಹ ಕೃಷಿ ಪರಿಕರಗಳ ಕಡಿಮೆ ಪ್ರಮಾಣದಲ್ಲಿ ಬಳಸಬಹುದಾಗಿದೆ. ಇದು ರೈತರಿಗೆ ವೆಚ್ಚ ಉಳಿತಾಯಕ್ಕೆ ಕಾರಣವಾಗಿದೆ. ನಿವ್ವಳ ಆದಾಯವನ್ನು ಹೆಚ್ಚಿಸುತ್ತದೆ.

8. ಮಾರುಕಟ್ಟೆಯಲ್ಲಿ ಆದ್ಯತೆ: ಗುಣಮಟ್ಟದ ಬೀಜಗಳಿಂದ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಬೆಳೆಯಬಹುದು. ಅಂತಹ ಉತ್ಪನ್ನಗಳಿಗೆ ಗ್ರಾಹಕರು ಆದ್ಯತೆ ನೀಡುತ್ತಾರೆ ಮತ್ತು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯನ್ನು ಪಡೆದು ರೈತರು ತಮ್ಮ ಆದಾಯವನ್ನು ಗರಿಷ್ಠಗೊಳಿಸಿಕೊಂಡು ಹೆಚ್ಚಿನ ಲಾಭವನ್ನು ಪಡೆದುಕೊಳ್ಳಬಹುದು.

ಹೀಗೆ ಗುಣಮಟ್ಟದ ಬೀಜಗಳಲ್ಲಿ ಹೂಡಿಕೆ ಮಾಡುವುದು ಕೃಷಿ ಉತ್ಪಾದಕತೆ ಮತ್ತು ಲಾಭದಾಯಕತೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಅತ್ಯಗತ್ಯ ಹೆಜ್ಜೆಯಾಗಿದೆ. ಬೆಳೆ ಇಳುವರಿಯನ್ನು ಸುಧಾರಿಸಿ, ಕೃಷಿ ಪರಿಕರಗಳ ವೆಚ್ಚವನ್ನು ಕಡಿಮೆ ಮಾಡಿ ಬೆಳೆದ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದ್ದು, ರೈತರು ತಮ್ಮ ಆದಾಯವನ್ನು ಹೆಚ್ಚಿಸಲು ಗುಣಮಟ್ಟದ ಬೀಜಗಳಲ್ಲಿ ಹೂಡಿಕೆ ಮಾಡುವುದು ಮುಖ್ಯವಾಗಿರುತ್ತದೆ. ಒಟ್ಟಿನಲ್ಲಿ ಗುಣಮಟ್ಟದ ಬೀಜಗಳು ಕೃಷಿ ಉತ್ಪಾದಕತೆ, ಲಾಭದಾಯಕತೆ ಮತ್ತು ಸುಸ್ಥಿರತೆಯನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಬೀಜ ಆಯ್ಕೆ ಮತ್ತು ನಿರ್ವಹಣಾ ಪದ್ಧತಿಗಳಲ್ಲಿ ಗುಣಮಟ್ಟಕ್ಕೆ ಆಧ್ಯತೆ ನೀಡುವುದರ ಮೂಲಕ, ರೈತರು ಆಹಾರ ಭದ್ರತೆ ಮತ್ತು ಪರಿಸರ ಸಂರಕ್ಷಣೆಯೊಂದಿಗೆ ಹೆಚ್ಚಿನ ಆದಾಯವನ್ನು ಪಡೆಯಬಹುದು.

ಕೆರೆಗಳಲ್ಲಿ ಮೀನು ಸಾಕಣೆ

ಪ್ರಕಾಶ್ ಪವಾಡಿ[1], 8880483957 ಮತ್ತು ಶ್ರುತಿಶ್ರೀ ಸಿ.[2], [1]ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆ, [2]ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಬಬ್ಬೂರ್ ಫಾರ್ಮ್, ಹಿರಿಯೂರು

ಕರ್ನಾಟಕ ರಾಜ್ಯದಲ್ಲಿ ಸುಮಾರು 5.65 ಲಕ್ಷ ಹೆ. ನಿಂತ ನೀರಿನ ಜಲ ಸಂಪನ್ಮೂಲಗಳಿದ್ದು, 82 ದೊಡ್ಡ ಜಲಾಶಯಗಳು, 3906 ಇಲಾಖೆ ಕೆರೆಗಳು ಮತ್ತು 23767 ಗ್ರಾಮ ಪಂಚಾಯತಿ ಕೆರೆಗಳಿವೆ. ಇವುಗಳ ಜೊತೆಗೆ 9000 ಕಿ.ಮೀ. ನಷ್ಟು ನದಿ ಮತ್ತು ನಾಲೆಗಳು ಹಾಗೂ 8000 ಹೆ. ನಷ್ಟು ಹಿನ್ನೀರು ಆವರಿಸಿಕೊಂಡಿದೆ. ಇವುಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಮೀನುಗಾರಿಕೆಗೆ ವಿಪುಲ ಅವಕಾಶಗಳಿವೆ. ಜಿಲ್ಲೆಯಲ್ಲಿ 40 ಹೆಕ್ಟೇರ್‌ಗಿಂತ ಹೆಚ್ಚಿನ ಅಚ್ಚುಕಟ್ಟು ವಿಸ್ತಾರವಿರುವ 448 ಇಲಾಖೆ ಕೆರೆಗಳು, 40 ಹೆಕ್ಟೇರ್‌ಗಿಂತ ಕಡಿಮೆ ಇರುವ ಗ್ರಾಮ ಪಂಚಾಯತಿಗೆ ಒಳಪಡುವ ಕೆರೆಗಳು, 9 ಜಲಾಶಯಗಳು, ಮೀನು ಸಾಕಾಣಿಕೆ ಕೊಳಗಳು ಮತ್ತು ಕೃಷಿ ಹೊಂಡಗಳು ಸೇರಿ ಒಟ್ಟು 50 ಸಾವಿರ ಹೆಕ್ಟೇರ್ ಪ್ರದೇಶವನ್ನು ಹೊಂದಿದೆ. ಜಿಲ್ಲೆಯಲ್ಲಿ 09 ನದಿ ಭಾಗಗಳು ಇದ್ದು, ಒಟ್ಟು 245 ಕಿಲೋಮೀಟರ್ ಉದ್ದವನ್ನು ಹೊಂದಿದೆ.

ವಾರ್ಷಿಕ ಜಿಲ್ಲೆಯಲ್ಲಿ 2300 ಲಕ್ಷ ಮೀನು ಮರಿಗಳು ಇಲಾಖಾ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಿಂದ ಉತ್ಪತ್ತಿಯಾಗುತ್ತವೆ. ಜಿಲ್ಲೆಯಲ್ಲಿರುವ ಇಲಾಖಾ ಹಾಗೂ ಗ್ರಾಮ ಪಂಚಾಯತ್ ಕೆರೆಗಳಿಗೆ ಒಟ್ಟು 320 ಲಕ್ಷ ಮೀನು ಮರಿಗಳು ಬಿತ್ತನೆಯಾಗುತ್ತದೆ ಹಾಗೂ ವಾರ್ಷಿಕ ಜಿಲ್ಲೆಯಲ್ಲಿ 23454 ಟನ್ ಮೀನು ಉತ್ಪಾದನೆಯಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 5735 ಪೂರ್ಣಕಾಲಿಕ ಮೀನುಗಾರರು ಹಾಗೂ 3501 ಅರೆಕಾಲಿಕ ಮೀನುಗಾರರಿರುತ್ತಾರೆ. 12 ಮೀನುಗಾರರ ಸಹಕಾರ ಸಂಘಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೆರೆಗಳನ್ನು ನೀರಿನ ಲಭ್ಯತೆಗೆ ಅನುಗುಣವಾಗಿ ವರ್ಷದಲ್ಲಿ 6 ರಿಂದ 8 ತಿಂಗಳವರೆಗೆ ನೀರಿನಿಂದ ತುಂಬಿರುವ ಕೆರೆಗಳು ಮತ್ತು ವರ್ಷವಿಡೀ ನೀರನ್ನು ಹೊಂದಿರುವ ಕೆರೆಗಳು ಎಂದು ವಿಂಗಡಿಸಲಾಗಿದೆ.

ಕೆರೆಗಳ ನಿರ್ವಹಣೆ: ದೀರ್ಘಾವಧಿ ಕೆರೆಗಳಲ್ಲಿ ಜಲಸಸ್ಯ ಕಳೆಗಳು ಮತ್ತು ಅನಗತ್ಯ ಹಾಗೂ ಹಾನಿಕಾರಕ ಮೀನುಗಳ ಹತೋಟಿ ಮುಖ್ಯ. ಕಳೆಗಳನ್ನು ಕಾಲಕಾಲಕ್ಕೆ ಕಿತ್ತು ಹಾಕುವುದರಿಂದ, ಶಿಫಾರಸ್ಸಿನಂತೆ ಕಳೆನಾಶಕಗಳನ್ನು ಬಳಸಿ ಇಲ್ಲವೆ. ಜೈವಿಕ ವಿಧಾನದಲ್ಲಿ ಹುಲ್ಲುಗೆಂಡೆ ಮೀನುಗಳನ್ನು ಬಿತ್ತಿ ಬೆಳೆಯುವುದರಿಂದ ನಿಯಮಿತವಾಗಿಟ್ಟು ಕೊಳ್ಳಬಹುದು. ಅಲ್ಪಾವಧಿ ಕೆರೆಗಳಲ್ಲಿ ನೀರು ಬೇಸಿಗೆ ಕಾಲದಲ್ಲಿ ಸಂಪೂರ್ಣವಾಗಿ ಬತ್ತಿ ಹೋಗುವುದರಿಂದ ಜಲ ಸಸ್ಯಗಳ ಮತ್ತು ಅನಗತ್ಯ ಹಾಗೂ ಹಾನಿಕಾರಕ ಮೀನುಗಳ ತೊಂದರೆಗಳು ಇರುವುದಿಲ್ಲ. ಕೆರೆಯಿಂದ ವ್ಯವಸ್ಥಿತ ರೀತಿಯಲ್ಲಿ ನೀರು ಹೊರಹೋಗುವಂತೆ ತೂಬುಗಳನ್ನು ಹಾಕಬೇಕು. ಅಲ್ಲದೆ ತೂಬಿನ ಬಾಯಿಯನ್ನು ಮರಿಗಳು ಹೊರಹೋಗದಂತೆ ಜಾಲರಿ ಅಳವಡಿಸಬೇಕು. ಕೆರೆಯ ಏರಿಯ ಮೇಲೆ ಕಾವಲುಗಾರಿಕೆಗಾಗಿ ಗುಡಿಸಲು ನಿರ್ಮಿಸಿಕೊಳ್ಳಬಹುದು.

ಕೆರೆಗಳ ಫಲವತ್ತತೆ: ನೀರಿನ ಆಮ್ಲೀಯತೆಗೆ ಅನುಗುಣವಾಗಿ ಎಕರೆಗೆ ಸುಮಾರು 200–400 ಕಿ.ಗ್ರಾಂ ನಷ್ಟು ಸುಣ್ಣವನ್ನು ಹಾಕಿ ಸರಿಪಡಿಸಬೇಕು. ಸಾಧ್ಯವಾದ ಕಡೆ ಕೆರೆಗೆ ಮೀನು ಮರಿಗಳನ್ನು ಬಿಡುವ 7 ದಿನಗಳ ಮುಂಚಿತವಾಗಿ ಹಸಿ ಸಗಣಿ ಗೊಬ್ಬರವನ್ನು 1–2 ಟನ್‌ನಂತೆ ಇಲ್ಲವೆ 500 ಕಿ.ಗ್ರಾಂ ಕೋಳಿಗೊಬ್ಬರ; 20 ಕಿ.ಗ್ರಾಂ ಸೂಪರ್‌ಫಾಸ್ಫೇಟ್ ಮತ್ತು 10 ಕಿ.ಗ್ರಾಂ ಯೂರಿಯ ಗೊಬ್ಬರಗಳನ್ನು ಬಗ್ಗಡದ ರೂಪದಲ್ಲಿ ಕೆರೆಗೆ ಹಾಕಬೇಕು. ಮೀನುಗಳ ನೈಸರ್ಗಿಕ ಆಹಾರ ಉತ್ಪಾದನೆ ನಿರಂತರವಾಗಿರಲು ಪ್ರತಿ ತಿಂಗಳು 500 ಕಿ.ಗ್ರಾಂ ಸಗಣಿಗೊಬ್ಬರ ಇಲ್ಲವೆ 100–150 ಕಿ.ಗ್ರಾಂ ಕೋಳಿಗೊಬ್ಬರ, 10 ಕಿ.ಗ್ರಾಂ ಸೂಪರ್‌ಫಾಸ್ಫೇಟ್ ಹಾಗೂ 5 ಕಿ.ಗ್ರಾಂ ಯೂರಿಯ ಹಾಕುತ್ತಿರಬೇಕು. ಸಾರ್ವಜನಿಕ ಕೆರೆಗಳಲ್ಲಿ ಮೀನು ಸಾಕಣೆ ಮಾಡುವಾಗ ಗೊಬ್ಬರ ಹಾಕುವುದನ್ನು ಸೂಕ್ಷ್ಮವಾಗಿ ಕೈಗೊಳ್ಳಬೇಕು.

ಮೀನು ಮರಿಗಳ ಬಿತ್ತನೆ: ಮೀನು ಮರಿಗಳ ಲಭ್ಯತೆಗೆ ಅನುಗುಣವಾಗಿ ಕಾಟ್ಲ, ರೋಹು, ಮೃಗಾಲ್ ಮೀನು ಮರಿಗಳನ್ನು 4:3:3 ರ ಅನುಪಾತದಲ್ಲಿ ಬಿತ್ತಬೇಕು. ಕೆರೆಯಲ್ಲಿ ಜಲಸಸ್ಯಗಳ ಲಭ್ಯತೆ ಇದ್ದಲ್ಲಿ ಮತ್ತು ನೀರು ಹಸಿರು ಬಣ್ಣವಿದ್ದಲ್ಲಿ ಬೆಳ್ಳಿಗೆಂಡೆ, ಹುಲ್ಲುಗೆಂಡೆ, ಸಾಮಾನ್ಯಗೆಂಡೆ ಮೀನುಮರಿಗಳನ್ನು ಸಹ ಕಾಟ್ಲ, ರೋಹು, ಮೃಗಾಲ್ ಮೀನು ಮರಿಗಳ ಜೊತೆ 2.5:1.5:1.0:2.0:1.0:2.0 ರ ಅನುಪಾತದಲ್ಲಿ ಬಿತ್ತಬಹುದು. ಕೇವಲ ನೈಸರ್ಗಿಕ ಆಹಾರದ ಲಭ್ಯತೆಗೆ ಅನುಗುಣವಾಗಿ ಸಾಕಣೆ ಮಾಡುವುದಾದರೆ ಎಕರೆಗೆ 1500–2000 ಮರಿಗಳನ್ನು ಆಹಾರವನ್ನು ಒದಗಿಸುವುದಾದರೆ ಎಕರೆಗೆ 3000 ಮೀನುಮರಿಗಳವರೆಗೆ ಬಿತ್ತನೆ ಮಾಡಬಹುದು. ದೊಡ್ಡ ಗಾತ್ರದ ಮೀನು ಮರಿಗಳು ಹಾಗೂ ಬೆಳವಣಿಗೆ ಕುಂಠಿತ ಮೀನು ಮರಿಗಳನ್ನು ಬಿತ್ತುವುದು ಉತ್ತಮ. ಸಾಮಾನ್ಯವಾಗಿ ಕೆರೆಯಲ್ಲಿ ಹೆಚ್ಚು ನೀರು ತುಂಬಿದ ನಂತರ (ಆಗಸ್ಟ್–ಅಕ್ಟೋಬರ್) ಮೀನು ಮರಿಗಳನ್ನು ಬಿತ್ತನೆ ಮಾಡುವುದು ಸೂಕ್ತ.

ಮೀನು ಮರಿ ಬಿತ್ತನೆಯ ನಂತರದ ನಿರ್ವಹಣೆ: ಸಾಧ್ಯವಾದ ಕಡೆ ಕೆರೆಗಳಿಗೆ ಕಡಿಮೆ ಪ್ರಮಾಣದಲ್ಲಿ ಸಗಣಿ/ಕೊಟ್ಟಿಗೆ ಗೊಬ್ಬರವನ್ನು ಎಕರೆಗೆ ಪ್ರತಿ ತಿಂಗಳು 200–500 ಕೆ.ಜಿ. ಯಂತೆ ಹಾಕುವುದು. ಮೀನಿನ ಉತ್ತಮ ಬೆಳವಣಿಗೆಗೆ ಪೋಷಕ ಆಹಾರವಾಗಿ ಶೇಂಗಾ ಹಿಂಡಿ ಹಾಗೂ ಅಕ್ಕಿತೌಡನ್ನು 1:1 ರ ಪ್ರಮಾಣದಲ್ಲಿ ಬೆರೆಸಿ ಮೀನುಮರಿ ಬಿತ್ತನೆ ಮಾಡಿದ 2–3 ತಿಂಗಳ ನಂತರ ಪ್ರತಿ ದಿನ ನೀಡುವುದು ಉತ್ತಮ. ಒಂದು ಎಕರೆಗೆ

ಪುಟ 28ರಲ್ಲಿ ಮುಂದುವರೆದಿದೆ. . .

ವಿಶ್ವವಿದ್ಯಾಲಯ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು

✍ ಸುಧಾರಾಣಿ ಎನ್.[1], 9482024908, ಸಹನ ಎಸ್.[2] ಮತ್ತು ಅಂಜಲಿ ಎಂ. ಪಿ.[3], [1&3]ಐ.ಸಿ.ಎ.ಆರ್.– ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ,
[2]ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ, ಇರುವಕ್ಕಿ

ಭಾರತವು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದ್ದು ಹಾಗೂ ವಿವಿಧ ಸಂಪನ್ಮೂಲಗಳ ನೆಲೆಯಾಗಿದೆ. ಈ ಸಂಪನ್ಮೂಲಗಳ ಬಳಕೆಗೆ ಕೌಶಲ್ಯದ ಅಗತ್ಯ ಇಂದು ತುರ್ತಾಗಿದೆ. ಈ ಹಿನ್ನೆಲೆಯಲ್ಲಿ ಕೌಶಲ್ಯಾಭಿವೃದ್ಧಿಯು ಭಾರತದ ಯುವಕರೇ ಅಭಿವೃದ್ಧಿಗೆ ಅತ್ಯಗತ್ಯ ಅಂಶವೆಂದು ಪರಿಗಣಿಸಲಾಗಿದೆ. ನೀತಿ ಆಯೋಗದ ವರದಿಯ ಪ್ರಕಾರ ಭಾರತವು ಮುಂದುವರಿದ ಆರ್ಥಿಕತೆಗಳಿಗೆ ಹೋಲಿಸಿದರೆ ಸರಾಸರಿ 20 ರಿಂದ 25ರ ಕಿರಿಯರ ವಯಸ್ಸಿನ ಜನಸಂಖ್ಯೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವ ದೇಶವಾಗಿದೆ. ಈ ಕಿರಿಯ ವಯಸ್ಸಿನ ಯುವಕ–ಯುವತಿಯರನ್ನು ಸೂಕ್ತವಾದ ಕೌಶಲ್ಯಗಳನ್ನು ಕಲಿಸಿ, ಅವರ ಕೌಶಲ್ಯಗಳನ್ನು ಲಾಭಾಂಶವಾಗಿ ಪರಿವರ್ತಿಸುವ ಮೂಲಕ ನಮ್ಮ ದೇಶ ವಿಶ್ವದ ಮಾನವ ಸಂಪನ್ಮೂಲದ ರಾಜಧಾನಿಯಾಗಿ ಮಾಡಬಹುದಾಗಿದೆ.

ಆದಾಗ್ಯೂ, ಭಾರತದಲ್ಲಿನ ಅಲ್ಪಪ್ರಮಾಣದ ವೃತ್ತಿಪರ ತರಬೇತಿ, ಹೆಚ್ಚಿನ ಪ್ರಮಾಣದ ಶಾಲೆಗಳಿಂದ ಹೊರಗುಳಿಯುವವರ ಸಂಖ್ಯೆ ಮತ್ತು ಬೃಹತ್ ಅನೌಪಚಾರಿಕ ಉದ್ಯೋಗಿಗಳಿಗೆ ಉತ್ತಮ ಕೌಶಲ್ಯಾಭಿವೃದ್ಧಿ ತರಬೇತಿಗಳ ಮೂಲಕ ಉನ್ನತೀಕರಿಸಬೇಕಾಗಿದೆ. ಇಂದು ಬದಲಾಗುತ್ತಿರುವ ಗ್ರಾಹಕರ ಅಗತ್ಯತೆಗಳಿಗೆ ಹೊಂದಿಕೊಳ್ಳುವಂತೆ ನಿರುದ್ಯೋಗಿಗಳು/ಆಸಕ್ತ ಉದ್ಯಮಶಾಲಿಗಳು/ಮಹಿಳೆಯರಿಗೆ ನೂತನ ಕೌಶಲ್ಯಗಳನ್ನು ಕಲಿಸಬೇಕಿದೆ. ಅಲ್ಲದೆ, ಈಗಾಗಲೇ ಅಸ್ತಿತ್ವದಲ್ಲಿರುವ ಕೃಷಿ/ಇನ್ನಿತರ ವಲಯದ ಕಾರ್ಮಿಕರನ್ನು ಮರು ಕೌಶಲ್ಯ ಕಲಿಕೆಯೂ ಸಹ ಅಗತ್ಯವಾಗಿದೆ. ಜೊತೆಗೆ ಹೆಚ್ಚಿನ ಯುವ ಜನರು ಅನೌಪಚಾರಿಕ ವಲಯದಲ್ಲಿ ಕೆಲಸ ಹುಡುಕಾಟ ನಡೆಸುತ್ತಾರೆ. ಆದುದರಿಂದ ಭಾರತದಲ್ಲಿ ಈ ವಲಯದ ಮಾನವ ಸಂಪನ್ಮೂಲ ಉತ್ತಮವಾಗಿ ಅಭಿವೃದ್ಧಿಯಾಗದೆ ಮತ್ತು ಗುರುತಿಸಿರುವುದಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ವಿವಿಧ ಸಂಸ್ಥೆಗಳು ಮತ್ತು ತರಬೇತಿ ಕೇಂದ್ರಗಳು ವಿಶೇಷವಾದ ನೀತಿಗಳು, ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳು, ತಾಂತ್ರಿಕ ಅಭಿವೃದ್ಧಿ ಕಾರ್ಯಕ್ರಮಗಳು ಇತ್ಯಾದಿಗಳನ್ನು ನಡೆಸುವಲ್ಲಿ ತೊಡಗಿಸಿಕೊಂಡಿವೆ. ಅಲ್ಲದೆ ಈ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಲು ವಿವಿಧ ಶೈಕ್ಷಣಿಕ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳು ಯುವಕ–ಯುವತಿಯರಿಗೆ ತರಬೇತಿಗಳನ್ನು ನೀಡುವುದರ ಮೂಲಕ ಮಾರುಕಟ್ಟೆಗೆ ತಕ್ಕಂತಹ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿವೆ. ಈ ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳು ನಿರುದ್ಯೋಗವನ್ನು ಕಡಿಮೆ ಮಾಡುತ್ತವೆ. ಉತ್ಪಾದಕತೆಯನ್ನು ಹೆಚ್ಚಿಸುತ್ತವೆ ಮತ್ತು ಜೀವನ ಮಟ್ಟವನ್ನು ಸುಧಾರಿಸುತ್ತವೆ. ಭವಿಷ್ಯದ ಉದ್ಯೋಗಿಗಳಿಗೆ ಕೌಶಲ್ಯಗಳನ್ನು ಹೆಚ್ಚಿಸಿ ಕೆಲವೊಂದು ವಲಯಗಳಲ್ಲಿ ಹೂಡಿಕೆ ಮಾಡುವುದರಿಂದ ದೇಶದ ಆರ್ಥಿಕ ಪ್ರಗತಿಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುವಂತೆ ಮಾಡಬಹುದಾಗಿದೆ.

ರಾಷ್ಟ್ರೀಯ ಉದ್ಯೋಗ ನೀತಿಯ ತತ್ವಗಳು: ಕೌಶಲ್ಯಾಭಿವೃದ್ಧಿಯ ಮೂಲಕ ಮಾನವ ಬಂಡವಾಳವನ್ನು ಹೆಚ್ಚಿಸುವುದು. ಲಭ್ಯವಿರುವ ಮತ್ತು ಕೆಲಸ

ಮಾಡಲು ಸಿದ್ಧರಿರುವವರನ್ನು ಸೆಳೆದುಕೊಳ್ಳಲು ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳಲ್ಲಿ ಎಲ್ಲಾ ನಾಗರೀಕರಿಗೂ ಗುಣಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವುದು. ಕಾರ್ಮಿಕರ ಮಾರುಕಟ್ಟೆಯಲ್ಲಿ ಸಾಮಾಜಿಕ ಒಗ್ಗಟ್ಟು ಮತ್ತು ನೀತಿಯನ್ನು ಬಲಪಡಿಸುವುದು. ಉತ್ಪಾದಕ ಉದ್ಯಮಗಳಲ್ಲಿ ಪ್ರಮುಖ ಹೂಡಿಕೆದಾರರಾಗಲು ಖಾಸಗಿವಲಯವನ್ನು ಬೆಂಬಲಿಸುವುದು. ಆರ್ಥಿಕತೆಯನ್ನು ಸುಧಾರಿಸಲು ಅವರ ಸಾಮರ್ಥ್ಯಗಳನ್ನು ಬಲಪಡಿಸುವ ಮೂಲಕ ಸ್ವಯಂ ಉದ್ಯೋಗಿಗಳನ್ನು ಬೆಂಬಲಿಸುವುದು. ಉದ್ಯೋಗಿಗಳ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುವುದು. ಮಾರುಕಟ್ಟೆಯ ಬದಲಾಗುತ್ತಿರುವ ಅವಶ್ಯಕತೆಗಳಿಗೆ ಅನುಗುಣವಾಗಿ ಶಿಕ್ಷಣ, ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು. ಇದು ರಾಷ್ಟ್ರದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸುತ್ತದೆಯೆಂದು ತಿಳಿಸಿಕೊಡುತ್ತದೆ. ಇದರ ಜೊತೆಗೆ ಕೌಶಲ್ಯ ಭಾರತದ ಉದ್ದೇಶಕ್ಕಾಗಿ ಆರಂಭಿಸಿರುವ ಕಾರ್ಯಕ್ರಮಗಳು ಮತ್ತು ನೀತಿಗಳ ಬಗ್ಗೆಯು ವಿವರಿಸುತ್ತದೆ.

ಆದುದರಿಂದ ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಸ್ಥಾಪನೆಯಾದಾಗಿನಿಂದಲೂ ಸಹ ರೈತರು/ರೈತ ಮಹಿಳೆಯರು/ಗೃಹಿಣಿಯರು/ಯುವಕ–ಯುವತಿಯರಿಗೆ ಮತ್ತು ನಿರುದ್ಯೋಗಿಗಳಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಂದ ಆರ್ಥಿಕ ಸದೃಢತೆಗಾಗಿ ಹಲವು ರೀತಿಯ ಉಚಿತ ತರಬೇತಿಗಳನ್ನು ಕೈಗೊಳ್ಳುತ್ತಲೇ ಇದೆ. ಆದರೆ, ಈ ರೀತಿಯ ಕೌಶಲ್ಯಗಳನ್ನು ಒಂದು ದಿನದ ತರಬೇತಿಗಳಲ್ಲಿ ಎಲ್ಲಾ ವಿಚಾರಗಳನ್ನು ಕಲಿಸಿಕೊಡುವುದು ಅಸಾಧ್ಯ ಹಾಗೂ ಜನರಿಗೆ ಸ್ವಯಂ ತಾವೇ ಮಾಡಿ ಕಲಿಯುವ ಅವಕಾಶಗಳಿರುವುದಿಲ್ಲ. ಹಾಗಾಗಿ ಪ್ರಸಕ್ತ 2024–25ನೇ ಸಾಲಿನಲ್ಲಿ 10 ದಿನಗಳ ಹಲವು ಶುಲ್ಕ ಸಹಿತ ತರಬೇತಿಗಳನ್ನು ಆಯೋಜಿಸಲು ತೀರ್ಮಾನಿಸಿರುತ್ತದೆ. ಈ ರೀತಿಯ ಕೌಶಲ್ಯಾಭಿವೃದ್ಧಿ ತರಬೇತಿಗಳಿಂದ ಹೊರಹೊಮ್ಮುವ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ. ಕೃಷಿ ಹಾಗೂ ಕೃಷಿಯೇತರ ಕ್ಷೇತ್ರಗಳಲ್ಲಿ ನೂತನವಾಗಿ ಉದ್ದಿಮೆಗಳನ್ನು ಪ್ರಾರಂಭಿಸಲು

ಪುಟ 28ರಲ್ಲಿ ಮುಂದುವರೆದಿದೆ. . .

ಛೀ ! ಪೂಪ್ (ಮಲ)ದ ಕಾಫಿ, ಏನಿದು?

✍ ಎಂ. ಮಂಜುನಾಥ, 9448183068, ಕೀಟಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ) ಹಾಗೂ ಶಿಕ್ಷಣ ನಿರ್ದೇಶಕರು, ಗೊರಿಕೊಪ್ಪಲು, ಹಾಸನ

ಛೀ ಪೂಪ್ (ಮಲ)ದ ಕಾಫಿ ಎನ್ನಬೇಡಿ...... ಪ್ರಾಣಿ ಮಲ, ಎಂಜಲು, ವಾಂತಿಯಿಂದ ಮಾಡಿದ ಕಾಫಿಗೆ ಪ್ರಪಂಚದಲ್ಲಿ ಅತ್ಯಂತ ದುಬಾರಿ ಬೆಲೆ ಇದೆ. ಇದು ಈಗ ವಿದೇಶಿ ಪಾಪ್ ಸಂಸ್ಕೃತಿಯ ಭಾಗವಾಗಿದೆ ಎನ್ನುವುದಿದೆ. ಮಲದಿಂದ ಬೇರ್ಪಡಿಸಿ ಸಂಸ್ಕರಿಸಿದ ಕಾಫಿಗೆ "ಪೂಪ್ ಅರ್ಥಾತ್ ಮಲ ಅಥವಾ ಕಕ್ಕಸಿನ ಕಾಫಿ" ಎನ್ನುವರು. ಅನೇಕ ಪಕ್ಷಿಗಳು ತಿಂದು ಉಗುಳಿದ ಅಥವಾ ವಿಸರ್ಜಿಸಿದ ಮಲದಲ್ಲಿನ ಬೀಜಗಳು ಉತ್ತಮವಾಗಿ ಮೊಳೆತು ಬೆಳೆಯುವುವು ಎಂಬ ನಂಬಿಕೆ ರೈತಾಪಿ ವರ್ಗದಲ್ಲಿದೆ. ಪ್ರಾಣಿಗಳ ಮಲವನ್ನು ನೇರವಾಗಿ ಎಲ್ಲೂ ಬಳಕೆ ಮಾಡಿದ ಉಲ್ಲೇಖಗಳಿಲ್ಲ. ಆದರೆ ಪ್ರಾಣಿಗಳ ಮಲದಿಂದ ಬೇರ್ಪಸಿದ ಕಾಫಿ ಬೀಜಗಳಿಂದ ತಯಾರಿಸಿದ ಕಾಫಿ ಸೇವನೆ ಈಗ ರಹಸ್ಯವಾಗಿ ಉಳಿದಿಲ್ಲ. ಮಲವನ್ನು ಔಷಧಿಯಾಗಿ ಉಪಯೋಗಿಸಿದ ಉದಾಹರಣೆಯನ್ನು ಪದ್ಮ ಭೂಷಣ ಪ್ರಶಸ್ತಿ ವಿಜೇತ ಹೆಸರಾಂತ ವೈದ್ಯ ಡಾ. ಬಿ. ಎಂ. ಹೆಗಡೆಯವರು ಕೊಡುತ್ತಾರೆ. ಅದೇನೆಂದರೆ, ಆರೋಗ್ಯವಂತ ಮನುಷ್ಯರ ದೊಡ್ಡ ಕರುಳಿನ ಮಲದ ತಿಳಿಯನ್ನು ಅನಾರೋಗ್ಯ ಪೀಡಿತರ ಕರುಳಿಗೆ ಸೇರಿಸುವುದರಿಂದ ಆರೋಗ್ಯ ವೃದ್ಧಿಸುವುದು.

ಪೂಪ್ ರೀತಿಯ ಕಾಫಿ ಸೇವನೆ ನನ್ನಂತಹ ಹಾಗೂ ಅನೇಕರಿಗೆ ಇಷ್ಟವಾಗದಿರದು. ಆದರೆ ಇಂತಹುದನ್ನೇ ಇಷ್ಟ ಪಟ್ಟು ಸೇವಿಸುವವರಿರುವಾಗ ತಂಟಾರಿಸಿಕೊಡುವವರಿಗೆ ಬರವಿಲ್ಲವೆನ್ನಬಹುದು. ಪೂಪ್ ಕಾಫಿ ಸೇವನೆ ಬಗ್ಗೆ ಮಾತನಾಡುವಾಗ "ಗಂಗಾವತಿ ಪ್ರಾಣೇಶ" ರವರ ಹಾಸ್ಯ ಸಂಜೆಯಲ್ಲಿ ಹೇಳಿದ ಹಾಸ್ಯ ಪ್ರಸಂಗ ನೆನಪಾಗುವುದು. ಒಬ್ಬ ವ್ಯಾಪಾರಿ ಶೆಟ್ಟಿ ರೈಲಿನಲ್ಲಿ ಓರ್ವ ಚೀನಿಯನಿದ್ದ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ. ಚೀನಿಯನ ಗಲ್ಲದ ಮೇಲೆ ಒಂದು ನೊಣ ಬಂದು ಕೂತಿತು. ಅವನು ಅದನ್ನು ಹಿಡಿದು ಅವನ ಬಾಯಿಯೊಳಗೆ ಹಾಕಿ ತಿಂದ. ಚೀನಿಯರಿಗೆ ನೊಣ, ಜಿರಲೆ, ಮಿಡತೆ, ಹಾವು, ಇಲಿಯಂತಹ ಪ್ರಾಣಿಗಳನ್ನು ತಿನ್ನುವ ರೂಢಿ ಇರುವವರಾದ್ದರಿಂದ ಅವನಿಗೆ ನೊಣ ತಿನ್ನುವುದು ಹೇಸಿಗೆಯೇ ಅಲ್ಲ. ಅವನು ನೊಣ ತಿಂದಿದ್ದನ್ನು ಕಂಡ ಶೆಟ್ಟಿಗೆ ಸ್ವಲ್ಪ ಸಮಯದ ನಂತರ ಅವನ ಗಲ್ಲದ ಮೇಲೂ ಸಹ ಒಂದು ನೊಣ ಬಂದು ಕೂತಾಗ "ಶೆಟ್ಟಿ ಆ ನೊಣವನ್ನು ಹಿಡಿದು ಚೀನಿಯನಿಗೆ ತೋರಿಸುತ್ತಾ ಈ ನೊಣವನ್ನು ಎಷ್ಟಕ್ಕೆ ಖರೀದಿಸ್ತೀಯಾ? ಎಂದನಂತೆ!! ಇದು ಕೇವಲ ಹಾಸ್ಯ ಎನಿಸಿದರೂ, ವಾಸ್ತವವಾಗಿ ಎಂತಹ ವಸ್ತುವೇ ಆಗಲಿ ಕೊಳ್ಳುವವರು ಇರುವಾಗ ಮಾರುವವರು ಇರುತ್ತಾರೆ ಅಲ್ಲವೇ?. ಹಾಗೆಯೇ ಪೂಪ್ ಕಾಫಿ ಎನ್ನಬಹುದೇ?

ಭಾರತವು ಪ್ರಪಂಚದ 8ನೇ ಅತಿ ದೊಡ್ಡ ಕಾಫಿ ರಫ್ತಿಗೆ ಹೆಸರುವಾಸಿಯಾದ ದೇಶವಾಗಿದೆ. ಅನೇಕ ಪ್ರಾಣಿಗಳಾದ ಸಿವೆಟ್ ಬೆಕ್ಕು, ಆನೆ, ಜಾಕು ಪಕ್ಷಿ, ಬಾವಲಿ, ಕೋತಿ ಬೆಕ್ಕು, ಬೊನೊಬೊ ಚಿಂಪಾಂಜಿ ಹಾಗೂ ಮಂಗಗಳನ್ನು ಬಳಸಿ ಪೂಪ್ ಕಾಫಿಯನ್ನು ಉತ್ಪಾದಿಸುವರು. ಅವುಗಳಲ್ಲಿ ಸಿವೆಟ್ ಬೆಕ್ಕು ಮತ್ತು ಆನೆಗಳಿಂದ ಸಂಸ್ಕರಿಸಿದ ಕಾಫಿ ತುಂಬಾ ಪ್ರಸಿದ್ಧಿಯಾಗಿದೆ. ನಮ್ಮ ರಾಜ್ಯದಲ್ಲಿ ಟಾಟಾ ಸಂಸ್ಥೆಯವರಿಂದ ಅಲ್ಪ ಪ್ರಮಾಣದಲ್ಲಿ ಸಿವೆಟ್(ಮನುಗು) ಬೆಕ್ಕುಗಳಿಗೆ ಕಾಫಿ ಹಣ್ಣುಗಳನ್ನು ತಿನ್ನಿಸಿ ಹೊರಹಾಕಿದ ಮಲದಲ್ಲಿನ ಕಾಫಿ ಬೀಜಗಳಿಂದ ತಯಾರಿಸಿದ ಕಾಫಿ ಬಗ್ಗೆ ಮಾಹಿತಿ ಇದೆ. ಹಾಗೆಯೇ ಆನೆಗಳನ್ನು ಬಳಸಿ ಕೆಲವೆಡೆ ಕಾಫಿ(ಐವರಿ ಕಾಫಿ) ತಯಾರಿಸುವ ಬಗ್ಗೆ ಕೊಡಗಿನ ಕೆಲ ಭಾಗಗಳಲ್ಲಿ ಮತ್ತು ಥೈಲಾಂಡಿನಲ್ಲಿ ಇರುವುದು ತಿಳಿದಿದೆ.

ಪೂಪ್(ಮಲ)ದ ಕಾಫಿ ಬಗೆಗಳು

1. ಲುವಾಕ ಕಾಫಿ: ಇದನ್ನು ಸಿವೆಟ್ ಅಥವಾ ಮನಗು ಬೆಕ್ಕು (ಪ್ಯಾರಾಡಾಕ್ಸರಸ್ ಹರ್ಮಾಫ್ರೋಡಿಟಸ್) ಎನ್ನುವ ಬೆಕ್ಕಿನ ಜಾತಿಗೆ ಸೇರಿದ ಪ್ರಾಣಿಗೆ, ಕಾಫಿ ಹಣ್ಣುಗಳನ್ನು ತಿನ್ನಿಸಿ ಅದರ ಮಲದಿಂದ ಹೊರಬಂದ ಪಚನವಾಗದ ಬೀಜಗಳಿಂದ ಮಾಡುವರು. ಈ ಕಾಫಿಯ ಬೆಲೆ ಅತ್ಯಂತ ದುಬಾರಿ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ 100 ಗ್ರಾಂ ಪುಡಿಗೆ 12,000 ರೂ. ಗಳು !!. ಈ ಕಾಫಿಯನ್ನು ಮುಖ್ಯವಾಗಿ ಇಂಡೋನೇಷ್ಯಾದ ದ್ವೀಪಗಳಾದ ಸುಮಾತ್ರ, ಜಾವಾ, ಬಾಲಿ, ಸುಲವೇಸಿ, ಮತ್ತು ಪೂರ್ವ ಟಿಮೋರ್‌ಗಳಲ್ಲಿ ಹಾಗೂ ಭಾರತದಲ್ಲಿ ಉತ್ಪಾದಿಸುತ್ತಾರೆ.

ಮನುಗು ಬೆಕ್ಕಿನ ಇಷ್ಟವಾದ ಆಹಾರ, ಕಾಫಿ ಹಣ್ಣುಗಳು. ಈ ಮನುಗು ಬೆಕ್ಕುಗಳು ಕಾಫಿ ತೋಟಗಳಿಗೆ ಲಗ್ಗೆಯಿಟ್ಟು ಅಲ್ಲಿ ಅತ್ಯುತ್ತಮವಾದ ಕಾಫಿ ಹಣ್ಣುಗಳನ್ನು ಆರಿಸಿ ತಿನ್ನುತ್ತವೆ. ಆದರೆ ಅದರ ಹೊಟ್ಟೆಯಲ್ಲಿ ಕಾಫಿ ಬೀಜಗಳು ಜೀರ್ಣವಾಗುವುದಿಲ್ಲ. ಆ ಬೀಜಗಳು ಮಲ ವಿಸರ್ಜನೆ ಮೂಲಕ ಹೊರಗೆ ಬರುತ್ತವೆ. ಅಂತಹ ಬೀಜಗಳನ್ನು ಸಂಗ್ರಹಿಸಿ ತೊಳೆದು ಶುಚಿ ಮಾಡಿ, ಹುರಿದು ಪುಡಿ ಮಾಡಿ, ನಂತರ ಮಾರಾಟ ಮಾಡಲಾಗುತ್ತದೆ. ಮನಗು ಬೆಕ್ಕುಗಳು ಕಾಫಿ ಬೀಜಗಳನ್ನು ತಿಂದಾಗ ಜೀರ್ಣಕ್ರಿಯೆಯಲ್ಲಿ ಕಾಫಿ ಬೀಜಗಳಲ್ಲಿನ ಆಮ್ಲದ ಅಂಶವನ್ನು ಬೇರ್ಪಡಿಸುತ್ತದೆ. ಉಪಯುಕ್ತವಾದ ಪ್ರೋಟೀನ್‌ಗಳು ಅದರಲ್ಲಿರುತ್ತವೆ. ಈ ಕಾಫಿಯಿಂದ ಅನೇಕ ಆರೋಗ್ಯಕರ ಪ್ರಯೋಜನಗಳಿವೆ ಎನ್ನುವುದು ವಿಜ್ಞಾನಿಗಳ ಅಭಿಪ್ರಾಯವಿದೆ. ಈ ಕಾಫಿಯನ್ನು ಕುಡಿಯುವುದರಿಂದ ಹಲ್ಲುಗಳು ಆರೋಗ್ಯಕರವಾಗಿರುತ್ತವೆ ಮತ್ತು ಶುಚಿಯಾಗಿರುತ್ತವೆ.

ಅರೇಬಿಕ ಕಾಫಿ

ಕಾಫಿ ಬೇಳೆ

ದೇಹದ ಚರ್ಮದ ಕ್ಯಾನ್ಸರ್ ಬರುವುದನ್ನು ಶೇ. 17 ರಷ್ಟು ಕಡಿಮೆ ಮಾಡುತ್ತದೆ. ಸಕ್ಕರೆ ಖಾಯಿಲೆಯನ್ನು ಕಡಿಮೆ ಮಾಡುವುದು. ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುತ್ತದೆ. ಜೀರ್ಣ ಕ್ರಿಯೆಗೂ ಕೂಡ ಹೆಚ್ಚಿನ ನೆರವನ್ನು ನೀಡುತ್ತದೆ. ವ್ಯಾಯಾಮದ ನಂತರ ಈ ಕಾಫಿಯನ್ನು ಕುಡಿಯುವುದರಿಂದ ಮಾಂಸ ಖಂಡಗಳ ನೋವು ಶೇ. 50 ರಷ್ಟು ಕಡಿಮೆಯಾಗುತ್ತದೆ. ನರಗಳಿಗೆ ಸಂಬಂಧಿಸಿದ ರೋಗಗಳನ್ನು ಕೂಡ ಇದು ತಡೆಯಲು ಸಹಕರಿಸುತ್ತದೆ. ಇಷ್ಟೆಲ್ಲಾ ಪ್ರಯೋಜನಗಳು ಇವೆ ಎಂಬುದನ್ನು ವಿಜ್ಞಾನಿಗಳು ದೃಢಪಡಿಸಿದ್ದಾರೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಬಯಲು ಪ್ರದೇಶಗಳಲ್ಲಿ ಈ ಪುನುಗು ಬೆಕ್ಕುಗಳು ಕಾಣಸಿಗುತ್ತವೆ. ಕರ್ನಾಟಕದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.



ಪ್ರಾಣಿ ಕರುಳಿನಲ್ಲಿ ಕಾಫಿ ಬೀಜ

ಸಿವೆಟ್ ಬೆಕ್ಕು

ಸಿವೆಟ್ ಬೆಕ್ಕಿನ ಮಲದಿಂದ ಬಂದ ಕಾಫಿ ಬೀಜ

ಆನೆ ಮಲದಿಂದ ಕಾಫಿ ಬೀಜ ಆಯುತ್ತಿರುವುದು

ಇವು ಮರವಾಸಿಗಳು, ಬಹುತೇಕ ತಾಳೆ ಮರ, ಮಾವಿನ ಮರ ಮುಂತಾದ ಮರಗಳಲ್ಲಿ ಈ ಬೆಕ್ಕುಗಳು ವಾಸಿಸುತ್ತವೆ. ಈ ಬೆಕ್ಕಿನ ತೂಕ 2 ರಿಂದ 4 ಕೆಜಿವರೆಗೆ ಇರುತ್ತದೆ. ಅಂದರೆ ಮನೆಯ ಬೆಕ್ಕುಗಳಿಗಿಂತ ಸ್ವಲ್ಪ ದೊಡ್ಡವು. ತಲೆ ನೀಳ ಮತ್ತು ಮೂತಿ ಚೂಪಾಗಿದ್ದು, 40 ಹಲ್ಲುಗಳಿರುತ್ತವೆ. ಇವು ವರ್ಷದ ಎಲ್ಲಾ ಕಾಲದಲ್ಲಿ ಮರಿಗಳನ್ನು ಹಾಕುತ್ತವೆ. ಗಂಡು ಮತ್ತು ಹೆಣ್ಣು ಜನನೇಂದ್ರಿಯಗಳ ಬಳಿ ಸುಗಂಧ ಗ್ರಂಥಿಗಳಿವೆ. ಇವು ದೊಡ್ಡ ಚೀಲಗಳಂತಿದ್ದು, ಅದನ್ನು ಮುಚ್ಚುವ ಮತ್ತು ತೆರೆಯುವ ರೋಮ ಭರಿತ ತುಟಿಗಳಿವೆ. ಭಾರತದಲ್ಲಿ ಪುನುಗಿನ ಸುಗಂಧ ದ್ರವ್ಯವನ್ನು ವಾರಕ್ಕೊಮ್ಮೆ ದೊಡ್ಡ ದೊಡ್ಡ ದೇವಾಲಯಗಳಲ್ಲಿ ದೇವರ ಪ್ರತಿಮೆಗಳಿಗೆ ಲೇಪಿಸಲು ಬಳಸುತ್ತಾರೆ. ಈ ದ್ರವ್ಯವನ್ನು ದೇವರ ಪ್ರತಿಮೆಗೆ ಲೇಪನ ಮಾಡಿದಾಗ ಸುಗಂಧ ಪರಿಮಳ ಪಸರಿಸಿ ಅನೇಕ ಹುಳುಗಳು, ಕೀಟಗಳು, ಇಲಿಗಳು, ಹೆಗ್ಗಣಗಳು ಮತ್ತು ಹಾವುಗಳೂ ಸಹ ಬರುವುದಿಲ್ಲ. ಮಾಹಿತಿ ಪ್ರಕಾರ ಈ ಪುನುಗಿನ ದ್ರವ್ಯದಲ್ಲಿ 64 ಹೂಗಳ ಪರಿಮಳ ಇರುತ್ತದಂತೆ. ಒಮ್ಮೆ ಈ ತೈಲವನ್ನು ಲೇಪಿಸಿದರೆ 64 ಹೂಗಳನ್ನು ದೇವರಿಗೆ ಅರ್ಪಿಸಿದಂತೆ ಎನ್ನುವ ನಂಬಿಕೆ ಇದೆ. ಸುಗಂಧ ದ್ರವ್ಯವು ಈ ಬೆಕ್ಕಿನ ದೇಹದಿಂದ ಉತ್ಪತ್ತಿಯಾಗುವುದು ವಿಶೇಷ ಗ್ರಂಥಿಗಳಿಂದ. ಬೆಕ್ಕಿನ ದೇಹದ ಉಷ್ಣತೆ ಹೆಚ್ಚಾದಾಗ ಈ ದ್ರವ್ಯ ಪಸರಿಸುತ್ತದೆ ಎನ್ನಲಾಗಿದೆ. ಮನುಷ್ಯನ ಕೆಲವು ಶಾರೀರಿಕ ತೊಂದರೆಗಳನ್ನು ಸರಿಪಡಿಸಲು ಈ ದ್ರವ್ಯವನ್ನು "ಆರೋಮ ಥೆರಪಿ"ಗಳಲ್ಲಿ ಬಳಸುತ್ತಾರೆ. ಸುಗಂಧ ದ್ರವ್ಯವನ್ನು ಪಡೆಯಲು ಊದಿನ ಕಡ್ಡಿ ತಯಾರಕರು ಈ ಬೆಕ್ಕುಗಳನ್ನು ಸಾಕುವ ಬಗ್ಗೆ ಮಾಹಿತಿ ಇದೆ. ಆದರೆ ಭವಿಷ್ಯದಲ್ಲಿ ಈ ರೀತಿ ಸಾಕುವವರಿಗೆ "ವನ್ಯ ಜೀವಿ ರಕ್ಷಣಾ ಕಾಯ್ದೆ–1972", ಅಡ್ಡಿಯಾದೀತು !.

ಪ್ರಪಂಚದಲ್ಲಿ ಮಲದ ಕಾಫಿಗಾಗಿ ಬಳಸಿದ ವಿವಿಧ ಪ್ರಾಣಿಗಳು

ಜಾಕು ಪಕ್ಷಿ

ಬಾವಲಿ

ಕೋಟಿ ಬೆಕ್ಕು

ಬೊನೊಬೊ ಚಿಂಪಾಂಜಿ

ಸಿವೆಟ್ ಕ್ಯಾಟ್

ಮಂಗ

ಚಂದಾದಾರರ ಗಮನಕ್ಕೆ

ಚಂದಾದಾರರ ಪತ್ರಿಕೆ ಸಕಾಲದಲ್ಲಿ ತಲುಪದಿದ್ದಲ್ಲಿ, ಪ್ರತಿ ಪಡೆಯಲು ಆಯಾ ಸಂಚಿಕೆ ಕೊನೆಯೊಳಗೆ ದೂರು ಸಲ್ಲಿಸಬೇಕು. ನಂತರ ಬಂದ ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

94808 38218
editorucc@uahs.edu.in

ಕೃಷಿಯಲ್ಲಿ ಉದ್ಯಮಶೀಲತೆ

✍ ಸುನಿತ ಎ. ಬಿ.[1], 9742315023 ಮತ್ತು ಪ್ರೀತಿ[2] ಮತ್ತು ಸಂಧ್ಯಾ ಜಿ. ಸಿ.[3], [1&2]ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಮೂಡಿಗೆರೆ,
[3]ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಹಿರಿಯೂರು

ಅಲೆಮಾರಿಯಾಗಿದ್ದ ಮಾನವ ಕ್ರಮೇಣ ಒಂದೆಡೆ ನೆಲೆನಿಲ್ಲುವಂತೆ ಮಾಡಿ, ನಮ್ಮ ಹಸಿವಿನ ಚಿಂತೆಯನ್ನು ನಿವಾರಿಸಿದ ವೃತ್ತಿಯೇ "ಕೃಷಿ". ಆಹಾರದ ಭದ್ರತೆಯನ್ನು ನಿರ್ವಹಿಸುವ ಮೂಲ ಕಸುಬಾಗಿ ಕೃಷಿಯು ವಿಕಾಸವಾಗಿದೆ. ಕೃಷಿಯು ಆಕರ್ಷಕ ಮತ್ತು ಲಾಭದಾಯಿಕ ವೃತ್ತಿಯಾಗಿ ಉಳಿದಿಲ್ಲವಾದ್ದರಿಂದ ಇಂದು ಕೃಷಿಯಿಂದ ವಿಮುಖವಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರಸಕ್ತ ಸಂದರ್ಭದಲ್ಲಿ ಕೃಷಿಯನ್ನು ಒಂದು ಬೆಳೆ ಉತ್ಪಾದಕ ಸಂಸ್ಕೃತಿಯಾಗಿ ನೋಡದೇ, ಒಂದು ಉದ್ದಿಮೆಯಾಗಿ ಪರಿವರ್ತಿಸಿದರೆ ಕೃಷಿ ಮೇಲೆ ಅವಲಂಬಿತರಾದವರು ಜೀವನ ಕಟ್ಟಿಕೊಳ್ಳಲು ಮತ್ತು ಎಲ್ಲ ಜನತೆಗೆ ಆಹಾರ ಭದ್ರತೆ ಒದಗಿಸಲು ಸಾಧ್ಯ. ಕೃಷಿ ಉದ್ದಿಮೆ ಅಥವಾ ಕೃಷಿ ಉದ್ಯಮಶೀಲತೆಯನ್ನು ಸಾಮಾನ್ಯ ಭಾಷೆಯಲ್ಲಿ ಸಮರ್ಥನೀಯ, ಸಮುದಾಯ–ಆಧಾರಿತ, ನೇರ ಮಾರುಕಟ್ಟೆಯ ಕೃಷಿ ಎಂದು ವ್ಯಾಖ್ಯಾನಿಸಬಹುದು. "ಕೃಷಿ ಉದ್ಯಮಶೀಲತೆಯು ಕೃಷಿ ಮತ್ತು ಉದ್ಯಮಶೀಲತೆಯ ಲಾಭದಾಯಕ ಸಂಯೋಜನೆಯಾಗಿದೆ". ಉದ್ಯಮಶೀಲತೆಯು ಕೃಷಿ ಮತ್ತು ವ್ಯಾಪಾರದ ಸಂಬಂಧವನ್ನು ವಿವಿಧ ರೀತಿಯಲ್ಲಿ ಅಭಿವೃದ್ಧಿಪಡಿಸುವ ಮೂಲಕ ಹೊಸತನವನ್ನು ಕಂಡುಕೊಳ್ಳುವ, ಮಾರುಕಟ್ಟೆಗಳನ್ನು ಗುರುತಿಸುವ ಮತ್ತು ಅಗತ್ಯಗಳನ್ನು ಪೂರೈಸುವ ಕೃಷಿಕ ಉದ್ಯಮಿಗಳನ್ನು ಉತ್ತೇಜಿಸುವಂತಾಗುತ್ತದೆ.

ಕೃಷಿ ಉದ್ಯಮಶೀಲತೆಯ ಅಗತ್ಯತೆ ಮತ್ತು ಪ್ರಾಮುಖ್ಯತೆ

ಸಾಮಾನ್ಯವಾಗಿ ನಮ್ಮ ರೈತರಲ್ಲಿ ವೈಜ್ಞಾನಿಕ ಕೃಷಿ ಮತ್ತು ಪರಿಣಾಮಕಾರಿ ಕೃಷಿ ನಿರ್ವಹಣಾ ವ್ಯವಸ್ಥೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಹೀಗಾಗಿ, ರೈತರು ವಿಳಂಬವಾದ ಮುಂಗಾರು, ಬರ, ಬೆಳೆ ಸಾಲ, ನಕಲಿ ಬೀಜಗಳು ಮತ್ತು ರಸಗೊಬ್ಬರ ಕೊರತೆ ಮುಂತಾದವುಗಳನ್ನು ನಿಭಾಯಿಸಬೇಕಿದೆ. ಆದುದರಿಂದ ಕೃಷಿಗೆ ಅನ್ವಯಿಸುವ ಉದ್ಯಮಶೀಲತೆಯ ತಾಂತ್ರಿಕತೆಗಳು ಮತ್ತು ನವೀನ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದರಿಂದ ರೈತರು ಕೃಷಿಯನ್ನು ಉದ್ದಿಮೆಯನ್ನಾಗಿಸಿ ಆರ್ಥಿಕ ನಷ್ಟವನ್ನು ಸರಿದೂಗಿಸಲು ಸಹಕಾರಿಯಾಗುತ್ತದೆ. ಕೃಷಿ ಉದ್ಯಮಶೀಲತೆಯು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಗುರಿಯನ್ನು ಹೊಂದಿದೆ. ಉದಾಹರಣೆಗೆ, ಉದ್ಯೋಗ ಸೃಷ್ಟಿ, ಬಡತನ ನಿವಾರಣೆ, ಪೋಷಣಾ ಮಟ್ಟದಲ್ಲಿ ಸುಧಾರಣೆ, ರಾಷ್ಟ್ರೀಯ ಆರ್ಥಿಕತೆಯಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಒಟ್ಟಾರೆ ಆಹಾರ ಭದ್ರತೆ ಮುಂತಾದವುಗಳನ್ನು ಒದಗಿಸುವ ಆಶಯವನ್ನು ಹೊಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಬಡತನದ ನಿರ್ಮೂಲನೆಗಾಗಿ ಕೃಷಿ ಉತ್ಪಾದಕತೆ ಹೆಚ್ಚಳ ಮತ್ತು ಲಾಭದಾಯಕ ಉದ್ಯಮಶೀಲತೆಯ ಅಗತ್ಯವಿದೆ. ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶಗಳ ಸೃಷ್ಟಿ, ನಗರಗಳಿಗೆ ವಲಸೆಯನ್ನು ತಡೆಯಲು ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಲು, ಗ್ರಾಮೀಣ ಪ್ರದೇಶಗಳಲ್ಲಿ

ಕೈಗಾರಿಕಾ ಅಭಿವೃದ್ಧಿಯನ್ನು ಉಳಿಸಿಕೊಳ್ಳಲು ಹಾಗೂ ನಗರ ಪ್ರದೇಶಗಳ ಮೇಲಿನ ಒತ್ತಡ ಕಡಿಮೆ ಮಾಡಲು ಕೃಷಿ ಉದ್ಯಮಶೀಲತೆಯನ್ನು ಅನುಸರಿಸಬಹುದಾಗಿದೆ.

ಕೃಷಿಯಲ್ಲಿ ಉದ್ಯಮಶೀಲತೆಯ ಅವಕಾಶಗಳು

1. **ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು:** ಬೆಳೆದ ಬೆಳೆಯನ್ನು ನೇರವಾಗಿ ಮಾರಾಟ ಮಾಡುವ ಬದಲು ರೈತರ ಹಂತದಲ್ಲಿಯೇ ಪ್ರಾಥಮಿಕ ಸಂಸ್ಕರಣೆಯನ್ನು ಮಾಡಿ ಮಾರಾಟ ಮಾಡುವುದರಿಂದ ಬೆಳೆದ ಬೆಳೆಗೆ ಹೆಚ್ಚಿನ ಬೆಲೆ ಪಡೆಯಲು ಸಾಧ್ಯವಾಗುತ್ತದೆ. ಉದಾಹರಣೆಗೆ ಭತ್ತವನ್ನು ನೇರವಾಗಿ ಮಾರಾಟ ಮಾಡುವ ಬದಲಿಗೆ ಅಕ್ಕಿಯನ್ನು ತಯಾರಿಸಿ ಮಾರಾಟ ಮಾಡುವುದು. ಅದೇ ರೀತಿ ಬೇಳೆ, ರವೆ, ಹಿಟ್ಟು ಮುಂತಾದವುಗಳನ್ನು ತಯಾರಿಸಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು.

2. **ಕೃಷಿ ಆಧಾರಿತ ಉತ್ಪನ್ನ ತಯಾರಿಕಾ ಘಟಕಗಳು :** ಕೃಷಿ ಉತ್ಪನ್ನಗಳನ್ನು ಮುಖ್ಯ ಕಚ್ಚಾ ವಸ್ತುವಾಗಿ ಆಧರಿಸಿ, ಹೊಸ ಉತ್ಪನ್ನಗಳನ್ನು ತಯಾರಿಸುವುದು. ಉದಾಹರಣೆಗೆ ಸಕ್ಕರೆ, ಬೇಕರಿ, ಮೌಲ್ಯವರ್ಧಿತ ಆಹಾರ ಪದಾರ್ಥಗಳು ಇತ್ಯಾದಿ.

3. **ಕೃಷಿ–ಪರಿಕರಗಳ ಉತ್ಪಾದನಾ ಘಟಕಗಳು:** ರಸಗೊಬ್ಬರ ಉತ್ಪಾದನಾ, ಆಹಾರ ಸಂಸ್ಕರಣೆ, ಕೃಷಿ ಉಪಕರಣಗಳ ಘಟಕಗಳು ಇತ್ಯಾದಿ.

4. ಕೃಷಿ ಸೇವಾ ಕೇಂದ್ರಗಳು: ಕೃಷಿಯಲ್ಲಿ ಬಳಸಲಾಗುವ ಕೃಷಿ ಉಪಕರಣವನ್ನು ದುರಸ್ತಿ ಮಾಡಲು ಮತ್ತು ಸೇವೆಗಾಗಿ ಸೇವಾ ಕೇಂದ್ರಗಳನ್ನು ಒಳಗೊಂಡಿರುತ್ತವೆ.

5. ಇತರೆ ಕ್ಷೇತ್ರಗಳು: ಜೇನು ಸಾಕಣೆ, ಪಶು ಆಹಾರ, ಬೀಜ ಸಂಸ್ಕರಣೆ, ಅಣಬೆ ಉತ್ಪಾದನೆ, ಎರೆಹುಳ ಗೊಬ್ಬರ ಉತ್ಪಾದನೆ, ಮೇಕೆ ಸಾಕಣೆ, ಸಾವಯವ ತರಕಾರಿ ಮತ್ತು ಹಣ್ಣುಗಳ ಚಿಲ್ಲರೆ ಮಾರಾಟ ಮಳಿಗೆಗಳು ಇತ್ಯಾದಿ.

ಜಾಗತೀಕರಣ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನೀತಿ ಸುಧಾರಣೆಗಳಿಂದಾಗಿ, ಕೃಷಿ ಉದ್ಯಮಶೀಲತೆಯಲ್ಲಿನ ವ್ಯಾಪ್ತಿ ಮತ್ತು ಅವಕಾಶಗಳು ಗಮನಾರ್ಹವಾಗಿ ವಿಸ್ತರಿಸಿದೆ. ಈ ವಲಯದಲ್ಲಿ ಅಸಾಧಾರಣ ವ್ಯಾಪಾರ ಆಸಕ್ತಿಗೆ ಕಾರಣವಾಗಿದೆ. ವೇಗವಾಗಿ ಬೆಳೆಯುತ್ತಿರುವ ಭಾರತೀಯ ಗ್ರಾಮೀಣ ಮಾರುಕಟ್ಟೆಯ ಮೇಲೆ ವಿಶ್ವದ ಭರವಸೆಯಿದೆ. ಇದು ದೇಶದ ಕಾರ್ಪೊರೇಟ್ ಬೆಳವಣಿಗೆಯ ಕಾರ್ಯತಂತ್ರವನ್ನು ನಿರ್ಮಿಸಲು ನಿರ್ಣಾಯಕವಾಗಿದೆ. ಸಮೀಕ್ಷೆಗಳ ಪ್ರಕಾರ, ಭಾರತದ ಒಟ್ಟು ಗ್ರಾಮೀಣ ಮಾರುಕಟ್ಟೆಯು ನಗರ ಮಾರುಕಟ್ಟೆಗಿಂತ ದೊಡ್ಡದಾಗಿದೆ. ಕೃಷಿ ವ್ಯಾಪಾರವು ಸುಧಾರಿತ ತಂತ್ರಜ್ಞಾನ ಮತ್ತು ನಿರ್ವಹಣೆಯೊಂದಿಗೆ ಮೌಲ್ಯವರ್ಧನೆ, ಪ್ಯಾಕೇಜಿಂಗ್, ಚಿಲ್ಲರೆ ವ್ಯಾಪಾರ ಮತ್ತು ಕೃಷಿ ಉತ್ಪನ್ನಗಳ ರಫ್ತಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿದೆ. ಭಾರತೀಯ ಜನಸಂಖ್ಯೆಯ ಹೆಚ್ಚಿನ ಭಾಗವು ಕೃಷಿಯ ಮೇಲೆ ಅವಲಂಬಿತವಾಗಿದೆ ಮತ್ತು ಈ ಕ್ಷೇತ್ರವು ವಿವಿಧ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಸಹ ಪೂರೈಸಲು ಸಹಕಾರಿಯಾಗಿದೆ. ಭಾರತೀಯ ಆರ್ಥಿಕತೆಯ ಪ್ರಗತಿಶೀಲ ಬೆಳವಣಿಗೆಗೆ ಸರಿಯಾದ ಕ್ರಮ ಅನುಸರಿಸಿ ಕೃಷಿ ವ್ಯಾಪಾರವು ನಿಯಂತ್ರಿಸುವಂತಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ, ಸಾಕಷ್ಟು ಮೂಲಸೌಕರ್ಯಗಳ ಕೊರತೆಯಿಂದಾಗಿ ಹಣ್ಣುಗಳು ಮತ್ತು ತರಕಾರಿಗಳ ಸುಮಾರು ನಾಲ್ಕನೇ ಒಂದು ಭಾಗವು ಗ್ರಾಹಕರನ್ನು ತಲುಪುವ ಮೊದಲೇ ಹಾಳಾಗುತ್ತಿದೆ. ಆದಾಗ್ಯೂ, ಕೃಷಿ ವ್ಯವಹಾರದ ಸ್ವರೂಪದಲ್ಲಿನ ತ್ವರಿತ ಬದಲಾವಣೆಯಿಂದಾಗಿ, ಸಮರ್ಥ ಮತ್ತು ಕ್ರಿಯಾತ್ಮಕ ವೃತ್ತಿಪರರ ಬೇಡಿಕೆಯು ಕಳೆದ ಕೆಲವು ವರ್ಷಗಳಿಂದ ಹೆಚ್ಚಾಗಿದೆ. ವಿಶ್ವ ವ್ಯಾಪಾರ ಸಂಸ್ಥೆಯು (WTO) ನೀತಿ ಸುಧಾರಣೆಗಳನ್ನು ಪರಿಚಯಿಸಿದಾಗಿನಿಂದ, ಕೃಷಿ ವ್ಯವಹಾರದ ವ್ಯಾಪ್ತಿ ಮತ್ತು ಅವಕಾಶಗಳು ಹೆಚ್ಚಾಗಿವೆ. ಪ್ಯಾಕೇಜಿಂಗ್, ಕಚ್ಚಾ ವಸ್ತುಗಳ ಪೂರೈಕೆ, ಸಂಸ್ಕರಿಸಿದ ಕೃಷಿ–ಆಹಾರ ತಯಾರಿಕೆ, ಕೃಷಿ ಉತ್ಪನ್ನಗಳ ರಫ್ತು ಮತ್ತು ಇತರೆ ಸಂಬಂಧಿತ ಕ್ಷೇತ್ರಗಳಂತಹ ಉದ್ಯಮಗಳ ಅವಕಾಶಗಳು ಹೆಚ್ಚಾಗಿವೆ. ಕಿರು ಬಂಡವಾಳದ ಏರಿಕೆ, ಪೂರಕ ಸರ್ಕಾರಿ ನಿಯಮಗಳು, ಉನ್ನತ ತಂತ್ರಜ್ಞಾನದ ಲಭ್ಯತೆ, ಮಾರ್ಗದರ್ಶನ ಕೃಷಿಯಲ್ಲಿ ಉದ್ಯಮಶೀಲರಾಗಲು ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿವೆ. ಭಾರತದಲ್ಲಿ ಹಲವಾರು ರಾಷ್ಟ್ರಮಟ್ಟದಲ್ಲಿರುವ ಸಂಸ್ಥೆಗಳು ಉದ್ಯಮ ತರಬೇತಿ ನೀಡುತ್ತಿವೆ.

ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (RSETI)

ಈ ಸಂಸ್ಥೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಬ್ಯಾಂಕುಗಳು ನಿರ್ವಹಿಸುತ್ತವೆ. ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಲು ಗ್ರಾಮೀಣ ಬಡತನ ರೇಖೆಗಿಂತ ಕೆಳಗಿರುವ ಯುವಕರಿಗೆ ಅಗತ್ಯವಾದ ಕೌಶಲ್ಯ ತರಬೇತಿ ಮತ್ತು ಕೌಶಲ್ಯ ಉನ್ನತೀಕರಣಗೊಳಿಸುವ ಸಂಸ್ಥೆಯಾಗಿದೆ. ಈ ಸಂಸ್ಥೆಯು ಗ್ರಾಮೀಣಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿಯನ್ನು ಆಧರಿಸಿದೆ. ಇದು ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್ ಮತ್ತು ಕರ್ನಾಟಕದ ಉಜಿರೆಯಲ್ಲಿರುವ ಶ್ರೀ ಮಂಜುನಾಥೇಶ್ವರ ಟ್ರಸ್ಟ್ ಎಂಬ ಮೂರು ಸಂಸ್ಥೆಗಳು ಜಂಟಿಯಾಗಿ ಸ್ಥಾಪಿಸಿದ ಸಂಸ್ಥೆಯಾಗಿದೆ. ದೇಶದ ಪ್ರತಿ ಜಿಲ್ಲೆಗಳಲ್ಲಿ ಒಂದು RSETI ಅನ್ನು ಸ್ಥಾಪಿಸಲಾಗಿದೆ. ಜಿಲ್ಲೆಯ ಪ್ರಮುಖ ಬ್ಯಾಂಕ್ ಸಂಬಂಧಪಟ್ಟ ಬ್ಯಾಂಕ್ ಆಗಿದ್ದು, ಇದು ಕೌಶಲ್ಯ ತರಬೇತಿಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅವರಿಗೆ ತಮ್ಮದೇ ಆದ ಉದ್ಯಮಗಳನ್ನು ಪ್ರಾರಂಭಿಸಲು ಬ್ಯಾಂಕುಗಳಿಂದ ಸಾಲ, ಸಂಪರ್ಕದ ನೆರವನ್ನು ಒದಗಿಸುತ್ತದೆ. ಪ್ರತಿಯೊಂದು RSETI ಯು ಒಂದು ಹಣಕಾಸು ವರ್ಷದಲ್ಲಿ ವಿವಿಧ ಮಾರ್ಗಗಳಲ್ಲಿ 30 ರಿಂದ 40 ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತಿದೆ. ಈ ಕಾರ್ಯಕ್ರಮಗಳು 1–6 ವಾರಗಳವರೆಗಿನ ಅಲ್ಪಾವಧಿಯದ್ದಾಗಿರುತ್ತವೆ. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಣೆ, ಜೇನು ಸಾಕಣೆ, ತೋಟಗಾರಿಕೆ, ರೇಷ್ಮೆ ಸಾಕಣೆ, ಅಣಬೆ ಕೃಷಿ, ಹೂ ಬೇಸಾಯ, ಮೀನುಗಾರಿಕೆ ಇತ್ಯಾದಿಗಳ ಬಗ್ಗೆ ತರಬೇತಿಯನ್ನು ನೀಡುತ್ತಿದೆ.

ರಾಷ್ಟ್ರೀಯ ಜೇನು ಮಂಡಳಿ (National Bee Board, DAC&FW)

ರಾಷ್ಟ್ರೀಯ ಜೇನು ಮಂಡಳಿಯ ರಾಷ್ಟ್ರೀಯ ಜೇನು ಸಾಕಣೆ ಮತ್ತು ಜೇನು ಮಿಷನ್ ಅಡಿಯಲ್ಲಿ ಜೇನು ಕೃಷಿ ಉದ್ಯಮಿಗಳು ಮತ್ತು ಕೃಷಿ ನವೋದ್ಯಮಗಳು ಜೇನು ಸಾಕಣೆ/ಜೇನು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವುದನ್ನು ಉತ್ತೇಜಿಸುವ; ಜೇನು ಸಾಕಾಣೆದಾರರು ಮತ್ತು ವ್ಯಾಪಾರಿಗಳು/ಜೇನು ಸಂಸ್ಕರಣಾಗಾರರು/ರಫ್ತುದಾರರು ಇತ್ಯಾದಿಗಳ ನಡುವೆ ವ್ಯಾಪಾರ ಒಪ್ಪಂದಗಳನ್ನು ಉತ್ತೇಜಿಸುವ, ಜೇನು ಸಾಕಣೆಯ ಮೂಲಕ ಮಹಿಳಾ ಸಬಲೀಕರಣದ ಗುರಿಯನ್ನು ಹೊಂದಿದ್ದು, ಸ್ವ ಸಹಾಯ ಗುಂಪುಗಳು/ರೈತ ಉತ್ಪಾದಕರ ಸಂಘಗಳು/ಜೇನುಸಾಕಣೆದಾರರ ಸಂಘಗಳು/ಒಕ್ಕೂಟಗಳು ಇತ್ಯಾದಿಗಳ ರಚನೆ ಮೂಲಕ ಜೇನುಸಾಕಣೆದಾರರನ್ನು ಬಲಪಡಿಸುತ್ತಿದೆ. ಅವಲ್ಲದೇ ಇನ್ನೂ ಅನೇಕ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಉಪಕ್ರಮಗಳು ಕೃಷಿ ಉದ್ಯಮಶೀಲತೆಯನ್ನು ಬಲಪಡಿಸುವ ಗುರಿಯನ್ನು ಹೊಂದಿವೆ.

ಕಾಳು ಮೆಣಸಿನ ಬೆಳೆಯ ಸುಧಾರಿತ ತಳಿಗಳು

✍ ದೇವರಾಜು, 9886602770, ಬಸವಲಿಂಗಯ್ಯ ಮತ್ತು ಸುಷ್ಮಾ ಅಶೋಕ ಚೌಗುಲೆ, ವಿಸ್ತರಣಾ ಶಿಕ್ಷಣ ಘಟಕ, ಮಡಿಕೇರಿ

ಕಾಳು ಮೆಣಸು ಬಹುವಾರ್ಷಿಕ ಹಬ್ಬುವ ಬಳ್ಳಿ. ಈ ಬೆಳೆಯನ್ನು ಇದರ ಕಾಳುಗಳಿಗೋಸ್ಕರ ಕೃಷಿಮಾಡುತ್ತಿದ್ದು, ಹದಮಾಡಿದ ಮೆಣಸಿನ ಕಾಳುಗಳನ್ನು ಪ್ರಮುಖವಾಗಿ ಸಾಂಬಾರು ಪದಾರ್ಥವಾಗಿ ಬಳಸುವುದಲ್ಲದೆ, ಔಷಧಿಗಳ ತಯಾರಿಕೆಯಲ್ಲೂ ಹೆಚ್ಚಿನ ಮಹತ್ವವನ್ನು ಪಡೆದಿದೆ. ಭಾರತ ಕರಿಮೆಣಸು ಉತ್ಪಾದನೆ, ಬಳಕೆ ಹಾಗೂ ರಫ್ತು ಮಾಡುವಲ್ಲಿ ವಿಶ್ವದಲ್ಲೇ ಮೊದಲ ಸ್ಥಾನ ಪಡೆದಿದೆ. ಅಧಿಕ ಇಳುವರಿ ಮತ್ತು ಉತ್ತಮ ಆದಾಯಕ್ಕಾಗಿ ಕಾಳು ಮೆಣಸಿನ ಬೆಳೆಯಲ್ಲಿ ಸುಧಾರಿತ ತಳಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಅವಶ್ಯಕವಾಗಿದೆ.

ಕಾಳು ಮೆಣಸಿನ ಸುಧಾರಿತ ತಳಿಗಳು

1. ಕೂರ್ಗ್ ಎಕ್ಸೆಲ್: ಕೂರ್ಗ್ ಎಕ್ಸೆಲ್ ಹೆಚ್ಚು ಇಳುವರಿಯನ್ನು ಕೊಡುವ ಉದ್ದವಾದ ಹೂವಿನ ದಂಡುಗಳನ್ನು ಮತ್ತು ದಪ್ಪ ಕಾಳುಗಳನ್ನು ಹೊಂದಿದೆ.

2. ಐಐಎಸ್‌ಆರ್ ಶ್ರೀಕರ: ಕೇರಳ ಮತ್ತು ದಕ್ಷಿಣ ಕರ್ನಾಟಕದ ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಸೂಕ್ತವಾಗಿದೆ.

3. ಐಐಎಸ್‌ಆರ್ ಸುಭಾಕರ: 1990ರಲ್ಲಿ ಬಿಡುಗಡೆಯಾದ, ಕರಿಮುಂಡಾ ವಂಶಾವಳಿಯಿಂದ ಆಯ್ಕೆಯಾಗಿರುವ (ಕೆಎಸ್–14) ಈ ತಳಿಯು ಮಧ್ಯಮ ಪಕ್ವತೆ ಗುಂಪಿಗೆ ಸೇರಿದ್ದು, 2,677 ಕೆಜಿ ಒಣ ಮೆಣಸು ಪ್ರತಿ ಹೆಕ್ಟೇರ್ ಇಳುವರಿಯನ್ನು ನೀಡುತ್ತದೆ. ಪ್ರತಿ ಹೆಕ್ಟೇರ್‌ಗೆ ಗರಿಷ್ಠವಾಗಿ 4,200 ಕೆಜಿ ಒಣ ಮೆಣಸು ಪಡೆಯಬಹುದಾಗಿದೆ.

4. ಐಐಎಸ್‌ಆರ್ ತೇವಂ: ಈ ತಳಿ ಕಾಲು ಕೊಳೆತವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದು,ಎತ್ತರದ ಮತ್ತು ಬಯಲು ಪ್ರದೇಶಗಳಿಗೆ ಸೂಕ್ತವಾಗಿದೆ. ಪ್ರತಿ ಹೆಕ್ಟೇರ್‌ಗೆ ಇದು ಸರಾಸರಿ 2481 ಕೆಜಿ ಒಣಮೆಣಸು ಇಳುವರಿ ಪಡೆಯಬಹುದು.

5. ಐಐಎಸ್‌ಆರ್–ಗಿರಿಮುಂಡ: ಮಧ್ಯಮ ಪಕ್ವತೆಯ ಗುಂಪು ಸೇರಿದಂತೆ ಮಳೆಯಾಶ್ರಿತ ಪರಿಸ್ಥಿತಿಗಳಿಗೆ ಶಿಫಾರಸ್ಸು ಮಾಡಲಾಗಿದೆ.

6. ಐಐಎಸ್‌ಆರ್–ಮಲಬಾರ್ ಎಕ್ಸೆಲ್: 2004ರಲ್ಲಿ ಬಿಡುಗಡೆಗೊಂಡ ಈ ಸಂಕರ ತಳಿ (ಚೋಳಮುಂಡಿ x ಪನ್ನಿಯೂರ್–I), ಎತ್ತರದ ಪ್ರದೇಶಗಳಿಗೆ ಸೂಕ್ತವಾಗಿದೆ ಮತ್ತು ಒಲಿಯೊರೆಸಿನ್ನಲ್ಲಿಯು ಸಮೃದ್ಧವಾಗಿದೆ. ಪ್ರತಿ ಸಾಲಿಗೆ ಸರಾಸರಿ 2.78 ಕೆಜಿ ತಾಜಾ ಮೆಣಸಿನಕಾಯಿ ಮತ್ತು ಪ್ರತಿ ಹೆಕ್ಟೇರ್‌ಗೆ ಸರಾಸರಿ 1440 ಕೆಜಿ ಒಣ ಮೆಣಸು ಇಳುವರಿಯನ್ನು ಪಡೆಯಬಹುದಾಗಿದೆ.

7. ಐಐಎಸ್‌ಆರ್–ಶಕ್ತಿ: ಕಾಲು ಕೊಳೆತವನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಹೊಂದಿರುವ ಈ ತಳಿ, ಪ್ರತಿ ಹೆಕ್ಟೇರ್ ಸರಾಸರಿ 2253 ಕೆಜಿ ಒಣ ಮೆಣಸು ಇಳುವರಿಯನ್ನು ನೀಡುತ್ತದೆ.

8. ಕರಿಮುಂಡ: ವ್ಯಾಪಕ ಹೊಂದಾಣಿಕೆಯನ್ನು ಹೊಂದಿರುವ ಈ ತಳಿ, ಸ್ಥಿರ ಇಳುವರಿಯನ್ನು ನೀಡುತ್ತದೆ ಮತ್ತು ಕೇರಳದಲ್ಲಿ ಅತ್ಯಂತ ಜನಪ್ರಿಯ ತಳಿಯಾಗಿದೆ. ಇದು ಉತ್ತಮ ಗುಣಮಟ್ಟದ ಮೆಣಸನ್ನು ಉತ್ಪಾದಿಸಿ, ಪ್ರತಿ ಗಿಡಕ್ಕೆ ಸರಾಸರಿ 2.3 ಕೆಜಿ ಇಳುವರಿಯನ್ನು ಪಡೆಯಬಹುದಾಗಿರುತ್ತದೆ.

9. ಪಂಚಮಿ: ಈ ತಳಿ, ಹೆಚ್ಚಿನ ಇಳುವರಿಯನ್ನು ನೀಡುತ್ತಿದ್ದು, ಓಲಿಯೊರೆಸಿನ್ ಅಂಶವನ್ನು ಹೆಚ್ಚಾಗಿ ಹೊಂದಿರುವ ಈ ತಳಿ, ತಡವಾಗಿ ಪಕ್ವಗೊಳ್ಳುವ, ವರ್ಷಕ್ಕೆ ಪ್ರತಿ ಹೆಕ್ಟೇರ್‌ಗೆ 1410 ಕೆಜಿ (ಒಣ) ಕಾಳುಗಳನ್ನು ಪಡೆಯಬಹುದು.

10. ಪಣಿಯೂರ್ 1: ಮೂರು ದಶಕಗಳ ಹಿಂದೆ ಕೇರಳದ ಪಣಿಯೂರ್ ಮೆಣಸು ಸಂಶೋಧನಾ ಕೇಂದ್ರದಲ್ಲಿ ಉತ್ಪಾದನೆಯಾದ ಪಣಿಯೂರ್–I ವಿಶ್ವದ ಮೊದಲ ಸಂಕರ ತಳಿ ಕಾಳುಮೆಣಸಾಗಿದೆ. ಇದು ದೊಡ್ಡ ಹಣ್ಣುಗಳೊಂದಿಗೆ ಉದ್ದವಾದ ಹೂವಿನ ದಂಡುಗಳನ್ನು ಹೊಂದಿದ್ದು, ಭಾರೀ ನೆರಳಿನ ಹೊರತು, ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಸೂಕ್ತವಾಗಿದೆ. ಪ್ರತಿ ಹೆಕ್ಟೇರ್‌ಗೆ ಒಣ ಮೆಣಸಿನ ಸರಾಸರಿ ಇಳುವರಿಯು ಸುಮಾರು 1242 ಕೆಜಿ ಯಷ್ಟು ಪಡೆಯಬಹುದು.

11. ಪಣಿಯೂರ್ 2: ಇದನ್ನು ಕೇರಳದ ಪಣಿಯೂರ್ ಮೆಣಸು ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದು ನೆರಳನ್ನು ಸಹಿಸುವ ಸಾಮರ್ಥ್ಯವನ್ನು ಹೊಂದಿದ್ದು, ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಸೂಕ್ತವಾಗಿದೆ. ಪ್ರತಿ ಹೆಕ್ಟೇರ್ ಒಣ ಮೆಣಸಿನ ಸರಾಸರಿ ಇಳುವರಿಯು ಸುಮಾರು 2570 ಕೆಜಿ ಪಡೆಯಬಹುದು.

12. ಪಣಿಯೂರ್ 3: ಇದನ್ನು ಕೇರಳದ ಪಣಿಯೂರ್ ಮೆಣಸು ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದು ತಡವಾಗಿ ಪಕ್ವವಾಗುವ ತಾಣ ಹೊಂದಿದ್ದು, ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಇದು ಸೂಕ್ತವಾಗಿದೆ. ಪ್ರತಿ ಹೆಕ್ಟೇರ್‌ಗೆ ಒಣ ಮೆಣಸಿನ ಸರಾಸರಿ ಇಳುವರಿಯು ಸುಮಾರು 1953 ಕೆಜಿ ಪಡೆಯಬಹುದು.

13. ಪಣಿಯೂರ್ 4: ಸ್ಥಿರ ಇಳುವರಿ ಕೊಡುವ ವಿಧವಾಗಿದೆ. ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಇದು ಸೂಕ್ತವಾಗಿದೆ. ಪ್ರತಿ ಹೆಕ್ಟೇರ್‌ಗೆ ಒಣ ಮೆಣಸಿನ ಸರಾಸರಿ ಇಳುವರಿಯು ಸುಮಾರು 1277 ಕೆಜಿ ಯಷ್ಟು ನೀಡುತ್ತದೆ.

14. ಪಣಿಯೂರ್ 5: ಇದು ಹೆಚ್ಚಿನ ಇಳುವರಿ ಮತ್ತು ನಿಯಮಿತ ಕಾಳುಗಳನ್ನು ಉತ್ಪಾದಿಸುವ ವಿಧವಾಗಿದೆ. ಈ ವಿಧವು ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಸೂಕ್ತವಾಗಿದೆ. ಇದು ನೆರಳು ಹಾಗೂ ನರ್ಸರಿ ರೋಗಗಳಿಗೆ ಸಹಿಷ್ಣುವಾಗಿದೆ. ಹೆಕ್ಟೇರ್‌ಗೆ ಇದು ವರ್ಷಕ್ಕೆ 1098 ಕೆಜಿ (ಒಣ) ಕಾಳುಗಳನ್ನು ಪಡೆಯಬಹುದು.

15. ಪಣಿಯೂರ್ 6: ಸ್ಥಳೀಯ ತಳಿ 'ಕರಿಮುಂಡ'ದಿಂದ ಆಯ್ಕೆಯಾಗಿದೆ. ಇದು ಸ್ಥಿರ ಮತ್ತು ನಿಯಮಿತ ಇಳುವರಿಯನ್ನು ನೀಡುತ್ತಿದ್ದು, ಎಲ್ಲಾ ಮೆಣಸು ಬೆಳೆಯುವ ಪ್ರದೇಶಗಳಿಗೆ ಇದು ಸೂಕ್ತವಾಗಿದೆ. ಇದು ವರ್ಷಕ್ಕೆ ಪ್ರತಿ ಹೆಕ್ಟೇರ್‌ಗೆ 2127 ಕೆಜಿ (ಒಣ) ಕಾಳುಗಳನ್ನು ಪಡೆಯಬಹುದು.

16. ಪಣಿಯೂರ್ 7: ಒಂದು ಶಕ್ತಿಯುತ ನಿಯಮಿತ ಹಣ್ಣುಗಳನ್ನು ಉತ್ಪಾದಿಸುವ ವಿಧವಾಗಿದೆ. ಎಲ್ಲ ಕರಿಮೆಣಸು ಪ್ರದೇಶಗಳಿಗೆ ಇದು ಸೂಕ್ತವಾಗಿದೆ. ಇದು ವರ್ಷಕ್ಕೆ ಪ್ರತಿ ಹೆಕ್ಟೇರ್‌ಗೆ 1410 ಕೆಜಿ (ಒಣ) ಕಾಳುಗಳನ್ನು ಪಡೆಯಬಹುದು.

17. ಪೌರ್ಣಮಿ: ಬೇರು ಗಂಟು ನೆಮಟೋಡ್ ಅನ್ನು ಸಹಿಸಿಕೊಳ್ಳುವ ಈ ಬಳ್ಳಿ, ಹೆಚ್ಚಿನ ಒಲಿಯೊರೆಸಿನ್ ಅಂಶವನ್ನು ಹೊಂದಿದ್ದು, ಮಧ್ಯಮ ಹಾಗೂ ಹೆಚ್ಚು ಇಳುವರಿ ನೀಡುವ ವಿಧವಾಗಿದೆ. ಇದು. ಇದು ವರ್ಷಕ್ಕೆ ಪ್ರತಿ ಹೆಕ್ಟೇರ್‌ಗೆ 2333 ಕೆಜಿ (ಒಣ) ಕಾಳುಗಳನ್ನು ಪಡೆಯಬಹುದು.

ಸಾಧಕ ಕೃಷಿ ಉದ್ದಿಮೆದಾರ

ನಿರಂತರತೆ ಉದ್ಯಮದ ಯಶಸ್ಸಿನ ಗುಟ್ಟು ಜನನಿ ಫೀಡ್ಸ್ : ಶ್ರೀ ರವಿಕುಮಾರ್ ಡಿ.

✍ ಮಲ್ಲಿಕಾರ್ಜುನ ಎಂ. ಓ.[1], 9740369327, ಕಿರಣ್ ಕುಮಾರ್ ಆರ್. ಪಾಟೀಲ[2] ಮತ್ತು ಬಸವರಾಜ ಬೀರಣ್ಣವರ[3], [1,3]ವಿಶ್ವವಿದ್ಯಾಲಯ ಸಂಪರ್ಕ ಕೇಂದ್ರ,
ಕೆ.ಶಿ.ನಾ.ಕೃ.ತೋ.ವಿ.ವಿ., ಇರುವಕ್ಕಿ, ಶಿವಮೊಗ್ಗ, [2]ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ, ಇರುವಕ್ಕಿ

ಯೋಚನೆ, ಯೋಜನೆಯಾಗಿ ರೂಪುಗೊಂಡು ಕಾರ್ಯಾನುಷ್ಠಾನಗೊಳಿಸುವಲ್ಲಿ, ನಿರಂತರತೆ ಕಾಪಾಡಿಕೊಳ್ಳುವುದು ನಿಜವಾದ ಸಾಧನೆ. ಉದ್ಯಮದಲ್ಲಿ ಶ್ರದ್ಧೆ ಮತ್ತು ಆಸಕ್ತಿಯಿಂದ ನಿರಂತರತೆ ಕಾಪಾಡಿಕೊಳ್ಳುವುದೇ ಯಶಸ್ಸಿನ ಕೀಲಿ ಕೈ ಎಂದು ತೋರಿಸಿಕೊಟ್ಟು, ಕೃಷಿ ಕೈಗಾರಿಕೆಯಲ್ಲಿ ಯಶಸ್ಸನ್ನು ಸಾಧಿಸಿರುವ ಆಯನೂರಿನ ಜನನಿ ಫೀಡ್ಸ್‌ನ ಯುವ ಉತ್ಸಾಹಿ ಶ್ರೀ ರವಿಕುಮಾರ್ ಡಿ. ಅವರು ಇತರರಿಗೆ ಮಾದರಿಯಾಗಿದ್ದಾರೆ.

ಶ್ರೀ ರವಿಕುಮಾರ್ ಅವರು ಜನನಿ ಫೀಡ್ಸ್ ಕೈಗಾರಿಕೆ ಸ್ಥಾಪಿಸುವ ಮುನ್ನ ತಾಲೀಮು ನಡೆಸಿರುವ ಕಥನ ರೋಚಕವೆನಿಸುತ್ತದೆ. ಇವರು ಮೂಲತಃ ಕೃಷಿ ಕುಟುಂಬದವರು. ಶರಾವತಿ ಹಿನ್ನೀರಿನ ಮುಳುಗಡೆ ಪ್ರದೇಶವಾದ ತುಮರಿ ಬಳಿಯ ಹೊಸಕೊಪ್ಪದಿಂದ ಇವರ ಕುಟುಂಬದವರು 1968ರಲ್ಲಿ ರೇವಚ್ಚಿಕೊಪ್ಪಕ್ಕೆ ವಲಸೆ ಬಂದರು. ಆಗ ಇವರ ತಂದೆಯವರಿಗೆ 4 ಎಕರೆ ಕೃಷಿ ಭೂಮಿಯನ್ನು ಸರ್ಕಾರ ನೀಡಿತ್ತು. ತಂದೆ ದೊಗ್ಗನಾಯಕ, ತಾಯಿ ಜಾನಕಮ್ಮ ಇಲ್ಲಿಯೇ ಕೃಷಿ ಬದುಕನ್ನು ಕಟ್ಟಿಕೊಂಡರು. ಇವರಿಗೆ 8 ಮಂದಿ ಮಕ್ಕಳು, ಇವರಲ್ಲಿ ರವಿಕುಮಾರ್ ಅವರು ಕೊನೆಯವರು. ತನ್ನೂರಲ್ಲೇ ಪ್ರಾಥಮಿಕ ಶಾಲೆ, ಕುಂಸಿಯಲ್ಲಿ ಪ್ರೌಢಶಾಲೆ, ಆನಂದಪುರದಲ್ಲಿ ಪಿಯುಸಿ ಪೂರೈಸಿ, ಶಿರಸಿಯಲ್ಲಿ ಬಿ.ಎ. ಪದವಿಯನ್ನು ಪಡೆದಿರುತ್ತಾರೆ. ಬಿ.ಎ. ಪದವಿ ಬಳಿಕ ಮುಂದೇನೆಂಬ ಚಿಂತೆಗೆ ದಾರಿ ಕಂಡದ್ದು, ಬೆಂಗಳೂರು. ಬೆಂಗಳೂರಿಗೆ ಹೋದ ಇವರು ಜಿಆರ್‌ಬಿ ತುಪ್ಪ ಕಂಪೆನಿಯ ಸೇಲ್ಸ್‌ಮ್ಯಾನ್ ಆಗಿ, ತಿಂಗಳಿಗೆ ರೂ. 2,500 ವೇತನಕ್ಕೆ ಕೆಲಸ ಮಾಡಿದರು. ಕೆಲಸ ಮಾಡುತ್ತಲೇ ಸಂಜೆ ವೇಳೆಗೆ ಸ್ಫೂರ್ತಿ ಎಲೆಕ್ಟ್ರಾನಿಕ್ಸ್ ಕಂಪೆನಿಯ ಬಲ್ಬುಗಳನ್ನು ಮಾರಾಟ ಮಾಡತೊಡಗಿದರು. ಬಲ್ಬುಗಳ ಮಾರಾಟದಲ್ಲಿ ಲಾಭ ಕಂಡಾಗ, ಜಿಆರ್‌ಬಿ ಕಂಪೆನಿಗೆ ಗುಡ್‌ಬೈ ಹೇಳಿ ಇದರಲ್ಲಿ ಸಂಪೂರ್ಣತೊಡಗಿಸಿಕೊಂಡರು. ಬಲ್ಬು ಉದ್ಯಮದಲ್ಲಿ ಸ್ವಂತಕ್ಕೆ ಸ್ವಲ್ಪ ಬಂಡವಾಳ ಹೂಡಿ ಬೆಂಗಳೂರು, ತುಮಕೂರು, ಚಿತ್ರದುರ್ಗಗಳಲ್ಲಿ ಮಾರುಕಟ್ಟೆ ಕಂಡುಕೊಂಡು ಯಶಸ್ವಿಯಾದರು. ಆಗ ಉಡುಪಿಯಲ್ಲಿದ್ದ ಇವರ ಭಾವ ಮಂಜುನಾಥ್‌ಅವರು ರೈಸ್‌ಮಿಲ್ ಕೈಗಾರಿಕೆಯತ್ತ ಸೆಳೆದುಕೊಂಡರು. ಇಲ್ಲಿ 6 ಮಂದಿ ಸೇರಿ ಪಾರ್ಟ್‌ನರ್‌ಶಿಪ್‌ನಲ್ಲಿ ಒಪ್ಪಂದ ಮಾಡಿಕೊಂಡು, ಕಾರ್ಕಳದಲ್ಲಿ ಬಾಡಿಗೆ ಆಧಾರದಲ್ಲಿ ರೈಸ್‌ಮಿಲ್ ಆರಂಭಿಸಿದರು. ಇಲ್ಲಿ ಯಶಸ್ಸು ಗಳಿಸಿದ ಇವರುಗಳು ಒಂದೇ ವರ್ಷದಲ್ಲಿ ರೈಸ್‌ಮಿಲ್ಲಿನ ಜಾಗ ಕಟ್ಟಡ ಸಮೇತ ಸ್ವಂತಕ್ಕೆ ಖರೀಸಿದರು. ಇವರು 2014ರಿಂದ 2019ರವರೆಗಿನ ರೈಸ್‌ಮಿಲ್‌ನ ನಿರಂತರ ಯಶಸ್ಸು, ಇವರೊಳಗೆ ತನ್ನದೇ ಆದ ಸ್ವಂತ ಉದ್ದಿಮೆ ಆರಂಭಿಸಬೇಕೆಂಬ ಅಥಮ್ಯ ಬಯಕೆಗೆ ಕಾರಣವಾಯಿತು. ಆಯನೂರು ಸಮೀಪದ ದ್ಯಾವಿನಕೆರೆ ರಸ್ತೆಗೆ ಹೊಂದಿಕೊಂಡ 2.5 ಎಕರೆ ಭೂಮಿಯನ್ನು 2018ರಲ್ಲಿ ಖರೀದಿಸಿದರು. ಆಗಲೇ ಇವರಲ್ಲಿ ಯೋಚನೆ ಮತ್ತು ಯೋಜನೆ ಕನಸಿನ ರೂಪ ಕಾರ್ಯರೂಪಕ್ಕಿಳಿಯತೊಡಗಿತು. 2019ರಲ್ಲಿ ಪಾರ್ಟ್‌ನರ್‌ಶಿಪ್‌ನಿಂದ ಹೊರಬರಲು ಒಪ್ಪಂದದಂತೆ ರವಿಕುಮಾರ್ ತಮ್ಮ ಶೇರ್‌ಮೊತ್ತವನ್ನು ಪಡೆದು 2020ರ ಹೊತ್ತಿಗೆ ಜನನಿ ಫೀಡ್ಸ್ ಕೈಗಾರಿಕೆ ಸ್ಥಾಪನೆಗೆ ಸಿದ್ಧತೆ ನಡೆಸಿದರು. ತಮ್ಮ ಜಮೀನಿನ 20 ಗುಂಟೆ ಜಾಗದಲ್ಲಿ ಜನನಿ ಫೀಡ್ಸ್ ಕೈಗಾರಿಕೆ ತಲೆಎತ್ತಿ ನಿಲ್ಲತೊಡಗಿತು. ಇದೇ ಜಮೀನಿನಲ್ಲಿ ಸ್ವಂತ ಮನೆ ನಿರ್ಮಾಣವಾಯಿತು. 2021ರ ಹೊತ್ತಿಗೆ

ಬಾಳಸಂಗಾತಿಯಾಗಿ ರಿಪ್ಪನ್‌ಪೇಟೆಯ ಸುಪ್ರೀತಾ ಅವರೊಂದಿಗೆ ಚತುರ್ಭುಜರಾದರು. ಮುಂದಿನದೆಲ್ಲಾ ನಡೆದದ್ದೇ ಹಾದಿಯಾಗತೊಡಗಿತು.

ಉತ್ತಮ ಗುಣಮಟ್ಟದ ಪಶು ಆಹಾರವನ್ನು, ಅಗ್ಗದ ದರದಲ್ಲಿ ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ರೈತರಿಗೆ ಪೂರೈಸುವುದು ಇವರ ಮುಖ್ಯ ಉದ್ದೇಶವಾಗಿರುತ್ತದೆ. ಪಶು ಆಹಾರಕ್ಕೆ ಬೇಕಾಗುವ ಕಚ್ಚಾವಸ್ತುಗಳಾದ ಮೆಕ್ಕೆಜೋಳ, ಜೋಳ, ಗೋದಿ, ಇತ್ಯಾದಿಗಳನ್ನು ರೈತರಿಂದ ನೇರವಾಗಿ, ಉತ್ತಮ ಬೆಲೆಕೊಟ್ಟು ಖರೀದಿಸಿ, ಅವರಿಗೆ ಸ್ಥಳದಲ್ಲೇ ನಗದನ್ನು ಪಾವತಿಸಿ, ರೈತರಿಗೆ ಅನುಕೂಲವಾಗುವ ಹಾಗೆ ಕಾರ್ಯನಿರ್ವಹಿಸುತ್ತಿರುವುದು ಉದ್ದಿಮೆಯ ಯಶಸ್ಸಿಗೆ ಸಾಕ್ಷಿಯಾಗಿದೆ. ಕೃಷಿ ಕೈಗಾರಿಕೆ ಸ್ಥಾಪಿಸಲು ಇರಬೇಕಾದಂತಹ ಅಗತ್ಯ ಗುಣಗಳಿಂದಾಗಿ ಶ್ರೀ ರವಿಕುಮಾರ್‌ರವರು ಆದರ್ಶಪ್ರಾಯರಾಗಿ ಕಂಡುಬರುತ್ತಾರೆ. ಇವರು ಕಾರ್ಖಾನೆ ಸ್ಥಾಪಿಸುವಾಗ ಶಿವಮೊಗ್ಗದ ಪಶುವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ತಿರುಮಲೇಶ್ ಅವರನ್ನು ಭೇಟಿ ಮಾಡಿದಾಗ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬುವುದರ ಜೊತೆಗೆ ಮಾರ್ಗದರ್ಶನ ಮತ್ತು ಸಹಕಾರ ನೀಡಿದ್ದನ್ನು ಅತ್ಯಂತ ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

ಪಶು ಆಹಾರ ತಯಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳು: ಜನನಿ ಕಾರ್ಖಾನೆಯಲ್ಲಿ ಮುಖ್ಯವಾಗಿ ಹಸುಗಳಿಗೆ, ಎಮ್ಮೆಗಳಿಗೆ, ಕುರಿ–ಮೇಕೆಗಳಿಗೆ ಮತ್ತು ಕೋಳಿಗಳಿಗೆ ಗುಣಮಟ್ಟದ ಪಶುಆಹಾರಗಳನ್ನು ತಯಾರಿಸಲಾಗುತ್ತಿದೆ. ಈ ಮೇಲೆ ಸೂಚಿಸಿರುವ ಜಾನುವಾರುಗಳಿಗೆ ಮೂಲಭೂತವಾಗಿ ಕೈಗಾರಿಕೆಯಲ್ಲಿ ಬಳಕೆಯಾಗುವ ಕಚ್ಚಾ ಸಾಮಗ್ರಿಗಳೆಂದರೆ, 1) ಪ್ರೋಟೀನ್ ಪೂರೈಸುವ–ಶೇಂಗಾ ಹಿಂಡಿ, ಹತ್ತಿ ಹಿಂಡಿ, ತೆಂಗಿನ ಹಿಂಡಿ, ಸೂರ್ಯಕಾಂತಿ ಹಿಂಡಿ, ಸಾಸಿವೆ ಹಿಂಡಿ, ಅವರೆ ಹೊಟ್ಟು, ಕಾಫಿ ಹಿಂಡಿ, ಡಿಒಆರ್‌ಬಿ 2) ಎನರ್ಜಿ (ಕಾರ್ಬೋಹೈಡ್ರೇಟ್) ಪೂರೈಸುವ – ಮೆಕ್ಕೆಜೋಳ, ಅಕ್ಕಿ ನುಚ್ಚು, ಡಿಒಆರ್‌ಬಿ, ಅಕ್ಕಿ ತೌಡು ಮುಂತಾದವುಗಳು 3) ಫೈಬರ್ ನಾರಿನಂಶ ಪೂರೈಸುವ–ಅವಲಕ್ಕಿ ತೌಡು, ಮಂಡಕ್ಕಿ ತೌಡು, ಅವರೆ ಹೊಟ್ಟು, ಕಾಫಿ ಹೊಟ್ಟು ಇದರ ಜೊತೆಗೆ ಉಪ್ಪು, ಕಾಕಂಬಿ (ಮೊಲಾಸಿಸ್), ಬಿಸ್ಕತ್ತುಗಳು, ಶೇ. 1ರಷ್ಟು ಯೂರಿಯಾ, ಮಿನರಲ್ ಮಿಕ್ಸ್, ಸುಣ್ಣ, ಡಿಒಆರ್‌ಬಿ ಕೇಕ್‌ಗಳು ಬೇಕಾಗುತ್ತದೆ. ಈ ಮೇಲಿನ ಕಚ್ಚಾ ಸಾಮಗ್ರಿಗಳಿಂದ ಸಮ್ಮಿಶ್ರಣಗೊಂಡು ವಿವಿಧ ಬಗೆಯ ಪಶು ಆಹಾರಗಳನ್ನು ಅಂದರೆ, 1) ಮ್ಯಾಶ್‌ಫೀಡ್ 2) ಪೆಲ್ಲೆಟ್ಸ್ – ಕಡ್ಡಿಹಿಂಡಿ 3) ಬೂಸಾವನ್ನು ತಯಾರಿಸಲಾಗುತ್ತದೆ. ಒಮ್ಮೆ ತಯಾರಾದ

ಈ ಉತ್ಪನ್ನಗಳನ್ನು 35 ದಿನಗಳವರೆಗೆ ಜಾನುವಾರುಗಳಿಗೆ ಬಳಕೆ ಮಾಡಬಹುದಾಗಿರುತ್ತದೆ ಎಂದು ಅವರು ತಿಳಿಸುತ್ತಾರೆ.

ಇವರ ಪ್ರಕಾರ ಪಶು ಆಹಾರಕ್ಕೆ ಬೇಕಾಗುವ ಕಚ್ಚಾವಸ್ತುಗಳನ್ನು ನೆರೆಯ ಜಿಲ್ಲೆಗಳಿಂದ ಖರೀದಿಸಲಾಗುತ್ತದೆ. ಪಶು ಆಹಾರದ ಬೆಲೆ ಅದಕ್ಕೆ ಬೇಕಾಗುವ ಕಚ್ಚಾವಸ್ತುವಿನ ಮೇಲೆ ನಿರ್ಧಾರಿತವಾಗಿರುತ್ತದೆ. ಯಾವ ಕಚ್ಚಾ ವಸ್ತುವನ್ನು ಯಾವ ಭಾಗದಿಂದ ಖರೀದಿಸಿದರೆ ಅತ್ಯಂತ ಕಡಿಮೆ ದರದಲ್ಲಿ ಪೌಷ್ಟಿಕ ಪಶು ಆಹಾರವನ್ನು ಸಿದ್ಧಪಡಿಸಲು ಸಾಧ್ಯವೆಂಬುದನ್ನು ಗಮನದಲ್ಲಿಟ್ಟುಕೊಂಡು ತರಿಸುತ್ತಾರೆ. ಪಶು ಆಹಾರದ ತಯಾರಿಕೆಯ ಶೇ. 90ರಷ್ಟು ಖರ್ಚು ಕಚ್ಚಾವಸ್ತುವಿನ ಮೇಲೆ ನಿರ್ಧಾರಿತವಾಗಿರುತ್ತದೆ. ಬೇಕಾಗುವ ಪ್ರೋಟೀನ್, ಎನರ್ಜಿ ಹಾಗೂ ನಾರಿನಂಶಗಳನ್ನು ನೀಡುವ ವಿವಿಧ ಕಚ್ಚಾ ವಸ್ತುಗಳನ್ನು ಗುರುತಿಸಿ ಅವುಗಳ ಬೆಲೆಯನ್ನು ಗಮನಿಸಿ ಬೇಕಾಗುವ ಪ್ರಮಾಣದಲ್ಲಿ ಖರೀದಿಸಿ ಗುಣಮಟ್ಟದ ಆಹಾರವನ್ನು ತಯಾರಿಸುವುದರಿಂದ, ರೈತರ ಬೇಡಿಕೆಯಂತೆ ಪೌಷ್ಟಿಕ ಆಹಾರವನ್ನು ಕಡಿಮೆ ದರದಲ್ಲಿ ಕೊಡಬಹುದಾಗಿದೆ. ಪಶು ಆಹಾರದ ಬೇಡಿಕೆಯು ಅದನ್ನು ಬಳಸುವುದರಿಂದ ಹಾಲಿನ ಪ್ರಮಾಣದ ಮೇಲೆ ಹಾಗೂ ಹಾಲಿನ ಗುಣಮಟ್ಟದ ಮೇಲೆ ಆಗಿರುವ ಪರಿಣಾಮದ ಮೇಲೆ ನಿರ್ಧಾರಿತವಾಗಿರುತ್ತದೆ.

ವಿವಿಧ ಪಶು ಆಹಾರಗಳ ಉತ್ಪಾದನೆ: ಮ್ಯಾಷ್, ಕಡ್ಡಿ ಹಿಂಡಿ ಹಾಗೂ ಬೂಸಾ ವಿವಿಧ ಪಶು ಆಹಾರವನ್ನು ಜನನಿ ಫೀಡ್ಸ್ ಘಟಕದಲ್ಲಿ ತಯಾರಿಸಲಾಗುತ್ತದೆ. ಪ್ರತಿ ದಿನ ಬೇಡಿಕೆಗೆ ಅನುಸಾರವಾಗಿ 70 ಕ್ವಿ. ನಷ್ಟು ಪಶು ಆಹಾರವನ್ನು ತಯಾರಿಸಲಾಗುತ್ತದೆ. ಮ್ಯಾಷ್ ಫೀಡ್ 30 ಕ್ವಿ. ನಷ್ಟು, ಕಡ್ಡಿ ಹಿಂಡಿ 30 ಕ್ವಿ. ನಷ್ಟು ಹಾಗೂ 10 ಕ್ವಿ. ನಷ್ಟು ಬೂಸಾ ತಯಾರಿಸಲಾಗುತ್ತದೆ. ವರ್ಷದಲ್ಲಿ ಘಟಕವು 270–300 ದಿನ ಕಾರ್ಯನಿರ್ವಹಿಸುತ್ತಿದ್ದುವರ್ಷಕ್ಕೆ 18,900 ಕ್ವಿ. ನಷ್ಟು ಪಶು ಆಹಾರ ಸಿದ್ಧಪಡಿಸಲಾಗುತ್ತದೆ. ಮಳೆಗಾಲದಲ್ಲಿ ಹುಲ್ಲಿನ ಲಭ್ಯತೆ ಇರುವುದರಿಂದ ಹೆಚ್ಚಾಗಿ ಫೀಡ್ ಬೇಡಿಕೆ ಬರುವುದಿಲ್ಲ. ಇಂತಹ ಸಮಯದಲ್ಲಿ ಶೇ. 10 ರಿಂದ 20ರಷ್ಟು ಉತ್ಪಾದನೆಯ ಪ್ರಮಾಣವು ಕುಂಠಿತವಾಗುತ್ತದೆ. ಮಿಕ್ಕಿದ ಸಮಯದಲ್ಲಿ ಹಸಿ ಹಾಗೂ ಒಣ ಹುಲ್ಲಿನ ಅಭಾವ ಇರುವುದರಿಂದ ಫೀಡ್ಸ್‌ಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಬೇಡಿಕೆಗೆ ಅನುಸಾರವಾಗಿ ಫೀಡ್ಸ್ ತಯಾರಿಕೆ ಆಗುವುದರಿಂದ ಮಾರಾಟವಾಗದೆ ಉಳಿಯುವುದೇ ವಿರಳ ಎನ್ನುತ್ತಾರೆ ರವಿಕುಮಾರ್‌ರವರು.

ಘಟಕ ಸ್ಥಾಪನೆಯ ಪೂರ್ವ ಸಿದ್ಧತೆಗಳು: ಪಶು ಆಹಾರ ತಯಾರಿಕ ಘಟಕದ ಸ್ಥಾಪನೆಗೆ ಮೂಲಭೂತವಾಗಿ ನೀರು, ವಿದ್ಯುತ್, ರಸ್ತೆ ಸಂಪರ್ಕ ಹೊಂದಿರುವ ಗ್ರಾಮೀಣ ಭಾಗದಲ್ಲಿರುವ ಜಮೀನು ಬೇಕಾಗಿರುತ್ತದೆ. ಕೃಷಿ ಭೂಮಿಯನ್ನು ಇಂಡಸ್ಟ್ರಿಗಾಗಿ ಭೂಪರಿವರ್ತನೆ ಮಾಡಿಸಬೇಕಾಗುತ್ತದೆ. ಇದಕ್ಕೆ ಕೈಗಾರಿಕಾ ವಸತಿ ಅನುಮತಿ ಪಡೆಯಲು ಗ್ರಾಮ ಪಂಚಾಯಿತಿಗೆ ಶುಲ್ಕ ಪಾವತಿಸಿ ಪಡೆದುಕೊಳ್ಳಬೇಕಾಗುತ್ತದೆ. ಈ ಕೈಗಾರಿಕೆ ಬಳಕೆಯಾಗುವ ಕಾಕಂಬಿಗೆ ಅಬಕಾರಿ ಇಲಾಖೆಯಿಂದ ಶುಲ್ಕ ಪಾವತಿಸಿ ಲೈಸೆನ್ಸ್ ಪಡೆಯಬೇಕಾಗುತ್ತದೆ. ಅಲ್ಲದೆ ವಿದ್ಯುತ್ ಪೂರೈಕೆಯ ಸಂಪರ್ಕದ ಲೈಸೆನ್ಸ್‌ಗೆ ನಿಗದಿಗೊಳಿಸಿದ ಮೊತ್ತ ಠೇವಣಿ ಕಟ್ಟಬೇಕಾಗುತ್ತದೆ. ಎಫ್‌ಹೆಚ್‌ಎಫ್ ಇಲಾಖೆಗೆ ಶುಲ್ಕ ಪಾವತಿಸಿ ಲೈಸೆನ್ಸ್ ಪಡೆಯ ಬೇಕಾಗುತ್ತದೆಂದು ತಿಳಿಸುತ್ತಾರೆ.

ಘಟಕದ ಮೇಲೆ ಹೂಡುವ ಸ್ಥಿರ ಬಂಡವಾಳ: ನೀರು, ವಿದ್ಯುತ್ ಹಾಗೂ ರಸ್ತೆ ಸಂಪರ್ಕವಿರುವ ಗ್ರಾಮೀಣ ಭಾಗದ ಜಮೀನಿನಲ್ಲಿ ತಯಾರಿಕಾ ಘಟಕವನ್ನು ನಿರ್ಮಿಸುವುದು ಸೂಕ್ತವಾಗಿರುತ್ತದೆ. ಮ್ಯಾಷ್ ಹಾಗೂ ಬೂಸಾ ಸಿದ್ಧಪಡಿಸಲು ಪ್ರತ್ಯೇಕ ಘಟಕ ಹಾಗೂ ಕಡ್ಡಿ ಹಿಂಡಿ ಮಾಡಲು ಪ್ರತ್ಯೇಕ ಘಟಕ ಇದ್ದರೆ ಉತ್ತಮ. ಕಚ್ಚಾವಸ್ತುವಿನ ಲಭ್ಯತೆ ನಿರಂತರವಿಲ್ಲದ ಕಾರಣ ಅದರ ಸಂಗ್ರಹಣೆಗೆ ಮಾಡಲು ಯೋಗ್ಯ ಘಟಕ ನಿರ್ಮಿಸಿ ಪಶು ಆಹಾರವನ್ನು ತಯಾರಿಸುತ್ತಿದ್ದಾರೆ. ಯಂತ್ರಗಳನ್ನು ಕೂಲಿ ಕಾರ್ಮಿಕರಿಗೆ ಸರಾಗವಾಗಿ ಕೆಲಸ ಮಾಡಲು, ಸಿದ್ಧಗೊಂಡ ಪಶು ಆಹಾರವನ್ನು ತಾತ್ಕಾಲಿಕವಾಗಿ ಸಂಗ್ರಹಣೆ ಮಾಡಲು 40x60 ಅಥವಾ 60x40 ತಮ್ಮ ಅನುಕೂಲಕ್ಕೆ ಅನುಸಾರವಾಗಿ 2 ಕಟ್ಟಡಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಹಾಗೂ 20x40 ಸುತ್ತಳತೆಯ ಘಟಕವು ಕಡ್ಡಿ ಹಿಂಡಿ ತಯಾರಿಸಲು ಬೇಕಾಗುತ್ತದೆ ಎಂದು ಅವರು ತಿಳಿಸಿರುತ್ತಾರೆ. ಕಟ್ಟಡ ಅಥವಾ ಶೆಡ್‌ಅನ್ನು ಶೀಟ್‌ಮುಚ್ಚಳಿಕೆಯಿಂದ ತಯಾರಿಸಲು ಚ.ಮೀ.ಗೆ ರೂ. 110–120 ತಗುಲಲಿದ್ದು, ಸುಮಾರು 4 ಲಕ್ಷದಷ್ಟು ಬಂಡವಾಳದ ಅವಶ್ಯಕತೆಯಿರುತ್ತದೆ. ಯಂತ್ರಗಳು ವಿದ್ಯುತ್‌ಚಾಲಿತವಾದ್ದರಿಂದ 80 ಹೆಚ್.ಪಿ. ವಿದ್ಯುದೀಕರಣಕ್ಕೆ ರೂ. 3.6 ಲಕ್ಷದ ಠೇವಣಿಯನ್ನು ಭರಿಸಬೇಕಾಗುತ್ತದೆ. ಸುಮಾರು 50 ಲಕ್ಷ ಮೌಲ್ಯದ ಯಂತ್ರಗಳು ಅಂದರೆ, ಎಲಿವೇಟರ್, ಪಲ್ವರೈಸರ್, ಮಿಕ್ಸರ್ ಹಾಗೂ ಬಿನ್‌ಗಳು ಮ್ಯಾಷ್ ಮತ್ತು ಬೂಸಾ ತಯಾರಿಕೆಗೆ ಅವಶ್ಯಕತೆ ಇರುತ್ತದೆ. ಇದರ ಜೊತೆಯಲ್ಲಿ ತೂಕದ ಯಂತ್ರ, ಹೊಲಿಗೆ ಯಂತ್ರವು ಬೇಕಾಗುತ್ತದೆ. ಯಂತ್ರಗಳನ್ನು ಗುಜರಾತಿನಿಂದ ತಂದು ಅನುಸ್ಥಾಪಿಸಲಾಗಿರುತ್ತದೆ. ಸುಮಾರು 2000 ಟನ್‌ನಷ್ಟು ಪಶು ಆಹಾರ ಸಿದ್ಧಪಡಿಸಲು ಆಹಾರ ಘಟಕದ ಮೇಲೆ ಮಾಡುವ ಸ್ಥಿರ ಬಂಡವಾಳವು 1–1.25 ಕೋಟಿಯಷ್ಟು ಬೇಕಾಗುತ್ತದೆ ಎಂದು ಅವರು ತಿಳಿಸಿರುತ್ತಾರೆ.

ಪ್ರತಿ 1 ಕ್ವಿಂಟಾಲ್ ಮ್ಯಾಷ್‌ಫೀಡ್ ತಯಾರಿಸುವ ವಿಧಾನ: ಮೆಕ್ಕೆಜೋಳ–24 ಕೆಜಿ, ಮಂಡಕ್ಕಿ ಅಥವಾ ಅವಲಕ್ಕಿ ತೌಡು–8 ಕೆ. ಜಿ, ಕಾಫಿ ತೌಡು–6 ಕೆಜಿ, ಸುಣ್ಣ–3 ಕೆಜಿ, ಉಪ್ಪು–2 ಕೆಜಿ, ಅವರೆ ತೌಡು–6 ಕೆಜಿ, ಎಣ್ಣೆ ತೆಗೆದ ಅಕ್ಕಿ ತೌಡು –30 ಕೆಜಿ, ಮಿನರಲ್ ಮಿಕ್ಸರ್–800 ಗ್ರಾಂ, ಶೇ.1ರಷ್ಟು ಯೂರಿಯಾ–1 ಕೆಜಿ ಇವಿಷ್ಟನ್ನು ಎಲಿವೇಟರ್ ಮೂಲಕ ಪಲ್ವರೈಸರ್‌ಗೆ ಸಾಗಿಸಲಾಗುತ್ತದೆ. ಈ ಎಲ್ಲಾ ಸಾಮಗ್ರಿಗಳನ್ನು ಪಲ್ವರೈಸರ್ ಯಂತ್ರವು ಕುಟ್ಟಿ ಪುಡಿ ಮಾಡಿ, ಏರ್‌ಬ್ಲೋವರ್ ಮೂಲಕ ಮಿಕ್ಸರ್‌ಗೆ ಬರುತ್ತದೆ. ಮಿಕ್ಸರ್ ಯಂತ್ರದಲ್ಲಿ ಪುಡಿಯಾಗಿರುವ ಸಾಮಗ್ರಿಗಳಿಗೆ, 1 ಕೆಜಿ ಹತ್ತಿ ಹಿಂಡಿ, 3 ಕೆಜಿ ಸಾಸಿವೆ ಹಿಂಡಿ, 600ಗ್ರಾಂನಷ್ಟು ಶೇಂಗಾಹಿಂಡಿ, 8ಕೆಜಿ ಎಣ್ಣೆ ತೆಗೆದ ಅಕ್ಕಿ ತೌಡಿನ ಹಿಂಡಿ, 6 ಕೆಜಿಯಷ್ಟು ಕಾಕಂಬಿಯನ್ನು ಮಿಕ್ಸರ್ ಯಂತ್ರಗಳಲ್ಲಿ ಮಿಶ್ರಣಗೊಂಡು ಎಲಿವೇಟರ್ ಮುಖಾಂತರ ಸ್ಟೋರೇಜ್ ಬಿನ್‌ಗೆ ಬಂದು ಸೇರುತ್ತದೆ. ಈ ಬಿನ್‌ನಿಂದ ಪ್ರತಿ 50 ಕೆಜಿ ಪ್ಯಾಕೆಟ್‌ಗಳಾಗಿ ಸಿದ್ಧಪಡಿಸಿ ರೈತರಿಗೆ ಮಾರಾಟ ಮಾಡಲು ಯೋಗ್ಯವಾಗಿರುತ್ತದೆ ಎಂದು ತಿಳಿಸುತ್ತಾರೆ. ಇದೇ ಪದ್ಧತಿಯಲ್ಲಿ ಬೂಸಾ ತಯಾರಿಸಲು ಮೆಕ್ಕೆಜೋಳ, ಎಣ್ಣೆ ತೆಗೆದ ಅಕ್ಕಿ ತೌಡು, ಅವರೇ ತೌಡು, ಉಪ್ಪು, ಸುಣ್ಣ, ಮಿನರಲ್‌ಮಿಕ್ಸರ್ ಇಷ್ಟೇ ಸಾಮಗ್ರಿಗಳನ್ನು ಬಳಕೆ ಮಾಡಿ ಬೂಸಾ ತಯಾರಿಸಲಾಗುತ್ತದೆ ಎಂದು ತಿಳಿಸುತ್ತಾರೆ.

ಮ್ಯಾಷ್‌ಫೀಡ್‌ಗೆ ಬಳಸುವ ಎಲ್ಲಾ ಸಾಮಗ್ರಿಗಳನ್ನು, ಮೊದಲಿಗೆ ಎಲಿವೇಟರ್ ಮೂಲಕ ಹ್ಯಾಮರ್ ಘಟಕಕ್ಕೆ ಸಾಗಿಸಿ, ಕುಟ್ಟಿ ಪುಡಿಮಾಡಿ, ಎಲಿವೇಟರ್ ಮುಖೇನ ಸ್ಟೋರೇಜ್ ಬಿನ್ ಸಾಗಿಸಿ, ಮಿಕ್ಸರ್ ಯಂತ್ರದಲ್ಲಿ ಕಾಕಂಬಿಯೊಂದಿಗೆ ಪುಡಿಯಾದ ಮಿಶ್ರಣವನ್ನು ಸೇರಿಸಿ, ಕಡ್ಡಿಹಿಂಡಿ (ಪೆಲ್ಲೇಟ್) ತಯಾರಿಸುವ ಯಂತ್ರಕ್ಕೆ ಕಳುಹಿಸುವುದರ ಮೂಲಕ ಕಡ್ಡಿ ಹಿಂಡಿ ತಯಾರಿಸಲಾಗುತ್ತದೆ. ತಯಾರಾದ ಕಡ್ಡಿ ಹಿಂಡಿಯನ್ನು ಜರಡಿಯಲ್ಲಿ ಸಾಣಿಸಲಾಗುತ್ತದೆ. ಏಕೆಂದರೆ ಕಡ್ಡಿ ಹಿಂಡಿಯೊಂದಿಗೆ

ಮಿಶ್ರಣದ ಪುಡಿಯನ್ನು ಬೇರ್ಪಡಿಸಲಾಗುವುದು. 1 ಕ್ವಿ. ವಸ್ತುಗಳನ್ನು ಬಳಸಿ ಕಡ್ಡಿ ಹಿಂಡಿ ತಯಾರಿಸಿದರೆ ಕೇವಲ 70 ಕೆ.ಜಿ. ಕಡ್ಡಿ ಹಿಂಡಿ ದೊರೆಯುತ್ತದೆ. ಮಿಕ್ಕ 30 ಕೆ.ಜಿ. ಪುಡಿ ರೂಪದಲ್ಲಿ ಉಳಿಯುವ ವಸ್ತುಗಳನ್ನು ಪುನಃ ಪೆಲ್ಲೇಟ್ ಯಂತ್ರಕ್ಕೆ ಹಾಕಿ ಕಡ್ಡಿ ಹಿಂಡಿಯನ್ನು ತಯಾರಿಸಲಾಗುತ್ತದೆ ಎಂದು ರವಿಕುಮಾರ್‌ರವರು ತಿಳಿಸುತ್ತಾರೆ.

ಪ್ರತಿ 1 ಕ್ವಿಂಟಾಲ್ ಮ್ಯಾಷ್ ಹಿಂಡಿಗೆ ತಗಲುವ ವೆಚ್ಚ: ಈ ಮೇಲೆ ತಿಳಿಸಿದ ಕಚ್ಚಾವಸ್ತುಗಳನ್ನು ಬಳಕೆ ಮಾಡಿದಲ್ಲಿ ಪ್ರತಿ ಕ್ವಿಂಟಾಲ್ ಮ್ಯಾಶ್‌ಫೀಡ್ ತಯಾರಿಸಲು ಕಚ್ಚಾ ವಸ್ತುವಿನ ಮೇಲಿನ ಖರ್ಚು ರೂ. 1775 ಆಗಿರುತ್ತದೆ. ಜೊತೆಗೆ ಕಾರ್ಮಿಕ ವೆಚ್ಚ ಮತ್ತು ವಿದ್ಯುತ್, ರಿಪೇರಿ, ಪ್ಯಾಕಿಂಗ್ ಸೇರಿದರೆ ರೂ. 145 ತಗಲುತ್ತದೆ. ಪ್ರತಿ 1 ಕ್ವಿಂಟಾಲ್ ಮ್ಯಾಷ್ ಫೀಡ್ ತಯಾರಿಸಲು ತಗಲುವ ವೆಚ್ಚ ರೂ.1920 ಆಗಿರುತ್ತದೆ. ಯಂತ್ರದ ಸವಕಳಿ, ಸ್ಥಿರಾಸ್ತಿಯ ಮೇಲಿನ ಬಡ್ಡಿ, ಭೂ ಬಾಡಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 80ರಷ್ಟು ಆಗಿದ್ದು, ಒಟ್ಟಾರೆ ಖರ್ಚು ರೂ.2000 ಆಗಿರುತ್ತದೆ. ಇದನ್ನು ರೂ.2200ಕ್ಕೆ ಮಾರಿದಾಗ ಪ್ರತಿ ಕ್ವಿಂಟಾಲ್‌ಗೆ ರೂ.200ರಷ್ಟು ದೊರಕುತ್ತದೆ. ಈ ಲಾಭಾಂಶವು ಕಚ್ಚಾ ವಸ್ತುವಿನ ಲಭ್ಯತೆಯ ಹಾಗೂ ಬೆಲೆಯ ಮೇಲೆ ನಿರ್ಧರಿತವಾಗಿರುವುದರಿಂದ ಲಾಭಾಂಶವೂ ಸ್ಥಿರವಾಗಿರುವುದಿಲ್ಲ ಎಂಬುದನ್ನು ಅವರು ತಿಳಿಸುತ್ತಾರೆ.

ಪೆಲ್ಲೇಟ್ ತಯಾರಿಕೆಗೆ ಬಳಸುವ ವಸ್ತುಗಳು ಮ್ಯಾಷ್ ಫೀಡ್‌ನಷ್ಟೇ ಆಗಿರುವುದರಿಂದ ಕಚ್ಚಾವಸ್ತುವಿಗೆ ತಗಲುವ ವೆಚ್ಚದಲ್ಲಿ ಯಾವ ಬದಲಾವಣೆ ಇರುವುದಿಲ್ಲ. ಆದರೆ ಮ್ಯಾಷ್ ಫೀಡ್‌ಗೆ ಹೋಲಿಸಿದರೆ, ಕಾರ್ಮಿಕರ ವೆಚ್ಚ, ವಿದ್ಯುತ್ ವೆಚ್ಚ ಕೊಂಚ ಹೆಚ್ಚಾಗಿದ್ದು, ಪ್ರತಿ ಕ್ವಿಂಟಾಲ್‌ಗೆ ರೂ.100 ರಷ್ಟು ಹೆಚ್ಚಾಗುವುದರಿಂದ ರೂ.2100 ಆಗಿರುತ್ತದೆ. ಹಾಗಾಗಿ ಇದನ್ನು ರೂ. 2300ರಂತೆ ಮಾರಾಟ ಮಾಡಿದರೆ ರೂ.200ರಷ್ಟು ಲಾಭ ದೊರಕುತ್ತದೆ. ಇವರ ಪ್ರಕಾರ ಬೂಸಾಗೆ ಹೆಚ್ಚಿನ ಬೇಡಿಕೆ ಇಲ್ಲದ ಕಾರಣ ಕಡಿಮೆ ಪ್ರಮಾಣದಲ್ಲಿ ತಯಾರಿಸಲಾಗುತ್ತದೆ. ಮ್ಯಾಷ್ ಫೀಡ್‌ನಲ್ಲಿ ಬಳಸುವ ವಸ್ತುಗಳು ಕಣ್ಣಿಗೆ ಕಾಣುವಂತಿರುವುದರಿಂದ ಪಶುಸಂಗೋಪನೆಯಲ್ಲಿ ತೊಡಗಿರುವ ರೈತರು ಹೆಚ್ಚಾಗಿ ಮ್ಯಾಷ್ ಫೀಡ್‌ಅನ್ನೇ ಕೊಂಡುಕೊಳ್ಳುತ್ತಾರೆ. ಕಡ್ಡಿ ಹಿಂಡಿ ತಯಾರಿಕೆಗೆ ಬಳಸುವ ವಸ್ತುಗಳು ಮ್ಯಾಷ್‌ಫೀಡ್‌ನಂತೆ ಇದ್ದರೂ, ಕುಟ್ಟಿ ಪುಡಿ ಮಾಡಿರುವುದರಿಂದ ಕಣ್ಣಿಗೆ ಕಾಣಿಸುವುದಿಲ್ಲ. ಮ್ಯಾಷ್‌ಫೀಡ್‌ಗೆ ಹೋಲಿಸಿದರೆ, ಕಡ್ಡಿ ಹಿಂಡಿಯೂ ಸ್ವಲ್ಪ ದುಬಾರಿಯಾಗುವುದರಿಂದ ಬೇಡಿಕೆ ಕಡಿಮೆ ಇದೆ ಎನ್ನುತ್ತಾರೆ.

ಈ ಕಾರ್ಖಾನೆಯಲ್ಲಿ ಭಾನುವಾರ ರಜಾದಿನ, ಹಬ್ಬ ಹರಿದಿನಗಳಲ್ಲಿ ಕಾರ್ಮಿಕರಿಗೆ ರಜೆಯ ಸೌಲಭ್ಯವಿರುತ್ತದೆ. ಇಲ್ಲಿನ ಕಾರ್ಖಾನೆಯು ವಾರ್ಷಿಕವಾಗಿ ಒಟ್ಟು 270ದಿನಗಳ ಕಾಲ ಕಾರ್ಯನಿರ್ವಹಿಸುತ್ತದೆ. ಇವರಲ್ಲಿ 2 ಮಂದಿ ಸೇಲ್ಸ್‌ಮನ್, 1 ಮ್ಯಾನೇಜರ್, 2 ಡ್ರೈವರ್, 7 ಮಂದಿ ಕಾರ್ಮಿಕರು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಾರ್ಖಾನೆಯಲ್ಲಿ 1 ಅಶೋಕ್ ಲೈಲ್ಯಾಂಡ್ ಲಾರಿ, 1 ಈಷರ್ ಲಾರಿಯನ್ನು ಬಳಕೆ ಮಾಡಿಕೊಂಡು ಸೋಮವಾರ–ಹೊನ್ನಾಳಿ ತಾಲ್ಲೂಕು, ಮಂಗಳವಾರ–ಚೀಲೂರು, ಹೊಳಲೂರು, ಬಿಆರ್‌ಪಿ, ಲಕ್ಕವಳ್ಳಿ, ಬುಧವಾರ–ಹೊಸನಗರ ತಾಲ್ಲೂಕು, ಗುರುವಾರ–ತೀರ್ಥಹಳ್ಳಿ ತಾಲ್ಲೂಕು, ಶನಿವಾರ–ಶಿಕಾರಿಪುರ ಶಿರಾಳಕೊಪ್ಪ ಊರುಗಳಲ್ಲಿ ಮಾರುಕಟ್ಟೆ ಮಾಡಲಾಗುತ್ತದೆಂದು ಅವರು ತಿಳಿಸುತ್ತಾರೆ.

ಉತ್ಪನ್ನಗಳ ಬಳಸುವ ವಿಧಾನ: ಪಶು ಆಹಾರದ ಉತ್ಪನ್ನಗಳಲ್ಲಿ 1) ಹಾಲು ಕೊಡುವ ಹೆಚ್.ಎಫ್ ಹಸುವಿಗೆ ಪೇಲ್ಲೆಟ್ ಹಿಂಡಿ ಬಳಕೆ ಸೂಕ್ತ, 2) ಆಕಳುಗಳಿಗೆ ಮ್ಯಾಶ್‌ಹಿಂಡಿ ಪ್ರತಿ 3 ಕೆ.ಜಿ. ಕೊಟ್ಟರೆ ಸೂಕ್ತ ಎನ್ನುತ್ತಾರೆ ರವಿಕುಮಾರ್‌ರವರು.

ಈ ಉದ್ಯಮ ನಡೆಸುವಲ್ಲಿನ ಎದುರಾಗುವ ಸಮಸ್ಯೆಗಳು: ಪಶು ಆಹಾರ ಉತ್ಪನ್ನದ ಉದ್ಯಮದಲ್ಲಿ ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯ, ಬೇಕಾದ ಪ್ರಮಾಣದಲ್ಲಿ ಕಚ್ಚಾ ವಸ್ತುಗಳು ದೊರೆಯದೇ ಇರುವುದು, ಕಾರ್ಮಿಕರ ಸಮಸ್ಯೆ, ಹೆಚ್ಚು ದಿನ ಶೇಖರಿಸಿಡಲಾಗದೆ ಮುಗ್ಗು ಬರುವುದು, ಸ್ಪರ್ಧಾತ್ಮಕತೆ, ಹೆಚ್ಚಿನ ಮೂಲ ಬಂಡವಾಳ ಹೂಡಿಕೆಯಂತಹ ಸಮಸ್ಯೆಗಳಿವೆ ಎಂಬುದಾಗಿ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಇನ್ನೂ ಬೆಳೆಯ ಬೇಕಾದ ಉದ್ಯಮ: ಈ ಉದ್ಯಮದಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಸಹ, ಅವುಗಳನ್ನು ನಿಭಾಯಿಸಿಕೊಂಡು ರಾಜ್ಯದಲ್ಲಿ ಪಶುಆಹಾರ ಉತ್ಪಾದನೆಯಲ್ಲಿ ಸರ್ಕಾರ ಮತ್ತು ಹಲವು ಖಾಸಗಿ ಸಂಸ್ಥೆಗಳು ತೊಡಗಿಸಿಕೊಂಡಿರುತ್ತವೆ. ಪಶುಸಂಗೋಪನೆಯ ಹಿಂಡಿ ಉತ್ಪಾದನೆಯನ್ನು ದೊಡ್ಡ ಪ್ರಮಾಣದಲ್ಲಿ ಕರ್ನಾಟಕ ಸರ್ಕಾರವು ಕೈಗೊಂಡಿರುತ್ತದೆ. ಸರ್ಕಾರವು ಕರ್ನಾಟಕ ರಾಜ್ಯ ಹಾಲು ಒಕ್ಕೂಟದ ವತಿಯಿಂದ ಶಿಕಾರಿಪುರ, ಹಾಸನ ಹುಬ್ಬಳ್ಳಿಗಳಲ್ಲಿ ಸ್ವತಃ ಘಟಕವನ್ನು ಸ್ಥಾಪಿಸಿ, ಪಶು ಆಹಾರವನ್ನು ಉತ್ಪಾದನೆ ಮಾಡಿ ಪೂರೈಕೆ ಮಾಡುತ್ತಿದೆ. ಇದರ ಜೊತೆಗೆ ಶಿವಮೊಗ್ಗದ ಆಯನೂರು, ಉತ್ತರ ಕನ್ನಡ, ಹುಬ್ಬಳ್ಳಿ, ಮಂಡ್ಯಗಳಲ್ಲಿ ಖಾಸಗಿ ಸಂಸ್ಥೆಯವರು ಪಶು ಆಹಾರವನ್ನು ಉತ್ಪಾದಿಸಿ ರಾಜ್ಯದ ವಿವಿಧ ಭಾಗಗಳಿಗೆ ಪೂರೈಕೆ ಮಾಡುತ್ತಿದ್ದಾರೆ. ಅಲ್ಲದೆ ತಮಿಳುನಾಡು, ಗುಜರಾತ್ ರಾಜ್ಯಗಳಲ್ಲಿ ಪಶು ಆಹಾರವನ್ನು ಉತ್ಪಾದಿಸಿ, ಕರ್ನಾಟಕಕ್ಕೆ ಪೂರೈಕೆ ಮಾಡಲಾಗುತ್ತಿದೆ.

"ಮನುಷ್ಯ ಈ ಭೂಮಿಗೆ ಹುಟ್ಟಿ ಬಂದ ಮೇಲೆ ಏನಾದರೂ ಸಾಧನೆ ಮಾಡಬೇಕು. ಆಗ ಮಾತ್ರ ಮನುಷ್ಯನ ಬದುಕು ಸಾರ್ಥಕವಾಗುತ್ತದೆ. ಯಾವುದೇ ಒಂದು ಉದ್ಯಮ ಆರಂಭಿಸಿದರೆ ಸಮಾಜದಲ್ಲಿ ನಾಲ್ಕು ಜನಕ್ಕೆ ಉದ್ಯೋಗವನ್ನು ಕೊಡುವಂತಾಗಬೇಕು. ಆದುದರಿಂದ ಯುವಕರು ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಹೊಸತಾಗಿ ಬರುವ ಉತ್ಸಾಹಿ ಉದ್ಯಮಿಗಳಿಗೆ ಕಲಿಯಬೇಕೆಂಬ ಆಸಕ್ತಿ ಇರಬೇಕು. ಬರೀ ವಾಣಿಜ್ಯ ದೃಷ್ಟಿಕೋನದಲ್ಲಿ ಹಾಗೂ ದುಡ್ಡು ಮಾಡಬೇಕೆಂಬ ಉದ್ದೇಶವಿಟ್ಟುಕೊಂಡು ಬಂದರೆ ಇಲ್ಲಿ ಬಹಳ ದಿನ ಉಳಿಯಲಿಕ್ಕೆ ಸಾಧ್ಯವಿಲ್ಲ. ಸಮಾಜಕ್ಕೆ ಏನಾದರೊಂದಿಷ್ಟು ಸೇವೆ ಮಾಡುವ, ಸೇವಾ ಮನೋಭಾವ ಇರಬೇಕು. ಅದರಲ್ಲೂ ರೈತರಿಗೆ ನಾವು ಹೆಚ್ಚಿನ ಆದ್ಯತೆ ನೀಡಬೇಕು. ಅಂದರೆ 'ರೈತ ನಕ್ಕರೆ ದೇಶ ನಕ್ಕೀತು' ಎಂಬಂತೆ ರೈತರ ಸಂತಸದಲ್ಲಿ ನಾವು ಪಾಲುದಾರರಾದರೆ, ಸಾರ್ಥಕ ಬದುಕು ಕಾಣಲು ಸಾಧ್ಯವಾಗುತ್ತದೆ" ಎಂದು ಶ್ರೀ ರವಿಕುಮಾರ್ ಅವರು ತಮ್ಮ ಅನುಭವದ ನುಡಿಗಳನ್ನು ಬಿಚ್ಚಿಟ್ಟರು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಶ್ರೀ ರವಿಕುಮಾರ್
ಜನನಿ ಫೀಡ್ಸ್, ದ್ಯಾವಿನಕೆರೆ ರಸ್ತೆ, ಆಯನೂರು,
ಶಿವಮೊಗ್ಗ ತಾ.,ಜಿಲ್ಲೆ, ಮೊಬೈಲ್: 9591457577/9916211069

ನೆಲ್ಲಿಕಾಯಿಯ ಪೌಷ್ಟಿಕ ಮೌಲ್ಯವರ್ಧಿತ ಉತ್ಪನ್ನಗಳು

✍ ಶ್ರುತಿ ನಾಯಕ[1], 8197401089 ಮತ್ತು ಪ್ರತಿಭಾ ಹೆಚ್. ದೇವರಮನಿ[2], [1]ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ, ಇರುವಕ್ಕಿ, [2]ಕೃಷಿ ವಿಶ್ವವಿದ್ಯಾಲಯ, ಧಾರವಾಡ

ನೆಲ್ಲಿಕಾಯಿ, ಹಸಿರು ಬಣ್ಣದ ಸ್ಥಳೀಯ ಕಾಯಿ. ಆರೋಗ್ಯಕ್ಕಾಗಿ ಅತ್ಯಂತ ಉಪಯುಕ್ತವಾಗಿದೆ. ಇದನ್ನು ಆಮ್ಲಾ ಎಂದೂ ಕರೆಯುತ್ತಾರೆ. ನೆಲ್ಲಿಕಾಯಿಯನ್ನು ಯಾವ ಮಣ್ಣಿನಲ್ಲಾದರೂ ಬೆಳೆಸಬಹುದು ಮತ್ತು ಇದು ಹೆಚ್ಚಿನ ಉತ್ಪಾದನೆಯನ್ನು ನೀಡುತ್ತದೆ (ಪ್ರತಿ ಹೆಕ್ಟೇರ್‌ಗೆ 15–20 ಟನ್). ಈ ಹಣ್ಣು ವಿಟಮಿನ್ ಸಿ ಅಂಶದಿಂದ ಶ್ರೇಷ್ಠವಾಗಿದ್ದು, ನೈಸರ್ಗಿಕವಾಗಿ ಕಂಡುಬರುವ ಪದಾರ್ಥಗಳಲ್ಲಿ ಅತ್ಯಧಿಕ ಪ್ರಮಾಣದ ವಿಟಮಿನ್ ಸಿ ಹೊಂದಿದೆ. ನೆಲ್ಲಿಕಾಯಿಯ ರಸವು ಕಿತ್ತಳೆ ರಸಕ್ಕಿಂತ 20–25 ಪಟ್ಟು ಹೆಚ್ಚು ವಿಟಮಿನ್ ಸಿ ಅನ್ನು ಒದಗಿಸುತ್ತದೆ. ಇದು ಕೇವಲ ಪೌಷ್ಟಿಕತೆಯಲ್ಲ, ಇದರ ಆರೋಗ್ಯಕರ ಗುಣಗಳಿಂದಲೂ ಪ್ರಸಿದ್ಧಿಯಾಗಿದೆ. ಹೆಪಟೈಟಿಸ್, ಏಡ್ಸ್, ಇನ್ಫ್ಲುಯೆನ್ಸ ಮುಂತಾದ ವೈರಸ್‌ಗಳ ವಿರುದ್ಧ ಹೋರಾಡಲು, ಇದು ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಈ ಕಾಯಿ ಭಾರತೀಯ ಔಷಧಗಳಾದ ತ್ರಿಫಲಾ ಮತ್ತು ಚ್ಯವನಪ್ರಾಶಗಳಲ್ಲಿ ಮುಖ್ಯವಾಗಿ ಬಳಸಲಾಗುತ್ತದೆ. ನೆಲ್ಲಿಕಾಯಿ ತಂಪು, ಜೀರ್ಣಕಾರಕ, ಮೂತ್ರವರ್ಧಕ ಮತ್ತು ವಿರೇಚಕ ಗುಣಗಳನ್ನು ಹೊಂದಿದೆ. ಒಣಗಿದ ನೆಲ್ಲಿಕಾಯಿಯನ್ನು ಅತಿಸಾರ, ಅಜೀರ್ಣ, ಕೆಮ್ಮು, ರಕ್ತಹೀನತೆ ಮುಂತಾದ ಕಾಯಿಲೆಗಳಿಗೆ ಉಪಯೋಗಿಸಲಾಗುತ್ತದೆ. ನೆಲ್ಲಿಕಾಯಿಯನ್ನು ಚರ್ಮದ ಆರೋಗ್ಯ ಕಾಪಾಡಲು ಸಹ ಬಳಸಬಹುದು. ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಖಾಲಿ ಹೊಟ್ಟೆಯಲ್ಲಿ ನೆಲ್ಲಿಕಾಯಿ ರಸವನ್ನು ಸೇವಿಸುವುದು ಚರ್ಮದ ಕಾಯಿಲೆಗಳನ್ನು ನಿವಾರಿಸಲು ಸಹಾಯಕವಾಗಿದೆ.

ನೆಲ್ಲಿಕಾಯಿ ಪಾಕ ವಿಧಾನಗಳು

ನೆಲ್ಲಿಕಾಯಿ ಕ್ಯಾಂಡಿ: ಬೇಕಾಗುವ ಸಾಮಗ್ರಿ: ನೆಲ್ಲಿಕಾಯಿ 500 ಗ್ರಾಂ, ಸಕ್ಕರೆ 500 ಗ್ರಾಂ, 1 ಚಮಚ ಏಲಕ್ಕಿ ಪುಡಿ, 1 ಚಮಚ ನಿಂಬೆರಸ.

ಮಾಡುವ ವಿಧಾನ: ನೆಲ್ಲಿಕಾಯಿ ಕ್ಯಾಂಡಿಯನ್ನು ತಯಾರಿಸಲು, ಮೊದಲು 500 ಗ್ರಾಂ ನೆಲ್ಲಿಕಾಯಿಯನ್ನು ಶುದ್ಧವಾಗಿ ತೊಳೆಯಿರಿ. ನಂತರ, 2 ಕಪ್ ನೀರಿನಲ್ಲಿ ಈ ನೆಲ್ಲಿಕಾಯಿಗಳನ್ನು ಮೃದುವಾಗುವವರೆಗೆ ಕುದಿಸಿ. ತಣ್ಣಗಾದ ಮೇಲೆ, ನೆಲ್ಲಿಕಾಯಿಯ ಸಿಪ್ಪೆ ತೆಗೆಯಿರಿ ಮತ್ತು ಸಣ್ಣ ತುಂಡುಗಳಾಗಿ ಕತ್ತರಿಸಿ ಅಥವಾ ತುರಿಯಿರಿ. ತುರಿದ ನೆಲ್ಲಿಕಾಯಿಯನ್ನು 500 ಗ್ರಾಂ ಸಕ್ಕರೆಯೊಂದಿಗೆ ಮಿಶ್ರಣ ಮಾಡಿ. ಈ ಮಿಶ್ರಣವನ್ನು 3–4 ಗಂಟೆಗಳ ಕಾಲ ಬಿಟ್ಟು ಸಕ್ಕರೆಯನ್ನು ಸಂಪೂರ್ಣವಾಗಿ ಕರಗಲು ಬಿಡಿ. ನಂತರ, ಈ ಮಿಶ್ರಣವನ್ನು ಸಣ್ಣ ಉರಿಯಲ್ಲಿ ಬೇಯಿಸಿ, ನಂತರ ರುಚಿಯನ್ನು ಹೆಚ್ಚಿಸಲು ಒಂದು ಚಮಚ ಏಲಕ್ಕಿ ಪುಡಿ ಮತ್ತು ಒಂದು ಚಮಚ ನಿಂಬೆ ರಸವನ್ನು ಸೇರಿಸಿ, ಚೆನ್ನಾಗಿ ಬೆರೆಸಿ. ಈ ಮಿಶ್ರಣ ತಣ್ಣಗಾದ ನಂತರ, ಅದನ್ನು ಸಣ್ಣ ಗಾತ್ರದ ರೂಪದಲ್ಲಿ ಮಾಡಿ. ತಯಾರಾದ ಕ್ಯಾಂಡಿಗಳನ್ನು ಸೂರ್ಯನ ಬಿಸಿಲಿನಲ್ಲಿ ಅಥವಾ ಆಹಾರ ಡಿಹೈಡ್ರೇಟ್‌ನಲ್ಲಿ ಒಣಗಿಸಿ, ಅವು ಗಟ್ಟಿಯಾಗುವವರೆಗೆ ಮತ್ತು ಜಿಗುಟಾಗದವರೆಗೆ ಕಾಯಿರಿ. ಇದೀಗ, ರುಚಿಕರವಾದ ಮತ್ತು ಪೌಷ್ಟಿಕತೆಯುಳ್ಳ ನೆಲ್ಲಿಕಾಯಿ ಕ್ಯಾಂಡಿ ಸಿದ್ಧವಾಗುತ್ತದೆ.

ನೆಲ್ಲಿಕಾಯಿ ಜ್ಯೂಸ್: ಬೇಕಾಗುವ ಸಾಮಗ್ರಿ: 500 ಗ್ರಾಂ ತಾಜಾ ನೆಲ್ಲಿಕಾಯಿ, 1 ಲೀಟರ್ ತಣ್ಣನೆಯ ನೀರು, 100–150 ಗ್ರಾಂ ಸಕ್ಕರೆ (ಅಥವಾ ರುಚಿಗೆ ತಕ್ಕಂತೆ), 1 ಚಮಚ ಜೇನುತುಪ್ಪ (ಐಚ್ಛಿಕ), 1/2 ಚಮಚ ಶುಂಠಿ ತುರಿ (ಐಚ್ಛಿಕ), ಉಪ್ಪು.

ಮಾಡುವ ವಿಧಾನ: ತಾಜಾ ನೆಲ್ಲಿಕಾಯಿಗಳನ್ನು ತೊಳೆದು ಸ್ವಚ್ಛವಾಗಿ ಕತ್ತರಿಸಿ ಮತ್ತು ಬೀಜಗಳನ್ನು ತೆಗೆದುಹಾಕಿ. ನಂತರ, ಈ ತುಂಡುಗಳನ್ನು ಮಿಕ್ಸಿ ಜಾರ್‌ನಲ್ಲಿ ಹಾಕಿ, ಚಿಟಿಕೆ ಉಪ್ಪು ಮತ್ತು ಶುಂಠಿ ತುರಿ, ಸ್ವಲ್ಪ ನೀರು ಸೇರಿಸಿ, ದಪ್ಪ ಪೇಸ್ಟ್ ಆಗುವವರೆಗೆ ರುಬ್ಬಿ. ರುಬ್ಬಿದ ಮಿಶ್ರಣವನ್ನು ಶುದ್ಧ ಬಟ್ಟೆಯ ಮೂಲಕ ಒತ್ತಿ, ರಸವನ್ನು ಬೇರ್ಪಡಿಸಿ. ಉಳಿದ ನೀರನ್ನು ಈ ರಸಕ್ಕೆ ಸೇರಿಸಿ. ನಂತರ, ಸಕ್ಕರೆ ಮತ್ತು ಜೇನುತುಪ್ಪ ಸೇರಿಸಿ, ಚೆನ್ನಾಗಿ ಕಲಸಿ. ತಣ್ಣನೆಯ ನೀರಿನೊಂದಿಗೆ ಈ ರುಚಿಕರ ಮತ್ತು ಪೌಷ್ಟಿಕ ಜ್ಯೂಸ್ ಅನ್ನು ತಾಜಾವಾಗಿ ಸವಿಯಿರಿ.

ನೆಲ್ಲಿಕಾಯಿ ಉಪ್ಪಿನಕಾಯಿ: ಬೇಕಾಗುವ ಸಾಮಗ್ರಿಗಳು: 500 ಗ್ರಾಂ ತಾಜಾ ನೆಲ್ಲಿಕಾಯಿ, 100 ಗ್ರಾಂ ಉಪ್ಪು, 2 ಚಮಚ ಮೆಣಸಿನ ಪುಡಿ, 1 ಚಮಚ ಮೆಂತ್ಯೆ ಪುಡಿ, 2–3 ಚಮಚ ಎಣ್ಣೆ, 1 ಚಮಚ ಅರಿಶಿಣ ಪುಡಿ, 1/2 ಚಮಚ ಇಂಗು.

ಮಾಡುವ ವಿಧಾನ: ತಾಜಾ ನೆಲ್ಲಿಕಾಯಿಗಳನ್ನು ಚೆನ್ನಾಗಿ ತೊಳೆದು ಬಿಸಿನೀರಿನಲ್ಲಿ 5–10 ನಿಮಿಷ ಕುದಿಸಿ. ನಂತರ ನೀರನ್ನು ಆರಿಸಿ, ನೆಲ್ಲಿಕಾಯಿಗಳನ್ನು ತಣ್ಣಗಾಗಲು ಬಿಡಿ ಮತ್ತು ಸಣ್ಣ ಸಣ್ಣ ಚೂರುಗಳಾಗಿ ಕತ್ತರಿಸಿ. ಒಂದು ಬಟ್ಟಲಿನಲ್ಲಿ ಉಪ್ಪು, ಮೆಣಸಿನಪುಡಿ, ಮೆಂತ್ಯೆ ಪುಡಿ, ಅರಿಶಿಣ ಪುಡಿ, ಮತ್ತು ಹಿಂಗು ಸೇರಿಸಿ ಚೆನ್ನಾಗಿ ಕಲಸಿ. ಈ ಮಿಶ್ರಣವನ್ನು ನೆಲ್ಲಿಕಾಯಿಗಳಿಗೆ ಹಾಕಿ, ಸ್ವಚ್ಛವಾದ ಚಮಚದ ಸಹಾಯದಿಂದ ಸರಿಯಾಗಿ ಮಿಶ್ರಣ ಮಾಡಿ. ಅದರ ನಂತರ, ಕಡಿಮೆ ತಾಪಮಾನದಲ್ಲಿ ಎಣ್ಣೆಯನ್ನು ಕಾಯುವಷ್ಟು ಕುದಿಸಿ, ತಣ್ಣಗಾದ ನಂತರ ಅದನ್ನು ಮಿಶ್ರಣಕ್ಕೆ ಸೇರಿಸಿ. ತಯಾರಾದ ಉಪ್ಪಿನಕಾಯಿಯನ್ನು ಶುದ್ಧ ಗಾಜಿನ ಬಾಟಲಿಯಲ್ಲಿ ತುಂಬಿ. ದಿನಕ್ಕೊಮ್ಮೆ ಮಿಶ್ರಣ ಮಾಡಿ, 3–4 ದಿನಗಳ ನಂತರ ಉಪ್ಪಿನಕಾಯಿ ಸವಿಯಲು ತಯಾರಾಗುತ್ತದೆ.

ನೆಲ್ಲಿಕಾಯಿ ತಂಬುಳಿ: ಬೇಕಾಗುವ ಸಾಮಗ್ರಿಗಳು: 100 ಗ್ರಾಂ ತಾಜಾ ನೆಲ್ಲಿಕಾಯಿಗಳು, 1/2 ಕಪ್ ತೆಂಗಿನಕಾಯಿ ತುರಿ, 1 ಚಮಚ ಜೀರಿಗೆ, 2 ಹಸಿಮೆಣಸು, 1/2 ಕಪ್ ಮೊಸರು, ಉಪ್ಪು 1 ಚಮಚ.

ಮಾಡುವ ವಿಧಾನ: ನೆಲ್ಲಿಕಾಯಿಗಳನ್ನು ಚೆನ್ನಾಗಿ ತೊಳೆಯಿರಿ ಮತ್ತು 100 ಗ್ರಾಂ ತಾಜಾ ನೆಲ್ಲಿಕಾಯಿಗಳನ್ನು ಕತ್ತರಿಸಿ, ಬೀಜಗಳನ್ನು ತೆಗೆದುಹಾಕಿ. ನಂತರ, ಮಿಕ್ಸರ್‌ನಲ್ಲಿ ನೆಲ್ಲಿಕಾಯಿ ತುಂಡುಗಳನ್ನು, ತೆಂಗಿನಕಾಯಿ ತುರಿ, ಜೀರಿಗೆ ಮತ್ತು ಹಸಿಮೆಣಸು ಸೇರಿಸಿ, ಚೆನ್ನಾಗಿ ರುಬ್ಬಿ. ಈ ರುಬ್ಬಿದ ಮಿಶ್ರಣಕ್ಕೆ ಮೊಸರು ಮತ್ತು ರುಚಿಗೆ ತಕ್ಕಂತೆ ಉಪ್ಪು ಸೇರಿಸಿ, ಸ್ವಲ್ಪ ನೀರನ್ನು ಹಾಕಿ. ಒಂದು ಪ್ಯಾನ್‌ನಲ್ಲಿ ಎಣ್ಣೆಯನ್ನು ಹಾಕಿ, ಅದರಲ್ಲಿ ಇಂಗು ಹಾಕಿ, ತಯಾರಾದ ತಂಬುಳಿಗೆ ಹಾಕಿ, ಚೆನ್ನಾಗಿ ಕಲಸಿ. ಈಗ, ನೆಲ್ಲಿಕಾಯಿ ತಂಬುಳಿ ಸವಿಯಲು ರೆಡಿ. ಇದನ್ನು ಚಪಾತಿ, ಅನ್ನದ ಜೊತೆಗೆ ಸೇವಿಸಬಹುದು.

ನೆಲ್ಲಿಕಾಯಿ ಚಟ್ನಿ: ಬೇಕಾಗುವ ಸಾಮಗ್ರಿಗಳು: 100 ಗ್ರಾಂ ತಾಜಾ ನೆಲ್ಲಿಕಾಯಿ, 1/4 ಕಪ್ ತೆಂಗಿನಕಾಯಿ ತುರಿ, 1 ಹಸಿಮೆಣಸು, 1 ಚಮಚ ಜೀರಿಗೆ, 1/2 ಚಮಚ ಉಪ್ಪು (ರುಚಿಗೆ ತಕ್ಕಂತೆ), 1 ಚಮಚ ತಾಳುಹುಳಿ (ಐಚ್ಛಿಕ), ಮತ್ತು 1 ಚಮಚ ಎಣ್ಣೆ.

ಮಾಡುವ ವಿಧಾನ: ತಾಜಾ ನೆಲ್ಲಿಕಾಯಿಯನ್ನು ಚೆನ್ನಾಗಿ ತೊಳೆದು, ಬೀಜಗಳನ್ನು ತೆಗೆದುಹಾಕಿ. ನೆಲ್ಲಿಕಾಯಿಯ ತುಂಡುಗಳನ್ನು ಸಣ್ಣದಾಗಿ ಕತ್ತರಿಸಿ. ತದನಂತರ, ಒಂದು ಪ್ಯಾನ್‌ನಲ್ಲಿ 1 ಚಮಚ ಎಣ್ಣೆಯನ್ನು ಹಾಕಿ, ಅದರಲ್ಲಿ ಜೀರಿಗೆ ಮತ್ತು ಹಸಿಮೆಣಸು ಹಾಕಿ, ಸ್ವಲ್ಪ ಹುರಿಯಿರಿ. ನಂತರ, ನೆಲ್ಲಿಕಾಯಿ ತುಂಡುಗಳನ್ನು ಮತ್ತು ತೆಂಗಿನಕಾಯಿ ತುರಿಯನ್ನು ಪ್ಯಾನ್‌ಗೆ ಸೇರಿಸಿ. ಈ ಮಿಶ್ರಣವನ್ನು 2–3 ನಿಮಿಷಗಳ ಕಾಲ ಹುರಿಯಿರಿ, ಎಲ್ಲಾ ಪದಾರ್ಥಗಳನ್ನು ಹುರಿದ ನಂತರ ಉಪ್ಪು ಹಾಕಿ ಚೆನ್ನಾಗಿ ಕಲಸಿ. ಈ ಮಿಶ್ರಣವನ್ನು ತಣ್ಣಗಾದ ನಂತರ ಮಿಕ್ಸರ್‌ನಲ್ಲಿ ಹಾಕಿ ಸಣ್ಣದಾಗಿ ರುಬ್ಬಿ, ನೀವು ಇಚ್ಛಿಸಿದ ಪ್ರಮಾಣದಲ್ಲಿ ನೀರು ಹಾಕಬಹುದು. ಆದರೆ ಚಟ್ನಿ ಗಟ್ಟಿಯಾಗಿದ್ದರೆ ಸವಿಸಲು ರುಚಿಯಾಗಿರುತ್ತದೆ. ಈ ರುಬ್ಬಿದ ಚಟ್ನಿ ಬಿಸಿ ಅನ್ನ, ಚಪಾತಿ ಅಥವಾ ಇತರೆ ಸ್ನಾಕ್ಸ್ ಜತೆಗೆ ಸವಿಯಲು ತಯಾರಿ.

ನೆಲ್ಲಿಕಾಯಿಯನ್ನು ಆಹಾರದಲ್ಲಿ ಸೇರಿಸುವುದರಿಂದ ಪೋಷಣಾತ್ಮಕ ಮೌಲ್ಯವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಇದು ವಿಟಮಿನ್ ಎ, ಆಂಟಿ ಆಕ್ಸಿಡೆಂಟ್‌ಗಳು ಮತ್ತು ಖನಿಜಗಳನ್ನು ಸಮೃದ್ಧವಾಗಿ ಹೊಂದಿದೆ. ಉಪ್ಪಿನಕಾಯಿ, ಚಟ್ನಿ, ತಂಬುಳಿ ಹೀಗೆ ಹಲವಾರು ಪಾಕವಿಧಾನಗಳಲ್ಲಿ ನೆಲ್ಲಿಕಾಯಿಯನ್ನು ಬಳಸುವುದರಿಂದ ರುಚಿ ಮತ್ತು ಆರೋಗ್ಯದ ಪರಿಪೂರ್ಣ ಸಂಯೋಜನೆಯನ್ನು ಪಡೆಯಬಹುದು. ಇದರಿಂದ ದೇಹದ ಪೋಷಣಾತ್ಮಕ ಅಗತ್ಯಗಳನ್ನು ಪೂರೈಸಲು ಸಹಾಯಕವಾಗುತ್ತದೆ.

ಪ್ರಶ್ನೋತ್ತರ ಅಂಕಣ

ರೈತರ ಪ್ರಶ್ನೆಗೆ ತಜ್ಞರ ಉತ್ತರ

✍ ಡಾ. ನಾಗರಾಜಪ್ಪ ಅಡಿವಪ್ಪರ್, ಪ್ರಾಧ್ಯಾಪಕರು (ತೋಟ) ಹಾಗೂ ಮುಖ್ಯಸ್ಥರು,
ಅಡಿಕೆ ಸಂಶೋಧನಾ ಕೇಂದ್ರ, ನವಿಲೆ, ಶಿವಮೊಗ್ಗ

ಪ್ರಶ್ನೆ: ಶುಂಠಿ ನಾಟಿಗೆ ಸೂಕ್ತ ಸಮಯ ಯಾವುದು? ಶ್ರೀ ರಮೇಶ ಎಂ., ಶಿಕಾರಿಪುರ

ಉತ್ತರ: ಶುಂಠಿ ನಾಟಿಗೆ ಸೂಕ್ತ ಸಮಯವೆಂದರೆ ಮಾರ್ಚ್ 15 ರಿಂದ ಏಪ್ರಿಲ್ 15 ರವರೆಗೆ. ಆದರೆ ಸಾಕಷ್ಟು ಬಿಸಿಲಿರುವುದರಿಂದ ಸರಿಯಾದ ನೀರಿನ ವ್ಯವಸ್ಥೆಯನ್ನು ಹಾಗೂ ಹೊದಿಕೆ ಕಲ್ಪಿಸಬೇಕು.

ಪ್ರಶ್ನೆ: ಅಡಿಕೆಯಲ್ಲಿ ರೂಗೋಸ್ ಸುರುಳಿಸುತ್ತುವ ನೊಣದ ನಿಯಂತ್ರಣದ ಬಗ್ಗೆ ತಿಳಿಸಿರಿ? ಶ್ರೀ ಉಮೇಶ್ ಬಿ. ಎಸ್., ಭದ್ರಾವತಿ

ಉತ್ತರ: ಕಾಂಡದ ಮೇಲೆ ಹಳದಿ ಅಂಟಿನ ಬಲೆಗಳ (ಟ್ರಾಪ್) ಅಳವಡಿಕೆ. ಎಲೆಗಳ ಮೇಲೆ ಶೇ. 1 ರಷ್ಟು ತಿಳಿಗಂಜಿಯನ್ನು (ಸ್ಟಾರ್ಚ್) ಸಿಂಪರಣೆ ಮಾಡುವುದರಿಂದ ಕಪ್ಪು ಶಿಲೀಂಧ್ರ ಉದುರಿ ಹೋಗುವುದು. ಅಜಾಡಿರಕ್ಟಿನ್ 10,000 ಪಿ.ಪಿ.ಎಮ್ 2 ಮಿ.ಲೀ ಕೀಟನಾಶಕವನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಪ್ರಶ್ನೆ: ಬಿಸಿಲಿನ ಶಾಖದಿಂದ ಅಡಿಕೆ ಕಾಂಡ ಬಿರಿಯುವುದಕ್ಕೆ ಪರಿಹಾರ ತಿಳಿಸಿ? ಶ್ರೀಯುತ ಚಂದ್ರಪ್ಪ, ಭದ್ರಾವತಿ

ಉತ್ತರ: ವೈಜ್ಞಾನಿಕ ವಿಧಾನಗಳಲ್ಲಿ ನಾಟಿ ಮಾಡುವುದು, ಅಡಿಕೆ ಅಥವಾ ಬಾಳೆ ಸೋಗೆಗಳನ್ನು ಕಾಂಡಗಳಿಗೆ ಸುತ್ತುವುದು ಹಾಗೂ ಮರಗಳಿಗೆ ಮೆಣಸಿನ ಬಳ್ಳಿಗಳನ್ನು ಹಬ್ಬಿಸುವುದು ಮತ್ತು ಕಾಂಡಗಳಿಗೆ ಸುಣ್ಣವನ್ನು ಬಳಿಯುವುದರಿಂದ ಕಾಂಡ ಬಿರಿಯುವಿಕೆಯನ್ನು ತಪ್ಪಿಸಬಹುದು.

ಪ್ರಶ್ನೆ: ಅಡಿಕೆಯ ಹಿಂಗಾರು ಒಣಗುವ ರೋಗ ಹಾಗೂ ಹಿಂಗಾರ ತಿನ್ನುವ ಹುಳದ ನಿಯಂತ್ರಣದ ಬಗ್ಗೆ ತಿಳಿಸಿ? ಶ್ರೀ ಉಮೇಶ್ ಕೆ.ಎಸ್., ಲಿಂಗಾಪುರ

ಉತ್ತರ: ರೋಗ ಮತ್ತು ಕೀಟದ ಬಾಧೆಗೆ ತುತ್ತಾದ ಒಣಗಿದ ಹಿಂಗಾರಗಳನ್ನು ತೆಗೆದು ನಾಶಪಡಿಸಬೇಕು ಇದರಿಂದ ರೋಗ ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬಹುದು. ಪ್ರತಿ ಲೀಟರ್ ನೀರಿನಲ್ಲಿ 2.5ಗ್ರಾಂ ಮ್ಯಾಂಕೋಜೆಬ್‌ನ್ನು (ಡೈಥೇನ್ ಎಂ–45 ಅಥವಾ ಇಂಡೋಫಿಲ್ ಎಂ–45) ಅಥವಾ 2 ಗ್ರಾಂ ಸಾಫ್ (ಮ್ಯಾಂಕೋಜೆಬ್ ಶೇ. 63 + ಕಾರ್ಬೆನ್‌ಡೈಜೀಮ್ ಶೇ. 12) + 2 ಮಿ. ಲೀ ಕ್ಲೋರೋಫೈರಿಫಾಸ್ 20 ಇ.ಸಿ ಅಥವಾಕ್ವಿನಾಲ್‌ಫಾಸ್ 25 ಇ.ಸಿ ಕೀಟನಾಶಕವನ್ನು ಪ್ರತಿ ಲೀ. ನೀರಿಗೆ ಬೆರೆಸಿ ಗೊಂಚಲು ಅರಳುವ ಸಮಯದಲ್ಲಿ ಹಾಗೂ 20–25 ದಿನಗಳ ಅಂತರದಲ್ಲಿ ಮತ್ತೊಂದು ಸಾರಿ ಸಿಂಪಡಿಸಬೇಕು. ಹಿಂಗಾರ ತಿನ್ನುವ ಹುಳುವಿಗೆ ಕೆಂಪು ಇರುವೆಗಳು ಅಥವಾ ಕೆಂಜಗಗಳು ಪರಭಕ್ಷಕ ಕೀಟ ಆಗಿರುವುದರಿಂದ ಸಂರಕ್ಷಿಸಿ, ಪ್ರೋತ್ಸಾಹಿಸಿದರೆ ಈ ಹುಳುವನ್ನು ಹತೋಟಿ ಮಾಡಬಹುದು.

ರೈತ ಬಾಂಧವರೇ, ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿಕೊಡಿ

editorucc@uahs.edu.in

ತಜ್ಞರು ಉತ್ತರಿಸುತ್ತಾರೆ

ಧಾರವಾಡದ ಕೃಷಿ ಮಹಾವಿದ್ಯಾಲಯಕ್ಕೆ ಅಮೃತ ಮಹೋತ್ಸವದ ಸಂಭ್ರಮ

✍ ಬಸವರಾಜ ಬೀರಣ್ಣವರ, 94486 09845 ಮತ್ತು ಮಲ್ಲಿಕಾರ್ಜುನ ಎಂ. ಸಿ, ವಿಶ್ವವಿದ್ಯಾಲಯ ಸಂವಹನ ಕೇಂದ್ರ, ಇರುವಕ್ಕಿ

ವಿದ್ಯಾಕಾಶಿ ಹಾಗೂ ಪೇಡಾನಗರಿ ಎಂದು ಪ್ರಸಿದ್ಧವಾಗಿರುವ ಧಾರವಾಡವು ಸಾಂಸ್ಕೃತಿಕ ನಗರವೆಂಬ ಹಿರಿಮೆಯುಳ್ಳದ್ದಾಗಿದೆ. ಇಂತಹ ಊರಿನಲ್ಲಿ ಜನವರಿ 16, 2025ರಂದು ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಸಂಭ್ರಮವೋ ಸಂಭ್ರಮ. ಕಾರಣ ಅಂದು ಮಹಾವಿದ್ಯಾಲಯದ ಎಲ್ಲಾ 75 ಬ್ಯಾಚಿನ ಹಳೆ ವಿದ್ಯಾರ್ಥಿಗಳು ಸೇರಿ, ಕೃಷಿ ಮಹಾವಿದ್ಯಾಲಯವು 75 ವರ್ಷವನ್ನು ಪೂರೈಸಿದ ಪ್ರಯುಕ್ತ ಅಮೃತ ಮಹೋತ್ಸವ ಆಚರಣೆಗಾಗಿ ಸೇರಿದ್ದರು. ಅಂದಿನ ಸಭಾ ಕಾರ್ಯಕ್ರಮದಲ್ಲಿ ಭಾರತದ ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ಜಗದೀಪ ಧನ್‌ಕರ್‌ರವರು ಪಾಲ್ಗೊಂಡು ಹಳೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅಧ್ಯಕ್ಷೀಯ ನುಡಿಗಳನ್ನಾಡಿದ್ದು ವಿಶೇಷ. ವಿಶ್ವವಿದ್ಯಾಲಯದ ಕುಲಾಧಿಪತಿಗಳು ಹಾಗೂ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಮಂತ್ರಿಗಳಾದ ಶ್ರೀ ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸಂತೋಷ ಎಸ್. ಲಾಡ್ ಹಾಗೂ ಇತರೆ ಗಣ್ಯರು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳಲ್ಲಿ ಸಾಧನೆಗೈದ ಕೆಲವರು ತಮ್ಮ ಸಾಧನೆಯ ಬಗ್ಗೆ ಹಾಗೂ ಮಹಾವಿದ್ಯಾಲಯದ ಒಡನಾಟದ ಬಗ್ಗೆ ಅನುಭವ ಹಂಚಿಕೊಂಡರು. ಎಲ್ಲಾ ಹಳೆಯ ವಿದ್ಯಾರ್ಥಿಗಳು ತಮ್ಮ ಹಳೆಯ ಸ್ನೇಹಿತರನ್ನು ಹಾಗೂ ಹಿರಿ–ಕಿರಿಯ ಅಂದಿನ ಸಹಪಾಠಿಗಳನ್ನು ಬಹಳ ವರ್ಷಗಳ ನಂತರ ಭೇಟಿಯಾದ ಸಂಭ್ರಮ. ತಮಗೆ ಶಿಕ್ಷಣ ಹಾಗೂ ಉದ್ಯೋಗ ಪಡೆಯಲು ಸಹಕಾರಿಯಾದ ಮಹಾವಿದ್ಯಾಲಯದ ಬಗ್ಗೆ ಹಾಗೂ ಅಂದು ತಮಗೆ ಪಾಠ ಮಾಡಿರುವ ಶಿಕ್ಷಕರನ್ನು ಗೌರವದಿಂದ ಸ್ಮರಿಸುವ ಅಪೂರ್ವ ಕ್ಷಣಕ್ಕೆ ಸಾಕ್ಷಿಯಾಯಿತು.

ಅಮೃತವನ: ಅಮೃತ ಮಹೋತ್ಸವ ಸವಿನೆನಪಿಗಾಗಿ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ಸುಮಾರು 3 ಎಕರೆ ಪ್ರದೇಶದಲ್ಲಿ ಅಮೃತವನವನ್ನು ಸುಮಾರು 75 ಜಾತಿಯ ಸಸಿಗಳನ್ನು ಪ್ರತಿ ಸಾಲಿನಲ್ಲಿ ಮೂರು ಸಸಿಗಳಂತೆ, 62 ಬ್ಯಾಚಿನ ಹಳೆಯ ವಿದ್ಯಾರ್ಥಿಗಳು ನೆಟ್ಟು ಅವುಗಳಿಗೆ ಹನಿ ನೀರಾವರಿ ವ್ಯವಸ್ಥೆ ಮಾಡಲಾಯಿತು. ಸದರಿ ಸಸ್ಯಗಳನ್ನು ನೀರುಣಿಸಿ ಬೆಳೆಸುವ ಜವಾಬ್ದಾರಿ ಹಿರಿಯ ಹಾಗೂ ಕಿರಿಯ ವಿದ್ಯಾರ್ಥಿಗಳ ಮೇಲಿರುತ್ತದೆ.

ಮಹಾವಿದ್ಯಾಲಯದ ಹಿನ್ನೆಲೆ: ಕೃಷಿ ಮಹಾವಿದ್ಯಾಲಯವು 1947ನೇ ಸಾಲಿನಲ್ಲಿ ದಿ. ಡಾ. ಎಂ. ಪಿ. ಪಾಟೀಲ್ ಇವರಿಂದ ಈಗಿನ ಧಾರವಾಡ ಕೃಷಿ ಸಂಶೋಧನಾ ಕೇಂದ್ರದಲ್ಲಿ (ಹೆಬ್ಬಳ್ಳಿ ಫಾರಂ) ಪ್ರಾರಂಭವಾಯಿತು. ಈ ಮಹಾವಿದ್ಯಾಲಯಕ್ಕೆ 2022ರವೇಳೆಗೆ ಇದು 75 ವರ್ಷ ಪೂರೈಸಿ ಇಂದು ಸುವರ್ಣ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ. ಅಂದು ಪ್ರಾರಂಭದಲ್ಲಿ 3 ವರ್ಷದ ಬಿ.ಎಸ್ಸಿ. ಕೃಷಿ ಕೋರ್ಸ್ ಪ್ರಾರಂಭವಾಗಿತ್ತು. ಇದಕ್ಕೆ ಅಂದಿನ ಬೆಳಗಾವಿಯ ನಾಯಕರಾದ ದಿ. ಡಾ. ಎಂ. ಪಿ. ಪಾಟೀಲರ ಪ್ರಯತ್ನವು ಹಾಗೂ ಮಹಾವಿದ್ಯಾಲಯದ ಪ್ರಥಮ ಪ್ರಾಂಶುಪಾಲರಾದ ದಿ. ಪ್ರೊ. ಹೆಚ್. ಎಂ. ದೇಸಾಯಿ ಇವರ ದೂರದೃಷ್ಟಿ ಹಾಗೂ ಶೈಕ್ಷಣಿಕ ಕಾಳಜಿಯಿಂದ ಮಹಾವಿದ್ಯಾಲಯ ಈ ಮಟ್ಟಕ್ಕೆ ಬೆಳೆಯಲು ಕಾರಣವಾಗಿದೆ. ಅಂದಿನ ಕೃಷಿ ಸಚಿವರಾದ ಎಂ.ಪಿ. ಪಾಟೀಲ್‌ರವರು 15ನೇ ಆಗಸ್ಟ್ 1948ರಂದು ಐತಿಹಾಸಿಕ ಕಲ್ಲಿನ ಕಟ್ಟಡ ಮತ್ತು ಗೋಪುರ ಹೊಂದಿರುವ ಮಹಾವಿದ್ಯಾಲಯದ ಶಂಕುಸ್ಥಾಪನೆ ನೆರವೇರಿಸಿದರು. ಇದರ ಉದ್ಘಾಟನೆಯು ಆಗಿನ ಮೈಸೂರು ರಾಜ್ಯದ ಮಹಾರಾಜರಾದ ಜಯ ಚಾಮರಾಜ ಒಡೆಯರ್ ಅವರಿಂದ 9 ಸೆಪ್ಟೆಂಬರ್ 1951 ರಂದು ನೆರವೇರಿಸಲಾಯಿತು.

ಪ್ರಸ್ತುತ ಕೃಷಿ ವಿಶ್ವವಿದ್ಯಾಲಯ, ಧಾರವಾಡ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಮಹಾವಿದ್ಯಾಲಯವು ಪ್ರತಿಷ್ಠಿತ ಮಹಾವಿದ್ಯಾಲಯವಾಗಿ ಹೊರಹೊಮ್ಮಿರುತ್ತದೆ. ಈ 75 ವರ್ಷಗಳ ಅವಧಿಯಲ್ಲಿ ಮಹಾವಿದ್ಯಾಲಯವು ಅನೇಕ ತಳಿಗಳನ್ನು ಹಾಗೂ ತಂತ್ರಜ್ಞಾನಗಳನ್ನು ರೈತರಿಗಾಗಿ ಬಿಡುಗಡೆಗೊಳಿಸಿದ್ದು, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದು ವಿಶೇಷವಾಗಿದೆ. ಈ ಮಹಾವಿದ್ಯಾಲಯವು ಲಕ್ಷಾಂತರ ಜನ ವಿದ್ಯಾರ್ಥಿಗಳಿಗೆ ಪದವಿಯನ್ನು ನೀಡಿ ಸಮಾಜದಲ್ಲಿ ವಿವಿಧ ಗೌರವವನ್ನು ಪಡೆಯಲು ಕಾರಣೀಭೂತವಾಗಿದೆ.

ಕರ್ನಾಟಕ ಏಕೀಕರಣದ ನಂತರ ಅಂದರೆ 1965ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಡಿಯಲ್ಲಿ ಈ ಮಹಾವಿದ್ಯಾಲಯವು ಸೇರ್ಪಡೆ ಆಗಿರುತ್ತದೆ. ಅನಂತರದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಂಡು ಇದೇ ಮಹಾವಿದ್ಯಾಲಯದ ಆವರಣದಲ್ಲಿ 1986ರಲ್ಲಿ ಕೃಷಿ ವಿಶ್ವವಿದ್ಯಾಲಯವಾಗಿ ಅಸ್ತಿತ್ವ ಪಡೆದುಕೊಂಡಿತು. ಅಂದಿನಿಂದಲೂ ಈ ಮಹಾವಿದ್ಯಾಲಯವು ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಮಹತ್ವದ ಮೈಲುಗಲ್ಲನ್ನು ಸಾಧಿಸಲು ಕಾರಣೀಭೂತ ವಾಯಿತು. ಆಗಿನ ಮೊದಲ ಶಿಕ್ಷಣ ನಿರ್ದೇಶಕರಾದ ಡಾ. ಎಸ್. ಡಬ್ಲ್ಯೂ. ಮೆಣಸಿನಕಾಯಿ ಅವರಂತಹ ದಿಗ್ಗಜರ ನಾಯಕತ್ವವು ಸುಮಾರು 2 ದಶಕಗಳ ಕಾಲ ಮಹಾವಿದ್ಯಾಲಯದ ಶೈಕ್ಷಣಿಕ ಉನ್ನತ ಗುಣಮಟ್ಟದಿಂದಾಗಿ ವಿದೇಶಿ ವಿದ್ಯಾರ್ಥಿಗಳನ್ನು ಆಕರ್ಷಿಸುವಂತಹ ಮಟ್ಟಕ್ಕೆ ಬೆಳೆಯಿತು. ಈ ಮಹಾವಿದ್ಯಾಲಯವು ಒಂದು ಸಂಸ್ಥೆಯಾಗಿ ಪ್ರಾರಂಭವಾಗಿ ಇಂದು ಹಲವಾರು ಸಂಶೋಧನಾ ಯೋಜನೆಗಳು, ಕೃಷಿ ವಿಜ್ಞಾನ ಕೇಂದ್ರಗಳು, ಸಮುದಾಯ ವಿಜ್ಞಾನ ಮಹಾವಿದ್ಯಾಲಯ ಹೀಗೆ ಹಲವಾರು ಅಂಗ ಸಂಸ್ಥೆಗಳ ಸಂಕೀರ್ಣವಾಗಿ ಉತ್ತರ ಕರ್ನಾಟಕದ 7 ಜಿಲ್ಲೆಗಳ ರೈತರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಹಾಗೂ ರಾಷ್ಟ್ರೀಯ ಆಹಾರ ಭದ್ರತೆಗೆ ಗಮನಾರ್ಹ ಕೊಡುಗೆಯನ್ನು ನೀಡಿದೆ. ಕೃಷಿ ಸಂಶೋಧನೆ ಮತ್ತು ವಿಸ್ತರಣೆಗೆ ಮಹಾವಿದ್ಯಾಲಯದ ಕೊಡುಗೆ ಅಪಾರವಿದೆ. ಐಸಿಎಆರ್ ಮತ್ತು ಇಕ್ರಿಸ್ಯಾಟ್‌ನಂತರ ಸಂಸ್ಥೆಯೊಂದಿಗೆ ಒಡಂಬಡಿಕೆ ಮತ್ತು ಸಹಯೋಗ ವೃದ್ಧಿಸಿ ವೈವಿಧ್ಯಮಯ ಕೃಷಿ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ್ದು, ದೇಶದ ಅತ್ಯುತ್ತಮ ವಿಜ್ಞಾನಿಗಳನ್ನು ಮತ್ತು ಪದವೀಧರರನ್ನು ನಿರಂತರವಾಗಿ ನೀಡುತ್ತಾ ಬಂದಿರುತ್ತದೆ. ಜಾಗತಿಕವಾಗಿ ಗುರುತಿಸಿಕೊಂಡಿರುವ ಕೃಷಿ ಮೇಳದಲ್ಲಿ ಕೃಷಿ ಮಹಾವಿದ್ಯಾಲಯದ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಕೊಡುಗೆ ಅಪಾರ. ಉತ್ತರ ಕರ್ನಾಟಕ ಭಾಗದ ರೈತರ ಆಶಾಕಿರಣವಾಗಿರುವ ಈ ಮಹಾವಿದ್ಯಾಲಯವು ಜನಮಾನಸದಲ್ಲಿ ಸ್ಥಿರಸ್ಥಾಯಿಯಾಗಿದೆ ಎಂದರೆ ಅತಿಶಯೋಕ್ತಿಯೆನಿಸುವುದಿಲ್ಲ.

ಅಮೃತವನದಲ್ಲಿ ಸಸಿ ನೆಟ್ಟ ಹಳೆಯ ವಿದ್ಯಾರ್ಥಿಗಳು

ಒಂದೆಲಗ: ಮೂಲವೊಂದು ಉಪಯೋಗ ಹಲವು

✍ ಸುಷ್ಮ ಎನ್., 6363647463, ರವಿ ಸಿ. ಎಸ್., ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ

ಒಂದೆಲಗ ಎಂದು ಕರೆಯಲಾಗುವ ಸೆಂಟೆಲ್ಲಾ ಏಷಿಯಾಟಿಕಾ ಉಪಉಷ್ಣವಲಯದಲ್ಲಿ ಕಂಡುಬರುವ ಔಷಧೀಯ ಸಸ್ಯವಾಗಿದೆ. ಹದಿನೆಂಟು ವರ್ಣತಂತುಗಳನ್ನು ಹೊಂದಿ ಎಪಿಯೇಸಿಯೆ ಕುಟುಂಬಕ್ಕೆ ಸೇರಿಕೊಂಡಿದೆ. ಈ ಔಷಧೀಯ ಸಸ್ಯವು ಮೂಲತಃ ಆಗ್ನೇಯ ಏಷ್ಯಾದ ಭಾಗಗಳಾದ ಚೀನಾ, ಭಾರತ, ಶ್ರೀಲಂಕಾ ಮತ್ತು ಮಲೇಷಿಯಾಗಳಲ್ಲಿ ಬೆಳೆಯಲಾಗುತ್ತಿದೆ.

ಸೆಂಟೆಲ್ಲಾ ನೆಲದ ಮೇಲೆ ಬಳ್ಳಿಯಂತೆ ಹಬ್ಬಿಕೊಳ್ಳುವ ದೀರ್ಘಕಾಲಿಕ ಸಸ್ಯವಾಗಿದ್ದು, ಗೆಣ್ಣುಗಳಲ್ಲಿ ಬೇರು ಬಿಡುವುದರ ಮೂಲಕ ಸಂತಾನವನ್ನು ಹೆಚ್ಚು ಮಾಡಿಕೊಳ್ಳುತ್ತದೆ. ಸಸ್ಯದ ಎಲ್ಲಾ ಭಾಗಗಳು ಆರೋಗ್ಯ ರಕ್ಷಕ ಮತ್ತು ಔಷಧೀಯ ಗುಣಗಳನ್ನು ಹೊಂದಿದೆ. ಈ ಸಸ್ಯವನ್ನು ಪ್ರಾಚೀನ ಕಾಲದಿಂದಲೂ ಔಷಧೀಯ ಮೂಲಿಕೆ ಹಾಗೂ ಹಸಿರೆಲೆ ಸೊಪ್ಪಾಗಿ ಬಳಸುವ ವಾಡಿಕೆಯಿದೆ. ಸಸ್ಯದಲ್ಲಿನ ಮ್ಯಾಡಕ್ಯಾಸೋಸೈಡ್, ಏಷಿಯಾಟಿಕೋಸೈಡ್, ಮ್ಯಾಡಕ್ಯಾಸಿಕ್ ಆಮ್ಲ ಮತ್ತು ಏಷಿಯಾಟಿಕ್ ಆಮ್ಲ ಎಂಬ ಟ್ರೈಟರ್ಪಿನಾಯ್ಡ್ ಅಂಶವು ಸಸ್ಯದ ಔಷಧೀಯ ಗುಣಗಳಿಗೆ ಕಾರಣವಾಗಿದೆ. ಒಂದೆಲಗವು ಒಳ್ಳೆಯ ಪ್ರಮಾಣದ ಖನಿಜಗಳು, ವಿಟಮಿನ್‌ಗಳು, ಆಕ್ಸಲೇಟ್ಸ್ ಮತ್ತು ಉತ್ಕರ್ಷಣ ನಿರೋಧಕ ಅಂಶಗಳನ್ನು ಕೂಡ ಹೊಂದಿದೆ.

ಒಂದೆಲಗದ ಪ್ರಮುಖ ಪೋಷಕಾಂಶಗಳು ಮತ್ತು ಅದರ ಉಪಯೋಗಗಳು

ಪೋಷಕಾಂಶಗಳು: ಪೋಷಕಾಂಶಗಳಿಗೆ ಸಂಬಂಧಪಟ್ಟಂತೆ ತಾಜಾ ಗಿಡಮೂಲಿಕೆಯು ಕಡಿಮೆ ಪ್ರಮಾಣದ ಸಸಾರಜನಕ, ಪಿಷ್ಟಗಳನ್ನು ಹೊಂದಿದ್ದರೂ, ಅಧಿಕ ಪ್ರಮಾಣದ ಕಚ್ಚಾನಾರು ಮತ್ತು ತೇವಾಂಶದ ಮೂಲವಾಗಿದೆ. ಹೆಚ್ಚು ಕಚ್ಚಾನಾರಿನಂಶವಿರುವ ಕಾರಣ ಇದು ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು, ಪಾರ್ಶ್ವವಾಯು, ಅಧಿಕ ರಕ್ತದೊತ್ತಡ, ಮಧುಮೇಹ, ಬೊಜ್ಜು ಹಾಗೂ ಜೀರ್ಣಾಂಗವ್ಯೂಹಕ್ಕೆ ಸಂಬಂಧಪಟ್ಟ ಕಾಯಿಲೆಗಳನ್ನು ನಿವಾರಿಸುತ್ತದೆ. ತಾಜಾ ಮತ್ತು ಒಣ ಗಿಡ ಮೂಲಿಕೆಯ ಪೋಷಕಾಂಶಗಳು ಈ ಕೆಳಗಿನಂತಿದೆ.

ನಿಯತಾಂಕಗಳು	ತಾಜಾ	ಒಣ
ತೇವಾಂಶ (ಗ್ರಾಂ/100 ಗ್ರಾಂ)	86.05	5.55
ಸಸಾರಜನಕ (ಗ್ರಾಂ/100 ಗ್ರಾಂ)	2.36	12.26
ಬೂದಿ (ಗ್ರಾಂ/100 ಗ್ರಾಂ)	2.04	12.98
ಕೊಬ್ಬು (ಗ್ರಾಂ/100 ಗ್ರಾಂ)	0.33	1.35
ಕಚ್ಚಾ ನಾರು (ಗ್ರಾಂ/100 ಗ್ರಾಂ)	2.91	17.55
ಪಿಷ್ಟ (ಗ್ರಾಂ/100 ಗ್ರಾಂ)	6.31	49.30
ಶಕ್ತಿ (ಕಿಲೋ ಕ್ಯಾಲೋರಿ/ 100 ಗ್ರಾಂ)	37.65	273.10

ಖನಿಜಾಂಶಗಳು: ಒಂದೆಲಗವು ಹೆಚ್ಚಿನ ಪ್ರಮಾಣದ ಪೊಟಾಸಿಯಮ್ ಮತ್ತು ಕ್ಯಾಲ್ಸಿಯಂ ಅನ್ನು ಹೊಂದಿದೆ. ಪೊಟಾಸಿಯಮ್ ಸೇವನೆಯು ಪಾರ್ಶ್ವವಾಯು, ಮೂತ್ರಪಿಂಡದ ಕಲ್ಲುಗಳು ಮತ್ತು ಹೃದಯ ಸಂಬಂಧಿ ಸಮಸ್ಯೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಬಾಲ್ಯ ಮತ್ತು ಹದಿಹರೆಯದ ಅವಧಿಯಲ್ಲಿ ಸಾಕಷ್ಟು ಕ್ಯಾಲ್ಸಿಯಂ ಸೇವನೆಯು ಪ್ರೌಢಾವಸ್ಥೆಯಲ್ಲಿ ಗರಿಷ್ಠ ಮೂಳೆ ದ್ರವ್ಯರಾಶಿಯನ್ನು ಸಾಧಿಸಲು ಅಗತ್ಯವಾಗಿರುತ್ತದೆ. ಹಾಗಾಗಿ ಸೆಂಟೆಲ್ಲಾ ಏಷಿಯಾಟಿಕವನ್ನು ಪೊಟಾಸಿಯಮ್ ಮತ್ತು ಕ್ಯಾಲ್ಸಿಯಂನ ಅಗ್ಗದ ಪೌಷ್ಟಿಕಾಂಶ ಮೂಲವಾಗಿ ಬಳಸಬಹುದು. ರಂಜಕವು DNA ಸಂಶ್ಲೇಷಣೆಗೆ ಹಾಗೂ ಮೂಳೆಗಳ ಮತ್ತು ಹಲ್ಲುಗಳ ರಚನೆಗೆ ಅತ್ಯಗತ್ಯ ಅಂಶವಾಗಿದೆ. ಕಬ್ಬಿಣವು ಹಿಮೋಗ್ಲೋಬಿನ್‌ನ ಒಂದು ಮುಖ್ಯ ಅಂಶವಾದರೆ, ಸತುವು DNA ಸಂಶ್ಲೇಷಣೆ, ಕೋಶ ವಿಭಜನೆ ಮತ್ತು ಉತ್ತಮ ಪ್ರತಿರೋಧಕ ವ್ಯವಸ್ಥೆಯ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸೆಂಟೆಲ್ಲಾ ಏಷಿಯಾಟಿಕವು ಈ ಖನಿಜಗಳು ಕೂಡ ಗಮನಾರ್ಹ ಪ್ರಮಾಣದಲ್ಲಿದೆ.

ಒಂದೆಲಗವು ವಿಟಮಿನ್ ಸಿ, ಬಿ1, ಬಿ2, ನಿಯಾಸಿನ್, ವಿಟಮಿನ್ ಎ ಇತ್ಯಾದಿಗಳಿಂದ ಸಮೃದ್ಧವಾಗಿದ್ದು, ಇದು ಅಂಗಾಂಶಗಳ ಬೆಳವಣಿಗೆ ಮತ್ತು ದುರಸ್ತಿ ಸರಿಪಡಿಕೆ, ಹೃದಯ ರಕ್ತನಾಳದ ಆರೋಗ್ಯ ಮತ್ತು ಕಣ್ಣಿನ ರಕ್ಷಣೆಗೆ ಅವಶ್ಯಕವಾಗಿದೆ. ಮೂಲಿಕೆಯು ಫೈಟೋಕೆಮಿಕಲ್ಸ್‌ಗಳಾದ ಕ್ಯಾರೋಟಿನಾಯ್ಡುಗಳು, ಫಿನಾಲಿಕ್ ಸಂಯುಕ್ತಗಳಾದ ಫಾಲಿಫಿನಾಲ್‌ಗಳು, ಫ್ಲೇವನಾಯ್ಡುಗಳು, ಆಂಥೋಸಯಾನಿನ್ ಮತ್ತು ಟ್ಯಾನಿನ್‌ಗಳನ್ನು ಒಳಗೊಂಡಿದೆ. ಕೆಲವು ಕ್ಯಾರೋಟಿನಾಯ್ಡುಗಳು ವಿಟಮಿನ್ ಎ ಆಗಿ ಬದಲಾಗಿ ಪ್ರಬಲವಾದ ಉತ್ಕರ್ಷಣ ನಿರೋಧಕಗಳಾಗುತ್ತವೆ. ಇದು ಕೆಲವು ರೀತಿಯ ಕ್ಯಾನ್ಸರ್, ಹೃದ್ರೋಗವನ್ನು ತಡೆಯಲು ಸಹಾಯ ಮಾಡುವುದಲ್ಲದೆ ದೇಹದಲ್ಲಿ ಸೋಂಕುಗಳಿಗೆ ಪ್ರತಿರೋಧಕ ಶಕ್ತಿಯನ್ನು ಸಹ ಹೆಚ್ಚಿಸುತ್ತದೆ.

ಮೆದುಳಿನ ಆರೈಕೆ: ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಒಂದೆಲಗವು "ಮೆದುಳಿನ ಟಾನಿಕ್" ಆಗಿ ಹೆಚ್ಚು ಜನಪ್ರಿಯವಾಗಿದೆ. ಇದರ ವಿಶಿಷ್ಟ ರಾಸಾಯನಿಕ ಅಂಶಗಳು ಮೆದುಳಿನ ಶಕ್ತಿಗೆ ಸಂಬಂಧಿಸಿದ ಜೀವಕೋಶಗಳಿಗೆ ಆಧಾರವಾಗಿರುವುದರಿಂದ ಇದನ್ನು ಮೆದುಳಿನ ಆಹಾರ ಎಂತಲೂ ಕರೆಯುತ್ತಾರೆ. ಒಂದೆಲಗವು ಸಾಂಪ್ರದಾಯಿಕವಾಗಿ

ಬುದ್ಧಿಶಕ್ತಿ ವರ್ಧಕವಾಗಿ ಹಾಗೂ ನರಗಳ ಮತ್ತು ಮೆದುಳಿನ ಕೋಶಗಳನ್ನು ಪುನರುಜ್ಜೀವನಗೊಳಿಸುವ ಸಾಮರ್ಥ್ಯಕ್ಕಾಗಿ ಗುರುತಿಸಲ್ಪಟ್ಟಿದ್ದು, ಈ ಗುಣ ಲಕ್ಷಣಗಳ ಕಾರಣವಾಗಿ ಇದನ್ನು ವೃದ್ಧರಲ್ಲಿ ಸಾಮಾನ್ಯವಾಗಿ ಕಂಡುಬರುವ ಆಲ್ಝೈಮರ್ಸ್, ಬುದ್ಧಿಮಾಂದ್ಯತೆ, ಪಾರ್ಕಿನ್ಸನ್‌ಗಳಂತ ಕಾಯಿಲೆಗಳನ್ನು ಗುಣಪಡಿಸಲು ಬಳಸುತ್ತಾರೆ. ಮೆದುಳಿಗೆ ಸಂಬಂಧಪಟ್ಟ ಕಾಯಿಲೆಗಳನ್ನು ನಿವಾರಿಸಲು ಹಲವು ಪ್ರತಿಕೂಲ ಪರಿಣಾಮಗಳನ್ನು ಬೀರುವಂತ ಕೃತಕ ಔಷಧಿಗಳೇ ಇರುವ ಈ ಪ್ರಸ್ತುತ ಸಮಯದಲ್ಲಿ ಸೆಂಟೆಲ್ಲಾ ಏಷಿಯಾಟಿಕವು ಉತ್ತಮ ಪರ್ಯಾಯವಾಗುವುದರಲ್ಲಿ ಸಂಶಯವಿಲ್ಲ.

ತ್ವಚೆಯ ಆರೈಕೆ

ಒಂದೆಲಗವನ್ನು ತ್ವಚೆ ಆರೈಕೆಯ ಮುಂತಾದ ಸಿದ್ಧತೆಗಳಲ್ಲಿ ಸಕ್ರಿಯ ಸಂಯುಕ್ತವಾಗಿ ಬಳಸಲಾಗುತ್ತದೆ. ಇದಕ್ಕೆ ಕಾರಣಗಳು ಸೆಂಟೆಲ್ಲಾದ ಉತ್ಕರ್ಷಣ ನಿರೋಧಕಗಳು (Antioxidant), ವಿರೋಧಿ ಉರಿಯೂತಗಳು (Anti-inflammatory), ಆಂಟಿ ಏಜೆಂಟ್ ಗುಣ ಲಕ್ಷಣಗಳನ್ನು ಒಳಗೊಂಡಿದೆ. ಇದು ತ್ವಚೆಯಲ್ಲಿ ಕೊಲ್ಲಾಜನ್ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ತ್ವಚೆಗೆ ರಕ್ತಚಲನೆಯನ್ನು ಹೆಚ್ಚಿಸಿ, ಸುಕ್ಕುಗಟ್ಟುವುದನ್ನು ಕಡಿಮೆ ಮಾಡುವುದಲ್ಲದೆ, ತ್ವಚೆಯ ಆರೋಗ್ಯವನ್ನು ಸಹ ಕಾಪಾಡುತ್ತದೆ.

ಕೂದಲ ಆರೈಕೆ

ಒಂದೆಲಗ ಸಸ್ಯದ ಸಾರವು ಕೂದಲಿನ ಕಿರು ಚೀಲಗಳನ್ನು ಹಿಗ್ಗಿಸುವ ಮೂಲಕ ಕೂದಲು ಉದುರುವಿಕೆಗೆ ಕಾರಣ ವಾಗುವ 5α–ರಿಡಕ್ಟೇಸ್‌ನ ಚಟುವಟಿಕೆಯನ್ನು ಪ್ರತಿಬಂಧಿಸುವ ಮೂಲಕ ಕೂದಲಿನ ಬೆಳವಣಿಗೆಗೆ ಪ್ರಯೋಜನಕಾರಿಯಾಗಿದೆ. ಎಂದು ತಿಳಿದು ಬಂದಿದೆ. ಅಲೊವೆರಾ, ಭೃಂಗರಾಜ, ಅರಿಶಿನದಂತಹ ಔಷಧೀಯ ಸಸ್ಯಗಳ ಸಂಯೋಜನೆಯೊಂದಿಗೆ ಒಂದೆಲಗವು ಕೂದಲಿನ ಬೆಳವಣಿಗೆಯನ್ನು ಹೆಚ್ಚಿಸುತ್ತದೆ ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ. ತಾಜಾ ತರಕಾರಿಯಾಗಿ ಮಾತ್ರವಲ್ಲದೇ ಇದನ್ನು ಸೂಪಿನ ರೂಪದಲ್ಲಿ ಅಥವಾ ಮುಖ್ಯ ತರಕಾರಿಯಾಗಿ ಸಹ ಬೇಯಿಸಿ ತಿನ್ನಬಹುದು. ಸ್ವಲ್ಪ ಕಹಿ ಅಂಶ ಇರುವುದರ ಕಾರಣ ಈ ಸೊಪ್ಪನ್ನು ತೆಂಗಿನ ತುರಿ ಅಥವಾ ತೆಂಗಿನ ಹಾಲಿನೊಂದಿಗೆ ಬೇಯಿಸಿ ಸೇವಿಸುವುದು ರೂಢಿಯಲ್ಲಿದೆ.

ಒಂದೆಲಗದ ಔಷಧೀಯ ಗುಣಗಳಿಂದಾಗಿ ಎಲೆಗಳು, ಕಾಂಡ ಮತ್ತು ಬೇರು ಸೇರಿದಂತೆ ಇಡೀ ಸಸ್ಯವನ್ನು ಸೇವಿಸಬಹುದು. ಇದನ್ನು ಆರೋಗ್ಯವರ್ಧಕ ಟಾನಿಕ್ ಹಾಗೂ ಸಂಸ್ಕರಿಸಿದ ಪಾನೀಯವಾಗಿ ಬಳಸಲಾಗುತಿದ್ದು ಮಾರುಕಟ್ಟೆಗಳಲ್ಲಿ ಒಂದೆಲಗದ ಸಿದ್ಧ ಜ್ಯೂಸ್‌ಗಳು ಲಭ್ಯವಿದೆ.

ಸೆಂಟೆಲ್ಲಾ ಟೀ: ಸೆಂಟೆಲ್ಲಾ ಚಹಾವನ್ನು ಒಣಗಿದ ಅಥವಾ ತಾಜಾ ಗಿಡಮೂಲಿಕೆಯ ಪುಡಿಗೆ ಒಂದು ಕಪ್ ಕುದಿಸಿದ ನೀರನ್ನು ಸೇರಿಸುವ ಮೂಲಕ ತಯಾರಿಸಲಾಗುತ್ತದೆ. ಚಹಾವನ್ನು ಕುದಿಸುವಾಗ ವಿವಿಧ ಬೇರೆ ಗಿಡಮೂಲಿಕೆಗಳ ಮಿಶ್ರಣವನ್ನೂ ಸಹ ಬಳಸಬಹುದು. ಸೆಂಟೆಲ್ಲಾ ಚಹಾವು ಅನೇಕ ಪ್ರಯೋಜನಕಾರಿ ಪರಿಣಾಮಗಳೊಂದಿಗೆ ಉತ್ಕರ್ಷಣ ನಿರೋಧಕಗಳ ಮೂಲವಾಗಿದೆ.

ಪುಟ 14 ರಿಂದ . . .

ಕೆರೆಗಳಲ್ಲಿ ಮೀನು ಸಾಕಣೆ

ಪ್ರತಿ ದಿನ 2 ಕಿ.ಗ್ರಾಂ ನಂತೆ ಆಹಾರವನ್ನು ಕೊಡಬೇಕು. ಉತ್ತಮ ಬೆಳವಣಿಗೆಗೆ ಪ್ರತಿ ತಿಂಗಳು 1 ಕಿ.ಗ್ರಾಂ ನಂತೆ ಆಹಾರದ ಪ್ರಮಾಣವನ್ನು ಹೆಚ್ಚಿಸಬಹುದು.

ಮೀನುಗಳ ಬೆಳವಣಿಗೆ ಮತ್ತು ಮೀನು ಹಿಡಿಯುವುದು: ಕೆರೆಯಲ್ಲಿ ಸುಮಾರು 8 ರಿಂದ 10 ತಿಂಗಳು ಪಾಲನೆ ಮಾಡಿದ ಮೀನುಗಳು 0.6 – 0.75 ಕಿ.ಗ್ರಾಂ ನಿಂದ 1–1.25 ಕಿ.ಗ್ರಾಂ ವರೆಗೂ ಬೆಳೆಯಬಲ್ಲವು. ಬೇಸಿಗೆ ಕಾಲದಲ್ಲಿ ಕೆರೆಯಲ್ಲಿ ನೀರಿನ ಪ್ರಮಾಣ ಇಳಿಮುಖವಾಗುತ್ತಿರುವಾಗ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಮೀನುಗಳನ್ನು ಹಿಡಿದು ಮಾರಾಟ ಮಾಡುವುದು ಸೂಕ್ತ. ಎಳೆ ಬಲೆ, ಬಿಡು ಬಲೆ ಹಾಗೂ ಬೀಸು ಬಲೆಗಳನ್ನು ಉಪಯೋಗಿಸಿ ಮೀನುಗಳನ್ನು ಹಿಡಿಯಬಹುದು. ಮೀನುಗಳ ಗುಣಮಟ್ಟ ಕೆಡದಂತೆ ವಿವಿಧ ಸಂಸ್ಕರಣಾ ವಿಧಾನಗಳಲ್ಲಿ ಸಂರಕ್ಷಿಸಿ ತಾಜಾತನದೊಂದಿಗೆ ಮಾರುಕಟ್ಟೆಗಳಿಗೆ ರವಾನಿಸುವುದು ಯೋಗ್ಯಕರ ಹಾಗೂ ಉತ್ತಮ ಬೆಲೆಗೆ ಮಾರಾಟವಾಗುತ್ತವೆ. ಗೊಬ್ಬರ ಆಧಾರಿತ ಮೀನು ಸಾಕಣೆಯಲ್ಲಿ ಉತ್ಪಾದನೆ ಕಡಿಮೆ (ಪ್ರತಿ ಎಕರೆಗೆ 400–600 ಕಿ.ಗ್ರಾಂ) ಮಾಡಬಹುದು. ಕೆರೆಯಲ್ಲಿ ಮೀನು 200–300 ಗ್ರಾಂ ತೂಕದಷ್ಟು ಬೆಳೆದ ನಂತರ ಕಾವಲು ವ್ಯವಸ್ಥೆ ಮಾಡಬೇಕಾಗುತ್ತದೆ. ಗೊಬ್ಬರ ಮತ್ತು ಆಹಾರವನ್ನು ನೀಡಿದ ಕೆರೆಗಳಲ್ಲಿ ಪ್ರತಿ ಎಕರೆಗೆ 800–1000 ಕಿ.ಗ್ರಾಂ ಮೀನು ಉತ್ಪನ್ನ ಪಡೆಯಬಹುದಾಗಿದೆ.

ಪುಟ 15 ರಿಂದ . . .

ವಿಶ್ವವಿದ್ಯಾಲಯ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು

ಅವಶ್ಯವಿರುವ ಯೋಜನಾ ವರದಿ, ಸಾಲ ಸೌಲಭ್ಯಗಳು, ಬ್ರ್ಯಾಂಡಿಂಗ್ ಮತ್ತು ಲೈಸೆನ್ಸಿಂಗ್ ಸೌಲಭ್ಯಗಳ ಒಟ್ಟಿಗೆ ಉದ್ದಿಮೆದಾರರಿಗೆ ಅಗತ್ಯವಿರುವ ಸ್ಥಳ, ಗುಣಮಟ್ಟವನ್ನು ಕಾಯ್ದುಕೊಳ್ಳುವ ಯಂತ್ರೋಪಕರಣಗಳು ಮತ್ತು ಮಾರುಕಟ್ಟೆ ತಂತ್ರಗಳು ಇತ್ಯಾದಿಗಳ ತರಬೇತಿ ನೀಡಲಾಗುತ್ತಿದೆ. ಇದರಿಂದ ಹೆಚ್ಚು ಬಂಡವಾಳದ ಅವಶ್ಯಕತೆಯಿಲ್ಲದೆ ಕಡಿಮೆ ಖರ್ಚಿನಲ್ಲಿ ಹೊಸ ಉದ್ದಿಮೆಯನ್ನು ಸ್ಥಾಪಿಸುವಲ್ಲಿ ಸಂಪೂರ್ಣವಾಗಿ ನೆರವಾಗುತ್ತದೆ.

ವಿಶ್ವವಿದ್ಯಾಲಯದಡಿಯಲ್ಲಿ 2024–25ನೇ ಸಾಲಿನಲ್ಲಿ ಲಭ್ಯವಿರುವ ಶುಲ್ಕ ಸಹಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು: ಬೇಕರಿ ಹಾಗೂ ಕನ್ಫೆಕ್ಷನರೀಸ್, ಹೈ–ಟೆಕ್ ಅಣಬೆ ಬೇಸಾಯ, ಜೇನು ಸಾಕಣೆ, ಮೀನು ಸಾಕಣೆ, ಸಾವಯವ ಗೊಬ್ಬರಗಳ ತಯಾರಿಕೆ, ಜೈವಿಕ ಗೊಬ್ಬರಗಳ ತಯಾರಿಕೆ, ಸಮಗ್ರ ಜಾನುವಾರುಗಳ ನಿರ್ವಹಣಾ ಕ್ರಮಗಳು, ನರ್ಸರಿ ತಂತ್ರಜ್ಞಾನಗಳು ಮತ್ತು ತೋಟಗಾರಿಕಾ ಸಸ್ಯಗಳ ಉತ್ಪಾದನೆ, ಪುಷ್ಪ ಕೃಷಿ, ಸಮಗ್ರ ಕೃಷಿ ಪದ್ಧತಿ ಇತ್ಯಾದಿ ವಿಷಯಗಳಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಜಿಲ್ಲೆಗಳಲ್ಲಿ (ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ದಾವಣಗೆರೆ, ಕೊಡಗು) ಪ್ರಾರಂಭಿಸುವ ಯೋಜನೆಯನ್ನು ಕೈಗೊಳ್ಳಲಾಗಿದೆ. ಈ7 ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಘಟಕಗಳಲ್ಲಿ ತರಬೇತಿ ನೀಡಲಾಗುತ್ತದೆ. ಆದ್ದರಿಂದ, ಆಸಕ್ತ ರೈತರು/ರೈತ ಮಹಿಳೆಯರು/ ನಿರುದ್ಯೋಗಿಗಳು ಈ ರೀತಿಯ ತರಬೇತಿ ಕಾರ್ಯಕ್ರಮಗಳಿಗೆ ನೋಂದಣಿ ಮಾಡಿ ಇದರಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

ಜೇನು ಹುಳು ಹಾಗೂ ಜೇನು ಮೇಣ ಭಕ್ಷಕ ಹಕ್ಕಿಗಳು

✍ ಎಂ. ಮಂಜುನಾಥ, 9448183068, ಕೀಟಶಾಸ್ತ್ರ ಪ್ರಾಧ್ಯಾಪಕರು (ನಿವೃತ್ತ), ಗೌರಿಕೊಪ್ಪಲು, ಹಾಸನ

ಜೇನು ಗೂಡಿನ ವೈರಿಗಳಲ್ಲಿ ಹಲ್ಲಿ, ಕಪ್ಪೆ, ಕಣಜಗಳು, ನುಸಿಗಳು, ಜೇಡಗಳು, ರೋಗಗಳು, ಪ್ರಾಣಿಗಳಾದ ಮುಂಗುಸಿ, ಕರಡಿ, ಮತ್ತು ಕೆಲವು ಪಕ್ಷಿಗಳು. ಪಕ್ಷಿಗಳಲ್ಲಿ ಪ್ರಮುಖವಾದುವುಗಳಲ್ಲಿ ಜೇನು ಕುಟುರಗಳು, ಜೇನು ಮಗರೆ ಹಾಗೂ ಜೇನು ಮೇಣ ಭಕ್ಷಕಗಳು.

ಜೇನು ಹುಳು ಹಾಗೂ ಮೇಣ ಭಕ್ಷಕ ಗಳ ಬಗ್ಗೆ ನಾಡು ಕಂಡ ರೋಚಕ ಬರಹಗಾರ ಪೂರ್ಣಚಂದ್ರ ತೇಜಸ್ವಿ ತಮ್ಮ ಕೃತಿ "ಕನ್ನಡನಾಡಿನ ಹಕ್ಕಿಗಳು(1) ಮಿಂಚುಳ್ಳಿ" ಯಲ್ಲಿ ಈ ಹಕ್ಕಿಗಳ ಬಗ್ಗೆ ತಮ್ಮ ಸ್ವ ಅನುಭವದ ಸ್ವಾರಸ್ಯವಾಗಿ ಹಂಚಿಕೊಂಡಿದ್ದಾರೆ. **ಅಂತಹ ಕೆಲ ಆಯ್ದ ವಿವರಗಳನ್ನು ಅಲ್ಲಲ್ಲಿ ಈ ಲೇಖನದಲ್ಲಿ ಕೊಡಲಾಗಿದೆ.**

ಜೇನು ಹುಳುಗಳನ್ನು ಹಿಡಿದು ತಿನ್ನುವ ಹಕ್ಕಿಗಳಲ್ಲಿ ಎರಡು ಬಗೆ ಇವೆ. ಮೊದಲನೆಯದು ಜೇನು ಕುಟುರಗಳು. ಕನ್ನಡನಾಡಿನಲ್ಲಿ ನಾಲ್ಕು ಬಗೆ ಜೇನು ಕುಟುರಗಳನ್ನು ಕಾಣಬಹುದು. ಇವುಗಳಲ್ಲಿ ಒಂದು ಗುಬ್ಬಚ್ಚಿಗಿಂತ ಚಿಕ್ಕದು. ಇದನ್ನು ಜೇನು ಮಗರೆ ಎನ್ನುವರು. ಮಿಕ್ಕ ಮೂರು ಇನ್ನೂ ಸಣ್ಣವು. ಮೊದಲ ಮೂರು ಜೇನು ಕುಟುರಗಳಲ್ಲಿ ಮೊದಲನೆಯದು ಹಸುರು ಜೇನು ಕುಟುರ. ಇದರ ರೆಕ್ಕೆ ಮತ್ತು ತಲೆಯ ನೆತ್ತಿ ಕಂದು ಮಿಶ್ರಿತ ಹಸುರು ಬಣ್ಣಕ್ಕಿರುತ್ತದೆ. ಕುತ್ತಿಗೆಯ ಹತ್ತಿರ ಮತ್ತು ಕಣ್ಣಿನ ಬಳಿ ಕಪ್ಪು ಪಟ್ಟೆಗಳಿರುತ್ತವೆ. ಬಾಲದಲ್ಲಿ ಎರಡು ಪುಕ್ಕಗಳು ನೀಳವಾಗಿ ಹೊರಬಂದು ಎದ್ದು ಕಾಣುತ್ತವೆ. ಇನ್ನೊಂದು ನೀಲಿ ಬಣ್ಣದ ಜೇನು ಕುಟುರ. ಇದು ಬಾಲದ ಪುಕ್ಕಗಳು ನೀಲಿಯಾಗಿದ್ದು, ಎದೆ ಕಂದು ಬಣ್ಣ. ಮೂರನೆಯದು ತಿಳಿಗೆಂಪು ತಲೆಯ ಜೇನು ಕುಟುರ. ಮಲೆನಾಡು ಭಾಗದಲ್ಲಿ ಹಸುರು ಜೇನು ಕುಟುರ ಸರ್ವೆ ಸಾಮಾನ್ಯ. ಈ ಹಕ್ಕಿಗಳು ನೆಲದಲ್ಲಿ ಪೊಟರೆಗಳನ್ನು ತೋಡಿ ಗೂಡು ಮಾಡಿ ಸಂಸಾರ ಹೂಡುತ್ತವೆ. ಹಾಗೆಯೇ ಈ ಹಕ್ಕಿಗಳು ಹಾರುವ ಕೀಟಗಳನ್ನು ಹಿಡಿದು ತಿನ್ನುವುದೇ ಹೆಚ್ಚು. ಜೇನುಗಳು ಗೂಡುಗಳಿಂದ ಹೂವಿನ ಮರದೆಡೆಗೆ ಹೋಗಿ ಬರಲು ಸಾಧಾರಣವಾಗಿ ಒಂದು ನಿಶ್ಚಿತ ಜಾಡನ್ನು ಹಿಡಿಯುತ್ತವೆ. ಈ ಹಕ್ಕಿಗಳು ಅಂತಹ ಜಾಗಗಳಲ್ಲಿ ಕುಳಿತುಕೊಂಡು ಹಾರಿ ಬರುವ ಜೇನುಗಳ ಮೇಲೆ ಮಿಂಚಿನ ವೇಗದಲ್ಲಿ ಎರಗಿ ಜೇನುಗಳನ್ನು ಹಿಡಿದು ಕೊಂಬೆಗಳಿಗೆ ಚಚ್ಚಿ ಸಾಯಿಸಿ ತಿನ್ನುತ್ತವೆ. ಇವು ಜೇನು ಹಿಡಿಯುವಾಗ ಸಾಧಾರಣವಾಗಿ ಬಳೆ ಅಲುಗಿಸಿದ ಶಬ್ದದಂತೆ ಕಿಣಿ ಕಿಣಿ ಎಂದು ಸದ್ದು ಮಾಡುವುದರಿಂದ ಇವುಗಳನ್ನು "ಗಣಿಗಾರಲು ಹಕ್ಕಿ" ಗಳೆಂದು ಕರೆಯುವುದು. ಮಲೆನಾಡಿನಲ್ಲಿ ಜೇನು ಸಾಕುವಲ್ಲೆಲ್ಲಾ ಈ ಹಕ್ಕಿಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಈ ಹುಳುಗಳು ತಂತಿ ಕಂಬದ, ಮರಗಳ ಹೊರ ಚಾಚಿಕೊಂಡಿರುವ ಕೊಂಬೆಗಳ ಮೇಲೆ ಕುಳಿತು ಹೋಗಿ ಬರುವ ಜೇನುಗಳಲ್ಲಿ ಒಂದೊಂದನ್ನೇ ತಿನ್ನುತ್ತವೆಯೇ ಹೊರತು ಜೇನುಗಳು ಮರದ ಹೂವಿಗೆ ಮುತ್ತಿರುವೆಡೆಗಳಲ್ಲಿ ಜೇನು ಹಿಡಿಯಲು ಹೋಗುವುದಿಲ್ಲ. ಹಾಗೆಯೇ ಪೆಟ್ಟಿಗೆಗಳಲ್ಲಿ ಜೇನು ಸಾಕಾಣಿಕೆಯಿರುವಲ್ಲಿ ಜೇನು ಪೆಟ್ಟಿಗೆಗಳೆಡೆಗೆ ಶಿಕಾರಿಗೆ ಬರುವುದಿಲ್ಲ. ಆದ್ದರಿಂದ ಜೇನು ಕೃಷಿಕರು ಇವು ಅಂಥ ಉಪದ್ರವಕಾರಿಗಳೆಂದು ಪರಿಗಣಿಸುವುದಿಲ್ಲ.

ಹಸಿರು ಜೇನು ಕುಟುರ

ನೀಲಿ ಬಾಲದ ಜೇನು ಕುಟುರ

ತೇಜಸ್ವಿಯವರು ತಮ್ಮ ಮೂಡಿಗೆರೆಯ ತೋಟದಲ್ಲಿ ಜೇನು ಸಾಕುತ್ತಿದ್ದು, ಅವರಲ್ಲಿ ಕೆಲಸಕ್ಕಿದ್ದ ಮಾರ ಮತ್ತು ಪ್ಯಾರ ಇವುಗಳೆಡೆಗೆ ಗಮನವೀಯುತ್ತಿದ್ದು ಜೇನು ಕುಟುರಗಳು ಜೇನು ನೊಣಗಳನ್ನು ಹಿಡಿದು ತಿನ್ನುತ್ತಿದ್ದುದನ್ನು ಈ ಹಕ್ಕಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬಯಸಿದ ಪ್ರಸಂಗವನ್ನು ಅವರ ಪುಸ್ತಕದಲ್ಲಿ ಹಾಸ್ಯದೊಂದಿಗೆ ದಾಖಲಿಸಿದ್ದಾರೆ. ಏನೆಂದರೆ ಮಾರ ಈ ಹಕ್ಕಿಗಳು ಜೇನು ಹುಳುಗಳನ್ನು ತಿನ್ನದಂತೆ ಮಾಡಲು ಸಂತೆಯಿಂದ ಒಂದು ಚಾಟರ್ ಪಿಲ್ಲರ್ ಕೊಂಡು ತಂದು ಅವುಗಳನ್ನು ಹೊಡೆಯಲು ಪ್ರಯತ್ನಿಸಿದ. ಅವನಿಗೆ ಅದರಲ್ಲಿ ಗುರಿ ಹೊಡೆಯಲು ಸಾಧ್ಯವಾಗಲಿಲ್ಲ. ಅವನೂ, ಪ್ಯಾರನೂ ಅದರಲ್ಲಿ ಗುರಿ ಹೊಡೆಯುವುದನ್ನು ಅಭ್ಯಾಸ ಮಾಡಿಕೊಳ್ಳುವಷ್ಟರಲ್ಲಿ ಅದರ ರಬ್ಬರ್ ತುಂಡಾಯಿತಂತೆ. ತೇಜಸ್ವಿಯವರು ಆ ಹಕ್ಕಿಗಳ ಉಪಟಳವನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಅವನಿಗೆ ಅವುಗಳ ಮೇಲೆ ಜಿದ್ದು ಬೆಳೆಯಲು ಕಾರಣವಿರಬಹುದೆ ? ಅಥವಾ ಅವರು ಪೆಟ್ಟಿಗೆಯೊಳಗೆ ಕೂರಿಸಿದ ಜೇನುಗಳನ್ನು ಅವು ತಿನ್ನುತ್ತಿದುದರಿಂದ ಅದು ಶಿಕ್ಷಾರ್ಹ ಅಪರಾಧ ಎಂದು ಅವನ ತರ್ಕವಿರಬಹುದೆ? ಎನ್ನುತ್ತಾರೆ ತೇಜಸ್ವಿ.

ಮಾರನು ಚಾಟರ್ ಪಿಲ್ಲರ್ ತುಂಡಾದರೂ ತನ್ನ ಜಿದ್ದು ಬಿಡದೆ "ಅವಕ್ಕೆ ಬುದ್ಧಿ ಕಲಿಸಿಯೇ ಕಲಿಸ್ತೀನೆ ನೋಡು" ಎಂದು ಪ್ಯಾರನ ಹತ್ತಿರ ಪ್ರತಿಜ್ಞೆ ಮಾಡಿ ದನ ಕಾಯುವ ರಾಮನ ಜೊತೆ ಸಮಾಲೋಚನೆ ನಡೆಸಿ ಹೊಸದೊಂದು ಉಪಾಯ ಮಾಡಿದನಂತೆ. ಅದೇನೆಂದರೆ ಜೇನು ಕುಟುರಗಳು ಜೇನುಗಳು ಹೋಗಿ ಬರುವ ದಾರಿಯಲ್ಲಿ ಯಾವುದಾದರೊಂದು ಕಡ್ಡಿಯೋ ಕೋಲೋ ಅಥವಾ ಮರದಿಂದ ಹೊರಚಾಚಿಕೊಂಡಿರುವ ರೆಂಬೆಯೋ ಇದ್ದರೆ, ಅದರ ಮೇಲೆ ಕುಳಿತುಕೊಂಡು ಆಗಾಗ ಹಾರಿ ಹೋಗಿ ಬರುವ ಜೇನುಗಳನ್ನು ಹಿಡಿಯುತ್ತಾ ಇರುತ್ತದೆ. ಪ್ರತಿ ಸಾರಿ, ಹಾರಿ ಜೇನು ಹಿಡಿದ ಮೇಲೂ ಅದೇ ಕೋಲಿನ ಮೇಲೆ ಬಂದು ಕೂರುತ್ತದೆ. ಅದರ ಈ ನಡವಳಿಕೆಯನ್ನು ಚೆನ್ನಾಗಿ ಗಮನಿಸಿದ ಮಾರ ಹಕ್ಕಿ ಹಿಡಿಯಲು ಒಳ್ಳೆ ಉಪಾಯ ಮಾಡಿದ್ದ. ಹಲಸಿನ ಮೇಣ, ಬಸರಿ ಮರದ ಹಾಲು ಎಲ್ಲ ಸೇರಿಸಿ ಮಿಶ್ರಣ ಮಾಡಿ ಅದನ್ನು ಜೇನು ಕುಟುರಗಳ ಪ್ರತಿ ಬಾರಿಯೂ

ಬಂದು ಕುಳಿತುಕೊಳ್ಳುವ ಕೋಲಿಗೆ ಹಚ್ಚಿದ. ಜೇನು ಕುಟುರಗಳೇನಾದರೂ ಸಂಶಯದಿಂದ ಇನ್ನೊಂದು ಕೋಲನ್ನು ಕುಳಿತುಕೊಳ್ಳಲು ಆಯ್ಕೆ ಮಾಡಿಕೊಂಡರೆ, ಆ ಕೋಲುಗಳಿಗೂ ಮಿಶ್ರಣ ಬಳಿಯುತ್ತಿದ್ದ ಅಥವಾ ಆ ಕೋಲನ್ನೇ ಮುರಿದು ಬಿಡುತ್ತಿದ್ದ. ಜೇನು ಕುಟುರಗಳು ಎಷ್ಟೇ ಜಾಗರೂಕತೆವಹಿಸಿದರೂ ಒಂದಲ್ಲಾ ಒಂದು ಸಾರಿಯಾದರೂ ಎಚ್ಚರ ತಪ್ಪಿ ಇವನ ಮೇಣ ಬಳಿದ ಕೋಲಿನ ಮೇಲೆ ಕೂತೇ ಕೂಡುತ್ತಿದ್ದವು. ಹಾಗೆ ಹಿಡಿದ ಹಕ್ಕಿಗಳನ್ನು ಮಾರ ತಿನ್ನುತ್ತಿದ್ದನಂತೆ. ಹಾಗೆಯೇ ಅವನ ತಕರಾರೇನೆಂದರೆ "ಬೇಕಾದರೆ ಈ ಹಕ್ಕಿಗಳು ತೋಟದ ಹತ್ತಿರದ ಹೊಲಗೇರಿ ಪಟ್ಟಿಯಲ್ಲಿ ಹೆಜ್ಜೇನು ತಟ್ಟೆ ಕಟ್ಟಿದಾವಲ್ಲ ಅಲ್ಲಿ ಎಷ್ಟು ಬೇಕಾದರೂ ತಿನ್ನಲಿ ನಮ್ಮ ಜೇನು ಯಾಕೆ ತಿನ್ನಬೇಕು" ಎಂದು ಪ್ರಶ್ನಿಸುತ್ತಿದ್ದನಂತೆ. ಆ ಹಕ್ಕಿಗಳಲ್ಲಿ ಕೇವಲ 10 ರಿಂದ 20 ಗ್ರಾಂ ಮಾಂಸವಿದ್ದದ್ದು ಗೊತ್ತಿದ್ದರೂ, ಅದು ತನಗೆ ಮುಖ್ಯವಲ್ಲವೆಂದು ತಾನು ಕೇವಲ ಕೊಂದ ಪಾಪ ತಿಂದು ಪರಿಹರಿಸಬೇಕೆಂಬ ನಿಯಮದಂತೆ ತಿನ್ನುತ್ತೇನೆಂದು ಹೇಳುತ್ತಿದ್ದನಂತೆ. ಅದಕ್ಕೆ ತೇಜಸ್ವಿಯವರು ಹಾಸ್ಯ ತುಂಬಿದ ವ್ಯಂಗ್ಯದಲ್ಲಿ "ಮನುಷ್ಯನ ನಡವಳಿಕೆ ಸಕಾರಣವಾಗಿರಬೇಕೆಂಬ ತತ್ವವನ್ನೇ ಆ ಅವವೇಕಿ ತಿರಸ್ಕರಿಸಿದ್ದ" ಎಂದು ಬರೆಯುತ್ತಾರೆ.

ಜೇನು ಮಗರೆ: ಇದು ಜೇನು ಕುಟುರಗಳ ಕುಟುಂಬದ ಅತಿ ದೊಡ್ಡ ಹಕ್ಕಿ. ಪಾರಿವಾಳದಷ್ಟು ದೊಡ್ಡದಿರುವ ಇದು ಸಹ ಹಸುರು ಬಣ್ಣದ ಹಕ್ಕಿ. ಕೆಳಭಾಗದಲ್ಲಿ ಕುತ್ತಿಗೆಯ ಹತ್ತಿರ ನೀಲಿ ಬಣ್ಣವೂ, ಹೊಟ್ಟೆಯ ಭಾಗ ಮಣ್ಣಿನ ನಸು ಕಂದು ಬಣ್ಣಕ್ಕೂ ಇರುತ್ತದೆ. ಕುತ್ತಿಗೆಯಲ್ಲಿ ಎದೆಯ ಮೇಲೂ ನೀಳವಾದ ಕಪ್ಪು ಪಟ್ಟೆಗಳಿರುತ್ತವೆ. ಇದು ಬಯಲು ಸೀಮೆಯಲ್ಲಿ ವಿರಳ, ಹಿಮಾಲಯದ ತಪ್ಪಲಿನ ಕಾಡುಗಳಲ್ಲಿ ಮತ್ತು ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ಹಕ್ಕಿಯ ಕೂಗು ಕೊಂಚ ಕರ್ಕಶವಾಗಿ ಕೊರ್ ಕೊರ್ ಎಂದು ಹಕ್ಕಿಗಳಿಗಿಂತ ಹೆಚ್ಚಾಗಿ ಪ್ರಾಣಿಗಳ ಕೂಗನ್ನು ಹೋಲುತ್ತದೆ. ಇದು ಏಕಾಂಗಿಯಾಗಿ ಅಥವಾ ಹೆಣ್ಣು ಗಂಡು ಜೋಡಿಗಳಲ್ಲಿ ಕಾಡುಗಳಲ್ಲಿ ಮತ್ತು ತೋಟಗಳಲ್ಲಿ ಕಾಣಸಿಗುತ್ತವೆ.

ಜೇನುಮಗರೆಗಳು ಜೇನುಕುಟುರಗಳಂತೆ ಜೇನುಗಳು ಹೋಗಿ ಬರುವ ದಾರಿಯಲ್ಲಿ ಕುಳಿತು ಅವನ್ನು ಹಿಡಿದು ತಿನ್ನುವುದಿಲ್ಲ. ಅವು ಅದರ ಬದಲು ತಮ್ಮ ಆಹಾರ ಸಂಪಾದನೆಗೆ ಇನ್ನೂ ಸುಲಭದ ವಿಧಾನವನ್ನೇ ಅನುಸರಿಸುತ್ತವೆ. ಅವು ಜೇನು ಗೂಡುಗಳ ಬಳಿಯಲ್ಲೇ ಹೋಗಿ ಜೇನುಗಳನ್ನು ರಪ್ ಎಂದು ರೆಕ್ಕೆಗಳಿಂದಲೇ ಬಡಿದು ಕೆಣಕಿಬಿಡುತ್ತವೆ. ಆಗ ಜೇನುಗಳು ಹೊರಬಂದು ಅವುಗಳ ಮೇಲೆ ರೋಷದಿಂದ ಪ್ರತಿ ದಾಳಿ ಮಾಡಲು ಶುರು ಮಾಡಿದಾಗ ಅವಕ್ಕೆ ಮುತ್ತುವ ಜೇನನ್ನು ಅವು ಕುಳಿತಲ್ಲಿಯೇ ಕುಳಿತು ಗಬಗಬನೆ ಹಿಡಿದು ತಿನ್ನುತ್ತವೆ. ಅವುಗಳು ತಿನ್ನುವ ಸಾಮರ್ಥ್ಯವನ್ನು ಮೀರಿ ಜೇನುಗಳು ಮುತ್ತಿಕೊಂಡರೆ ಅವುಗಳ ಸಂಖ್ಯೆ ಕೊಂಚ ಕಡಿಮೆಯಾಗುವವರೆಗೂ ದೂರ ಹಾರಿ ಅಲ್ಲಿ ಕುಳಿತು ತಿನ್ನುತ್ತವೆ. ಹೀಗೆ ತೇಜಸ್ವಿಯವರು ತಮ್ಮ ಸ್ವ ಅನುಭವವನ್ನು ತಮ್ಮ "ಮಿಂಚುಳ್ಳಿ" ಪುಸ್ತಕದಲ್ಲಿ ದಾಖಲಿಸಿದ್ದಾರೆ. ಹಾಗೆಯೇ ಈ ರೀತಿ ದಾಳಿಗೊಳಗಾದ ಜೇನುಗಳು ಜೇನು ಮಗರೆಗಳತ್ತ ಬೆನ್ನತ್ತುತ್ತವೆ. ಈ ಸಂದರ್ಭದಲ್ಲಿ ಹತ್ತಿರದಲ್ಲಿ ಏನಾದರೂ ಪ್ರಾಣಿಗಳು, ಮನುಷ್ಯರಿದ್ದರೆ ಅವರ ಮೇಲೂ ಮಾರಣಾಂತಿಕ ದಾಳಿ ನಡೆಸುತ್ತವೆ. ಹೀಗಾಗಿಯೇ ಜಮೀನುಗಳಲ್ಲಿ ಕೆಲಸ ಮಾಡುತ್ತಿರುವಾಗ ಕೃಷಿಕರು ಜೇನುಗಳ ದಾಳಿಗೊಳಗಾದ ಸುದ್ದಿಗಳು ಆಗಾಗ ಕೇಳಿಬರುತ್ತಿರುತ್ತವೆ.

ಹನಿಗೈಡ್ ಹಕ್ಕಿಗಳು: ಆಫ್ರಿಕಾದ ಹನಿ ಗೈಡ್ ಹಕ್ಕಿಗಳು, ದಕ್ಷಿಣ ಅಮೆರಿಕದ ಟಾಕ್ಯಾನ್ ಹಕ್ಕಿಗಳು, ಮರ ಕುಟುಕಗಳೆಲ್ಲವನ್ನು ಸೇರಿಸಿ "ಪಿಸ್ಸಿಫಾರಮ್" ಬಳಗಕ್ಕೆ ವರ್ಗೀಕರಿಸಿದ್ದಾರೆ. ಈ ಪಕ್ಷಿಗಳ ವಿಶೇಷತೆ ಎಂದರೆ ಬೇರೆ ಹಕ್ಕಿಗಳಿಗೆ ಸಾಧಾರಣವಾಗಿ ಮೂರು ಬೆರಳುಗಳು ಮುಂದಕ್ಕೆ, ಒಂದು ಬೆರಳು ಹಿಂದಕ್ಕೂ ಇರುತ್ತವೆ. ಆದರೆ ಈ ಬಳಗದ ಹಕ್ಕಿಗಳಿಗೆ ಎರಡು ಬೆರಳುಗಳು ಮುಂದಕ್ಕೂ, ಎರಡು ಬೆರಳುಗಳು ಹಿಂದಕ್ಕೂ ಇರುತ್ತವೆ. ಹನಿಗೈಡ್ ಹಕ್ಕಿಗಳು ಕನ್ನಡನಾಡಿನ ಜೇನು ಮಗರೆಗಳಂತೆ ತಾವೇ ಜೇನು ಗೂಡುಗಳ ಮೇಲೆ ದಾಳಿ ಮಾಡುವುದಿಲ್ಲ. ಅದರ ಬದಲು ಜೇನು ತುಪ್ಪ ತಿನ್ನುವ ಪ್ರಾಣಿಗಳನ್ನು, ಅದರಲ್ಲೂ ಮನುಷ್ಯರನ್ನು ಹುಡುಕುತ್ತದೆ. ಆಫ್ರಿಕಾದ ಹನಿಗೈಡ್ ಹಕ್ಕಿಗಳು ಅವುಗಳ ಕೆಲವು ವಿಶಿಷ್ಟ ನಡವಳಿಕೆಗಳಿಂದ ಗಮನೀಯವಾಗಿವೆ.

ಗುಬ್ಬಚ್ಚಿಗಿಂತ ಕೊಂಚ ದೊಡ್ಡದಿರುವ ಈ ಹಕ್ಕಿಗಳು ಜೇನು ಮೇಣವನ್ನು ಆಹಾರವಾಗಿ ಉಪಯೋಗಿಸುವ ಪ್ರಪಂಚದ ಏಕ ಮಾತ್ರ ಹಕ್ಕಿಯಾಗಿದೆ. ಈ ಹಕ್ಕಿಗಳ ಕರುಳಿನಲ್ಲಿರುವ ವಿಶಿಷ್ಟವಾದೊಂದು ಬ್ಯಾಕ್ಟೀರಿಯಾ ಮೇಣವನ್ನು ಪೌಷ್ಟಿಕಾಂಶವನ್ನಾಗಿ ಪರಿವರ್ತಿಸಿ ಜೀರ್ಣವಾಗುವಂತೆ ಮಾಡುತ್ತದೆ. ಆದರೆ ಈ ಹಕ್ಕಿ ಪ್ರಸಿದ್ಧವಾಗಿರುವುದು ಇದರಿಂದಲ್ಲ, ತನ್ನ ಆಹಾರಕ್ಕೆ ಅದು ಇತರ ಜೀವಿಗಳನ್ನು ಅವಲಂಬಿಸಿರುವ ರೀತಿಯಿಂದ. ಆಫ್ರಿಕಾದ ಕಾಡು ಜನರು ಈ ಹಕ್ಕಿಗಳು ಕೂಗಿದರೆ ಎಂದೂ ಅಲಕ್ಷಿಸುವುದಿಲ್ಲ. ಕೂಗುತ್ತಾ ಮುನ್ನಡೆಯುವ ಈ ಹಕ್ಕಿಯನ್ನು ಹಿಂಬಾಲಿಸತೊಡಗುತ್ತಾರೆ. ಜೇನು ಗೂಡುಗಳಿರುವ ಮರದ ಮೇಲೋ, ಹುತ್ತದ ಮೇಲೋ ಕುಳಿತುಕೊಳ್ಳುತ್ತದೆ. ಇದು ಕರೆ ತಂದ ಮನುಷ್ಯ ಜೇನು ಕಿತ್ತು ತುಪ್ಪ ತೆಗೆದುಕೊಂಡ ಮೇಲೆ ಅಲ್ಲಿ ಉಳಿಯುವ ಮೇಣದ ತಟ್ಟೆಗಳನ್ನು ಇದು ತಿನ್ನುತ್ತದೆ. ಈ ಕಾರಣಕ್ಕಾಗಿಯೇ ಇದಕ್ಕೆ "ಹನಿಗೈಡ್" ಎಂದು ಹೆಸರು ಬಂದಿರುವುದು. ಜೇನು ಕೀಳಲು ಇದು ಮನುಷ್ಯರನ್ನು ಪ್ರಧಾನವಾಗಿ ಅವಲಂಬಿಸಿದೆಯಾದರೂ ಮನುಷ್ಯರು ಕಾಣದಿದ್ದರೆ ಜೇನು ಕೀಳುವ ಮುಂಗುಸಿ, ಕರಡಿ ಮುಂತಾದವುಗಳಿಗೆ ಇದು ಸೂಚನೆ ಕೊಟ್ಟು ತನ್ನ ಉದ್ದೇಶ ನೆರವೇರಿಸಿಕೊಳ್ಳುತ್ತದೆ. ಆದ್ದರಿಂದ ಹನಿಗೈಡ್ ಹಕ್ಕಿ ಮತ್ತು ಮನುಷ್ಯನ ಸಂಬಂಧ ಕೇವಲ ಅವನಿಗೆ ವಿಶಿಷ್ಟವಾದುದೇನೂ ಅಲ್ಲ. ಹೊಟ್ಟೆ ಪಾಡಿನ ವಿಷಯದಲ್ಲಿ ಅವು ಕರಡಿ, ಮುಂಗುಸಿ ಮುಂತಾದವೂ ಸಹ ಮನುಷ್ಯನಷ್ಟೇ ಚೆನ್ನಾಗಿ ಈ ಹಕ್ಕಿಯ ಚರ್ಯೆಯನ್ನು ಅರ್ಥಮಾಡಿಕೊಂಡಿವೆ ಎನ್ನಲಾಗಿದೆ.

ಬೇಬಿ ಕಾರ್ನ್

ಶಿಲ್ಪಾ ಹೆಚ್. ಡಿ., 9448719289, ಸುರೇಶ್ ನಾಯ್ಕ ಕೆ. ಪಿ. ಮತ್ತು ಚೈತ್ರ ಜಿ., ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಹೊನ್ನವಿಲೆ

ಬೇಬಿ ಕಾರ್ನ್ (ಝಿಯಾ ಮೇಸ್ ಎಲ್.), ಇದನ್ನು ಮಿನಿ ಕಾರ್ನ್ ಎಂದೂ ಕರೆಯುತ್ತಾರೆ. ಇದು ಸಂಪೂರ್ಣವಾಗಿ ಪಕ್ವವಾಗುವ ಮೊದಲು ಎಳೆಯ ಮೆಕ್ಕೆ ಜೋಳದ ಸಸ್ಯಗಳಿಂದ ವಿಶೇಷವಾಗಿ ರೇಷ್ಮೆ ಹೂವುಗಳು ಹೊರಹೊಮ್ಮದೇ (ಪರಾಗ ಸ್ಪರ್ಶದ ಮುಂಚಿನ ಹಂತ) ಇರುವ ಮುನ್ನ ಕೊಯ್ಲು ಮಾಡುವ ಬೆಳೆ. ಈ ಮೆಕ್ಕೆ ಜೋಳವನ್ನು ತರಕಾರಿಯಾಗಿ, ಬೇಯಿಸಿ, ಉಪ್ಪಿನ ಕಾಯಿಯಾಗಿ ಮತ್ತು ಹಸಿಯಾಗಿ ಬಳಸಬಹುದು. ಇದು ಸಿಹಿ ಮತ್ತು ರಸಭರಿತವಾದ ರುಚಿಯನ್ನು ನೀಡುತ್ತದೆ. ಇದು ಪಾಕ ಪದ್ಧತಿಯಲ್ಲಿ ಮಹತ್ವವಾದ ಸ್ಥಾನವನ್ನು ಪಡೆದಿದೆ.

ಮುಖ್ಯವಾಗಿ, ಬೇಬಿ ಕಾರ್ನ್ ಕೀಟನಾಶಕಗಳಿಂದ ಮುಕ್ತವಾಗಿದ್ದು, ಅದರ ಪೌಷ್ಟಿಕಾಂಶದ ಮೌಲ್ಯವನ್ನು ಜನಪ್ರಿಯ ತರಕಾರಿಗಳಾದ ಹೂಕೋಸು, ಎಲೆಕೋಸು, ಟೊಮೆಟೊ, ಬಿಳಿಬದನೆ ಮತ್ತು ಸೌತೆಕಾಯಿಗಳಿಗೆ ಹೋಲಿಸಬಹುದಾಗಿದೆ. ಇದರ ಉಪ ಉತ್ಪನ್ನಗಳಾದ ಎಳೆಯ ಹೊಟ್ಟು, ರೇಷ್ಮೆ ಮತ್ತು ಹಸಿರು ಕಾಂಡಗಳು ಪಶುಗಳಿಗೆ ಉತ್ತಮ ಆಹಾರವಾಗಿ ಉಪಯೋಗಿಸಬಹುದು. ಈ ಬೆಳೆಗೆ ವಿದೇಶದಲ್ಲಿ ಹೆಚ್ಚಿನ ಬೇಡಿಕೆ ಇದೆ.

ಬೇಸಾಯ ಕ್ರಮಗಳು

ಮಣ್ಣು: ಫಲವತ್ತಾದ ನೀರು ಬಸಿದು ಹೋಗುವ ಮರಳು ಮಿಶ್ರಿತ ಗೋಡು ಮಣ್ಣು ಈ ಬೆಳೆಗೆ ಉತ್ತಮ.

ಬಿತ್ತನೆ ಕಾಲ: ಈ ಬೆಳೆಯನ್ನು ನೀರಾವರಿ ಆಶ್ರಯದಲ್ಲಿ ಎಲ್ಲಾ ಕಾಲದಲ್ಲಿ ಬೆಳೆಯಬಹುದು. ಮೇ–ಜೂನ್, ಸೆಪ್ಟೆಂಬರ್–ಅಕ್ಟೋಬರ್ ಹಾಗೂ ಜನವರಿ–ಫೆಬ್ರವರಿ ತಿಂಗಳು ಉತ್ತಮ.

ಬೇಬಿ ಕಾರ್ನ್‌ಗೆ ಭೂಮಿಯ ಸಿದ್ಧತೆ, ಬೆಳೆ ನಿರ್ವಹಣೆಯ ಕ್ರಮಗಳು, ಸ್ವೀಟ್ ಕಾರ್ನ್ ಮತ್ತು ಪಾಪ್‌ಕಾರ್ನ್‌ನಂತೆಯೇ ಇರುತ್ತದೆ. ಬೇಬಿ ಕಾರ್ನ್‌ಗೆ ಎರಡು ಸಸ್ಯ ವ್ಯವಸ್ಥೆಗಳಲ್ಲಿ ಬೆಳೆಯಬಹುದು. ಒಂದು ವ್ಯವಸ್ಥೆಯು ಪ್ರತಿ ಹೆಕ್ಟೇರಿಗೆ ಸುಮಾರು 58,000 ಸಸ್ಯಗಳ ಪ್ರಮಾಣದ ಸಸ್ಯ ಸಂಖ್ಯೆಯನ್ನು ಹೊಂದಿರಬೇಕು. ಇಲ್ಲಿ ಮೇಲಿನ ಎಳೆ ತೆನೆಯನ್ನು (earheads) ಧಾನ್ಯದ ಕಾರ್ನ್ ಅಥವಾ ಸ್ವೀಟ್ ಕಾರ್ನ್‌ಗಾಗಿ ಬಳಸಲಾಗುತ್ತದೆ. ನಂತರದ ಎಳೆ ತೆನೆಯನ್ನು ಬೇಬಿ ಕಾರ್ನ್‌ಗಾಗಿ ಕೊಯ್ಲು ಮಾಡಲಾಗುತ್ತದೆ. ಎರಡನೆಯ ವ್ಯವಸ್ಥೆಯು 45 ಸೆಂ. ಮೀ. ಅಂತರದಲ್ಲಿ ಸ್ಟಾಂಡರ್ಡ್ ಸಸ್ಯ ಸಂಖ್ಯೆಯು ಪ್ರತಿ ಹೆಕ್ಟೇರಿಗೆ ಸುಮಾರು 46.5 ಕ್ವಿ ಎಳೆ ತೆನೆಯನ್ನು (4.65 q husked ear) ಇಳುವರಿಯಾಗಿ ಪಡೆಯಬಹುದು. ಆದರೆ ಹೆಚ್ಚಿನ ಸಸ್ಯ ಸಂಖ್ಯೆಯು ಪ್ರತಿ ಹೆಕ್ಟೇರಿಗೆ ಸುಮಾರು 93–10.6 q ಎಳೆ ತೆನೆಯನ್ನು (9.3–10.60 q husked ear) ಇಳುವರಿಯನ್ನು ದೊರೆಯುತ್ತದೆ.

ಬಿತ್ತನೆ ಬೀಜ ಪ್ರಮಾಣ: (20–25 ಕಿ.ಗ್ರಾಂ/ಹೆ.) ಬೀಜವನ್ನು ಸಾಲಿನಿಂದ ಸಾಲಿಗೆ 60 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು. ಈ ಮೂಲಕ ಹೆಚ್ಚಿನ ಸಂಖ್ಯೆಯ ಕಾರ್ನ್‌ಗಳನ್ನು ಬೆಳೆಯಬಹುದು ಮತ್ತು ಇದರ ಪರಿಣಾಮವಾಗಿ ರೈತರಿಗೆ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದೆ. ಭಾರತದಲ್ಲಿ ಬೇಬಿ ಕಾರ್ನ್ ಬೆಳೆಯುವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಯಾವುದೇ ತಳಿಯನ್ನು ಅಭಿವೃದ್ಧಿಪಡಿಸಿರುವುದಿಲ್ಲ. ಆದಾಗ್ಯೂ, ಆರಂಭಿಕ ಮತ್ತು ಸಮೃದ್ಧ ತಳಿಗಳಾದ HIM 123, VL-42, Him 129, ಆರಂಭಿಕ ಸಂಯೋಜಿತ ಮತ್ತು ಹೈಬ್ರಿಡ್ ತಳಿಗಳಾದ ಪ್ರಕಾಶ್, PEHM 1 ಮತ್ತು 2 ಅನ್ನು ಬೇಬಿ ಕಾರ್ನ್ ಆಗಿ ಯಶಸ್ವಿಯಾಗಿ ಬೆಳೆಸಬಹುದು (ಕೋಷ್ಟಕ–2). ತಳಿಯ ಆಯ್ಕೆಯ ಸಮಯದಲ್ಲಿ ಕಡಿಮೆ ಎತ್ತರದ ಮತ್ತು ಸಮೃದ್ಧ ತಳಿಗಳಿಗೆ ಆದ್ಯತೆ ನೀಡಬೇಕಾಗುತ್ತದೆ. ಮಿಶ್ರ ತಳಿಗಳಿಗೆ ಮುಕ್ತ ಪರಾಗಸ್ಪರ್ಶದ ತಳಿಗಳಿಗಿಂತ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಏಕೆಂದರೆ ಮಿಶ್ರತಳಿಗಳು ಹೂಬಿಡುವಲ್ಲಿ ಹೆಚ್ಚು ಏಕರೂಪವಾಗಿರುತ್ತವೆ. ಹೀಗಾಗಿ ಅವುಗಳನ್ನು ಕೇವಲ 4–5 ಬಾರಿ ಕಿತ್ತುಕೊಳ್ಳಬೇಕಾಗಬಹುದು. ಇದಕ್ಕೆ ವಿರುದ್ಧವಾಗಿ ತಳಿಗಳ ಏಕರೂಪದ ಹೂಬಿಡುವಿಕೆಯು ದೀರ್ಘಕಾಲದ ಕೊಯ್ಲಿಗೆ ಕಾರಣವಾಗುತ್ತದೆ. ಕಡಿಮೆ ಎತ್ತರದ ಸಸ್ಯಗಳನ್ನು ಹೆಚ್ಚಿನ ಸಾಂದ್ರತೆಗಳಲ್ಲಿ ಚೆನ್ನಾಗಿ ಅಳವಡಿಸಿಕೊಳ್ಳಬಹುದು.

ತಳಿಗಳ ಆಯ್ಕೆ

ತಳಿಗಳು: ಸಿ. ಬಿ. ಪಿ.–21, ಗೋಲ್ಡನ್ ಬೇಬಿ, ಇತ್ಯಾದಿ ಖಾಸಗಿ ತಳಿಗಳನ್ನು 40–45 ದಿನಗಳ ಅವಧಿಯಲ್ಲಿ ಬೆಳೆಯಬಹುದು.

ಪೋಷಕಾಂಶಗಳ ನಿರ್ವಹಣೆ: ಭೂಮಿಯನ್ನು ಒಂದೆರಡು ಬಾರಿ ಉಳುಮೆ ಮಾಡಿ ಶಿಫಾರಸ್ಸು ಮಾಡಿದ ಕೊಟ್ಟಿಗೆ ಗೊಬ್ಬರ 20 ಟನ್ ಪ್ರತಿ ಹೆಕ್ಟೇರಿಗೆ ಬಿತ್ತನೆಗೆ 15 ದಿನಗಳ ಮುಂಚಿತವಾಗಿ ಭೂಮಿಗೆ ಸೇರಿಸಬೇಕು. ಸಾರಜನಕವನ್ನು 100 ಕೆಜಿ/ಹೆಕ್ಟೇರಿಗೆ ಮೂರು ಸಮಾನ ಭಾಗಗಳಾಗಿ

ಬಿತ್ತನೆಯ ಸಮಯದಲ್ಲಿ, ಮೊಣಕಾಲಿನ ಎತ್ತರ ಬೆಳೆದ ಹಂತದಲ್ಲಿ (20–25 DAS) ಮತ್ತು ಗೊಂಡೆಬರುವ ಪೂರ್ವ ಹಂತದಲ್ಲಿ (40–45 DAS) ನೀಡಬೇಕು. ಮತ್ತೊಂದೆಡೆ, ರಂಜಕ ಮತ್ತು ಪೊಟಾಸಿಯಮ್ ಅನ್ನು ಅನುಕ್ರಮವಾಗಿ 60 ಕೆ.ಜಿ/ಹೆ. ಮತ್ತು 40 ಕೆ.ಜಿ/ಹೆ. ನಂತೆ ಬಿತ್ತನೆ ಸಮಯದಲ್ಲಿ ನೀಡಬೇಕು.

ನೀರಾವರಿ ಮತ್ತು ಅಂತರ ಬೇಸಾಯ: ಮಣ್ಣು ಮತ್ತು ಹವಾಗುಣಕ್ಕನುಸಾರ ವಾರಕ್ಕೊಮ್ಮೆ ನೀರನ್ನು ಹಾಯಿಸಬೇಕು. ಬಿತ್ತಿದ 20–25 ಹಾಗೂ 30–35 ದಿನಗಳ ಅಂತರದಲ್ಲಿ ಗಿಡದ ಬುಡಗಳಿಗೆ ಮಣ್ಣು ಕೊಡುವ ಸಲುವಾಗಿ ಅಂತರ ಬೇಸಾಯ ಮಾಡುವುದು ಉತ್ತಮ.

ಕಳೆ ನಿರ್ವಹಣೆ: ಮರಳು ಭೂಮಿಯಲ್ಲಿ ಎಕರೆಗೆ 1 ಕಿ.ಗ್ರಾಂ ಅಥವಾ ಕಪ್ಪು ಭೂಮಿಯಲ್ಲಿ 1.2 ಕಿ.ಗ್ರಾಂ ಶೇ. 50 ಅಟ್ರಾಜಿನ್ 300 ಲೀ. ನೀರಿನಲ್ಲಿ ಕರಗಿಸಿ ಬಿತ್ತನೆಯಾದ ದಿನದ ಅಥವಾ ಒಂದು ದಿನದ ನಂತರ ಮಣ್ಣಿನ ಮೇಲೆ ಸಿಂಪಡಿಸಬೇಕು.

ಸಸ್ಯ ಸಂರಕ್ಷಣೆ

ಕ್ರಸಂ.	ಕೀಟಗಳು	ಹಾನಿಯ ಲಕ್ಷಣಗಳು	ನಿರ್ವಹಣೆ
1	**ಕಾಂಡ ಕೊರೆಯುವ ಹುಳು**	ಮರಿಹುಳು ಕಾಂಡವನ್ನು ಕೊರೆದು ಒಳಸೇರಿ ತಿನ್ನುವುದರಿಂದ ಸುಳಿ ಒಣಗಿ ಕಾಂಡ ಕೊಳೆಯುತ್ತದೆ. ಎಲೆ ಸುಳಿಗಳಿಗಳಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಕಾಣಬಹುದು.	2 ಮಿ.ಲೀ. ಕ್ವಿನಾಲ್ ಫಾಸ್ 35 ಇ.ಸಿ. ಪ್ರತಿ ಲೀ. ನೀರಿನಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು.
2	**ಹೇನು**	ಎಲೆಗಳಿಂದ ರಸ ಹೀರಿ. ಎಲೆಗಳ ಮೇಲೆ ಅಂಟು ಪದಾರ್ಥ ಸ್ರವಿಸುವುದರಿಂದ ಕಪ್ಪು ಬೂಷ್ಟ ಬೆಳವಣಿಗೆ ಆಗುತ್ತದೆ.	2ಮಿ.ಲೀ. ಕ್ವಿನಾಲ್‌ಫಾಸ್ 35 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು.
3	**ಸೈನಿಕ ಹುಳು**	ಮರಿ ಹುಳು ಸುಳಿಯಲ್ಲಿರುತ್ತದೆ ಮತ್ತು ಎಲೆಯ ಮಧ್ಯದ ನರವೊಂದನ್ನು ಬಿಟ್ಟು ಉಳಿದೆಲ್ಲ ಭಾಗವನ್ನು ತಿನ್ನುತ್ತದೆ.	ಇಮಾಮೆಕ್ಟಿನ್ ಬೆಂಜೋಯೇಟ್ 0.5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಕೋರಾಜಿನ್ 0.18 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಸ್ಪೈನೆಟ್ರಮ್ 0.3 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು

ಕೊಯ್ಲು

ರೇಷ್ಮೆಗಳು 1–2 ಸೆಂ.ಮೀ. ಉದ್ದವಿದ್ದರೆ, ಅಂದರೆ ರೇಷ್ಮೆ ಹೊರಹೊಮ್ಮಿದ 1–2 ದಿನಗಳಲ್ಲಿ). ಎಳೆ ತನೆ (ಕಾಬ್)ಗಳನ್ನು ಕೊಯ್ಲು ಮಾಡಲಾಗುತ್ತದೆ (45–50 ದಿನಗಳು). ಎಳೆ ತನೆಗಳನ್ನು ಕೊಯ್ಲು ಮಾಡಲು ಸೂಕ್ತವಾದ ಸಮಯವನ್ನು ಗಾತ್ರದ ಮಾದರಿಯಿಂದ ನಿರ್ಧರಿಸಬಹುದು. ಕೊಯ್ಲು ಸಾಮಾನ್ಯವಾಗಿ ತೇವಾಂಶ ಹೆಚ್ಚಿರುವಾಗ ಮತ್ತು ತಾಪಮಾನ ಕಡಿಮೆಯಾದಾಗ (ಬೆಳಿಗ್ಗೆ) ಮಾಡಲಾಗುತ್ತದೆ. ಬೇಬಿ ಕಾರ್ನ್ ಅನ್ನು ಮೂರು ದಿನಗಳಿಗೊಮ್ಮೆ ತೆಗೆದುಕೊಳ್ಳಬೇಕು ಮತ್ತು 7–8 ಪಿಕಿಂಗ್‌ಗಳು ಮಾಡಬಹುದು. ಉತ್ತಮ ಬೆಳೆಯಲ್ಲಿ

ಸರಾಸರಿ 10–11 ಟ./ಹೆ. ಬೇಬಿ ಕಾರ್ನ್ ಕೊಯ್ಲು ಮತ್ತು ಹಸಿರು ಮೇವು 32.2 ಟ./ಹೆ. ಮಾಡಬಹುದು. ಹೆಚ್ಚುವರಿ ಆದಾಯವನ್ನು ಹಸಿರು ಮೇವಿನ ಮಾರಾಟದ ಮೂಲಕ ಪಡೆಯಬಹುದು, ಮತ್ತು ಮಾರ್ಕೆಟಿಂಗ್ ಮಾಡುವ ಮೊದಲು ಪಾಲಿಥಿನ್ ಹಾಳೆಗಳಲ್ಲಿ ಪ್ಯಾಕ್ ಮಾಡಲಾಗುತ್ತದೆ. ಅನೇಕ ಸಂದರ್ಭಗಳಲ್ಲಿ ತರಕಾರಿ ಬಳಕೆಗಾಗಿ ಬೇಬಿ ಕಾರ್ನ್ ಅನ್ನು ತೆನೆ ತೆಗೆಯದೆಯೇ ಮಾರಾಟ ಮಾಡಲಾಗುತ್ತದೆ.

ಮಾರುಕಟ್ಟೆ ಮತ್ತು ಕ್ಯಾನರಿ ಕೈಗಾರಿಕೆಗಳಿಗೆ ಸೂಕ್ತವಾದ ಗಾತ್ರವು 4.5–10 ಸೆಂ.ಮೀ. ಉದ್ದ ಮತ್ತು 7–17 ಮಿ.ಮೀ. ವ್ಯಾಸದ ಸಿಪ್ಪೆ ಸುಲಿದ, ನಿಯಮಿತವಾದ ಸಾಲು ವ್ಯವಸ್ಥೆಯೊಂದಿಗೆ ಹಳದಿ ಬಣ್ಣದ ದಂಟುಗಳು ಉತ್ತಮ ಮಾರುಕಟ್ಟೆಯನ್ನು ಒದಗಿಸುತ್ತವೆ. ಕೊಯ್ಲು ಮಾಡಿದ ಬೇಬಿ ಕಾರ್ನ್ ಅನ್ನು 10° C ನಲ್ಲಿ 3–4 ದಿನಗಳವರೆಗೆ ಅದರ ಗುಣಮಟ್ಟದ ಮೇಲೆ ಹೆಚ್ಚಿನ ಪರಿಣಾಮ/ಹಾನಿಯಾಗದ ರೀತಿಯಲ್ಲಿ ಸಂಗ್ರಹಿಸಬಹುದು. ದೀರ್ಘಾವಧಿಯ ಶೇಖರಣೆಗಾಗಿ ಮತ್ತು ದೂರದ ಸಾಗಣೆಗಾಗಿ, ಬೇಬಿ ಕಾರ್ನ್ ಅನ್ನು ಉಪ್ಪುನೀರಿನ ದ್ರಾವಣದಲ್ಲಿ (ಶೇ.3), ಸಕ್ಕರೆ (ಶೇ.2) ಮತ್ತು ಸಿಟ್ರಿಕ್ ಆಮ್ಲ (ಶೇ.0.3) ದ್ರಾವಣದ ಡಬ್ಬಿಯಲ್ಲಿಡಲಾಗುತ್ತದೆ ಮತ್ತು ಶೈತ್ಯೀಕರಣದ ಸ್ಥಿತಿಯಲ್ಲಿ ಸಂಗ್ರಹಿಸಲಾಗುತ್ತದೆ. ಬೇಬಿ ಕಾರ್ನ್ ಅನ್ನು ವಿನೆಗರ್‌ನಲ್ಲಿ ಕೂಡ ಸಂಗ್ರಹಿಸಬಹುದು. ಬೇಬಿ ಕಾರ್ನ್ ಭಾರತೀಯ ಮಾರುಕಟ್ಟೆಯಲ್ಲಿ ಜನಪ್ರಿಯತೆಯನ್ನು ಗಳಿಸುತ್ತಿದೆ. ಇದು ಈಗಾಗಲೇ ವಿಶೇಷವಾಗಿ ಸ್ಥಾಪಿತವಾದ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಯುರೋಪ್‌ನಲ್ಲಿದೆ.

ಮಿಡಿತ – ತುಡಿತ

ಮಲ್ಲಿಕಾರ್ಜುನ ಎಂ. ಸಿ., 9480838218, ವಿಶ್ವವಿದ್ಯಾಲಯ ಸಂವಹನ ಕೇಂದ್ರ, ಕೆ.ಶಿ.ನಾ.ಕೃ.ತೋ.ವಿ.ವಿ., ಇರುವಕ್ಕಿ, ಶಿವಮೊಗ್ಗ



ನೇಗಿಲ ಮಿಡಿತ ಪತ್ರಿಕೆಯು ರೈತರಿಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತಿದ್ದು, ಇದರಿಂದ ರೈತರಿಗೆ ತುಂಬಾ ಅನುಕೂಲವಾಗಿದೆ. ನೀವು ಪ್ರಕಟಿಸುವ ಬೆಳೆಗಳ ಕೀಟ ಮತ್ತು ರೋಗಗಳ ಕಲರ್ ಚಿತ್ರಗಳಿಂದ ಅವುಗಳ ಪತ್ತೆಹಚ್ಚುವಿಕೆ ಮತ್ತು ಹತೋಟಿ ಸುಲಭವಾಗುತ್ತದೆ. ಸಾಧಕ ರೈತ ಅಂಕಣದಲ್ಲಿ ಬರುವ ಲೇಖನಗಳು ರೈತರಿಗೆ ಸ್ಫೂರ್ತಿ ನೀಡುತ್ತವೆ. ನಾನು ಮೂಲತಃ ಕಡೂರು ತಾಲೂಕಿನವನು ನಮ್ಮಲ್ಲಿ ತೆಂಗು ಮುಖ್ಯ ಬೆಳೆಯಾಗಿದ್ದು, ನೀರಿನ ಕೊರತೆಯೂ ಇದೆ. ಇಂತಹ ತುಂಬಾ ಹಳೆಯ ತೋಟಗಳಲ್ಲಿ ತೆಂಗಿನ ಮಧ್ಯೆ ಬೆಳೆಯಬಹುದಾದ ಕಡಿಮೆ ಖರ್ಚಿನ ಬೆಳೆಗಳ ಬಗ್ಗೆ ಮಾಹಿತಿ ನೀಡಿ. mucuna ಬೆಳೆಯ ಬಗ್ಗೆ ಒಂದು ಲೇಖನವನ್ನು ನೀಡಿ. ಬೆಳೆ ವಿಮೆ ಹಾಗೂ ಸಬ್ಸಿಡಿ ಮಾಹಿತಿಗಳು ಕೂಡ ರೈತರಿಗೆ ಹೆಚ್ಚು ಉಪಯುಕ್ತವಾಗುತ್ತದೆ. ಬೇರೆ ಬೇರೆ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶು ಇಲಾಖೆಗಳಲ್ಲಿ ರೈತರಿಗೆ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದಲ್ಲಿ ಇನ್ನೂ ಹೆಚ್ಚು ಅನುಕೂಲವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳ ಬಗ್ಗೆ ಎಲ್ಲರಿಗೂ ಅರಿವು ಮೂಡುತ್ತಿದ್ದು, ನಮ್ಮಲ್ಲಿನ ವಾತಾವರಣವು ಇಂತಹ ಬೆಳೆಗಳಿಗೆ ಸೂಕ್ತವಾಗಿದ್ದು, ಈ ಬೆಳೆಗಳ ಬಗ್ಗೆ ನಮಗೆ ಹೆಚ್ಚಿನ ಮಾಹಿತಿಯ ಅವಶ್ಯಕತೆ ಇದೆ.

ಎಂ ಜಿ ವಿ ಮೂರ್ತಿ
ಮುತ್ತಾಣಗೆರೆ ಮತ್ತು ಅಂಚೆ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ನೇಗಿಲ ಮಿಡಿತ ಪತ್ರಿಕೆಯ ಲೇಖನಗಳು ಬಹಳಷ್ಟು ರೈತರಿಗೆ ತುಂಬಾ ಅನುಕೂಲವಾಗುತ್ತಿದೆ. ಪ್ರತಿ ವಿಚಾರವನ್ನು ತಿಳಿಯಲು ಮತ್ತು ಕಲಿಯಲು ವಿಶ್ವವಿದ್ಯಾಲಯಕ್ಕೆ ಬರಬೇಕಿಲ್ಲ, ಏಕೆಂದರೆ ಪತ್ರಿಕೆಯಲ್ಲಿ ಎಲ್ಲಾ ರೀತಿಯ ತಾಂತ್ರಿಕ ಮಾಹಿತಿಗಳು ನಮಗೆ ಲಭ್ಯವಾಗುತ್ತಿವೆ. ನಾನು ಹತ್ತು ವರ್ಷಗಳಿಂದ ಚಂದಾದಾರನಾಗಿದ್ದು, ನಾನು ಓದಿದ ನಂತರ ನಮ್ಮ ಅಂಗಡಿಯಲ್ಲಿ ಇಡುತ್ತೇನೆ. ಇಲ್ಲಿಗೆ ಬರುವ ರೈತರೆಲ್ಲರೂ ಓದಿ ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಪ್ರತಿ ಸಂಚಿಕೆಯನ್ನು ಸಹ ಸಂಗ್ರಹಿಸಿಡುತ್ತೇನೆ. ಇತ್ತೀಚಿನ ದಿನಗಳಲ್ಲಿ ಭತ್ತ ರಾಗಿ ಜೋಳ ಬೆಳೆಯುವುದನ್ನು ಬಿಟ್ಟು, ಅಡಿಕೆ ಬೆಳೆ ಒಂದನ್ನೇ ಬೆಳೆಯುತ್ತಿದ್ದಾರೆ. ಆದುದರಿಂದ ಪ್ರತಿ ಸಂಚಿಕೆಯಲ್ಲಿ ಅಡಿಕೆ ಬೆಳೆ ಕೀಟ ನಿರ್ವಹಣೆ ಮತ್ತು ರೋಗ ಹಿಡಿಮುಂಡಿಗೆ, ಎಲೆಚುಕ್ಕೆ ರೋಗಗಳ ಹೆಚ್ಚಿನ ಫೋಕಸ್ ಮಾಡಿ ತಾಂತ್ರಿಕ ಮಾಹಿತಿಯನ್ನು ನೀಡಿದರೆ, ನಮ್ಮ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ಒಟ್ಟಾರೆ ಪತ್ರಿಕೆ ತುಂಬಾ ಉಪಯುಕ್ತ ಮಾಹಿತಿಯನ್ನು ನೀಡುತ್ತಿದೆ.

ಎನ್.ಹೆಚ್. ಚಂದ್ರಶೇಖರಪ್ಪ,
ನಂದೀಶ್ವರ ಟ್ರೇಡರ್ಸ್, ರೂಂ.3, ಮುನ್ಸಿಪಲ್ ಕಾಂಪ್ಲೆಕ್ಸ್,
ಪಿ.ಬಿ. ರಸ್ತೆ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ

ನೇಗಿಲ ಮಿಡಿತ ಪತ್ರಿಕೆ ತುಂಬಾ ರೈತರಿಗೆ ಸಹಾಯ ಆಗುತ್ತಿದೆ. ಕರ್ನಾಟಕದ ಬೇರೆ ಬೇರೆ ಪ್ರದೇಶ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಮಾಹಿತಿಯನ್ನು ನೀಡುತ್ತಿರುವುದರಿಂದ, ನಾವು ಕಂಪೇರ್ ಮಾಡಿ ನೋಡಲಿಕ್ಕೆ ಸಹಾಯವಾಗಿದೆ. ಕೆಲವೆಲ್ಲಾ ನಾನು ಗಮನಿಸಿದಾಗ ಹಾಗೇ ಮೌಲ್ಯವರ್ಧನೆ ಕುರಿತಂತೆ ಸಾಕಷ್ಟು ಲೇಖನಗಳು ಪ್ರಕಟಗೊಂಡಿವೆ. ನನ್ನದೊಂದು ಸಲಹೆ ಎಂದರೆ ನಮ್ಮ ಭಾಗದ ಬೆಳೆಗಳಾದ ಕಾಫಿ, ಅಡಿಕೆ, ಕಾಳುಮೆಣಸು ಬೆಳೆಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಅಪರೂಪದ ಹಣ್ಣಿನ ಬೆಳೆಗಳ ಬಗ್ಗೆ ಅಂದರೆ ಮ್ಯಾಂಗೋಸ್ಟಿನ್, ಲಿಚಿ, ಡ್ರಾಗನ್ ಫ್ರೂಟ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ವಿವಿಧ ಬೆಳೆಗಳ ಕುರಿಂತೆ ರೈತರ ಪ್ರಶ್ನೆಗೆ ತಜ್ಞರು ಉತ್ತರ ನೀಡುತ್ತಿರುವುದು ಸಮಂಜಸವಾಗಿದೆ. ಮಶ್ರೂಮ್‌ನಿಂದ ಏನೇನು ಮೌಲ್ಯವರ್ಧನೆ ಮಾಡಿ ಬಳಸಬಹುದೆನ್ನುವುದರ ಮಾಹಿತಿ ಹಾಕಿದರೆ ಮುಖ್ಯವಾಗಿ ಮಹಿಳೆಯರಿಗೆ ಹೆಚ್ಚಿನ ಉಪಯುಕ್ತವಾಗುತ್ತದೆ. ಪತ್ರಿಕೆಯನ್ನು ಬೇರೆ ಮ್ಯಾಗಜಿನ್ ಹೋಲಿಸಿದರೆ ಈ ಮ್ಯಾಗಜಿನ್‌ನಲ್ಲಿ, ಮೇಜರ್ ಆಗಿ ತುಂಬಾ ವಿಷಯವಿದೆ ಜಾಹೀರಾತು ಇಲ್ಲ ಎನ್ನುವುದೇ ಇದರ ಪ್ಲಸ್ ಪಾಯಿಂಟ್. ಒಟ್ಟಾರೆ ಪತ್ರಿಕೆ ತುಂಬಾ ಚೆನ್ನಾಗಿ ಬರುತ್ತಿದೆ.

ಅರವಿಂದ ಬಿ.ಸಿ.
ಭೂತನ ಕಾಡು ಎಸ್ಟೇಟ್,
ಹ್ಯಾಂಡ್ ಪೋಸ್ಟ್, ಚಿಕ್ಕಮಗಳೂರು (ತಾ.,ಜಿ.)

ನಮಸ್ಕಾರ ನೇಗಿಲ ಮಿಡಿತ ಪತ್ರಿಕೆ ಚೆನ್ನಾಗಿ ಬರುತ್ತಿದೆ. ಹತ್ತು ವರ್ಷಗಳಿಂದ ಚಂದಾದಾರನಾಗಿ ನಿಮ್ಮ ಪತ್ರಿಕೆಯನ್ನು ತರಿಸಿಕೊಳ್ಳುತ್ತಿದ್ದೇನೆ. ನಾನು ಓದಿದ ನಂತರದಲ್ಲಿ ನನ್ನೆಲ್ಲಾ ಸ್ನೇಹಿತರಿಗೂ ಓದಲು ಕೊಡುತ್ತೇನೆ. ನಾನೊಬ್ಬ ಸಣ್ಣ ಹಿಡುವಳಿ ಹೊಂದಿರುವ ರೈತನಾಗಿದ್ದೇನೆ. ನಾನು ಅಡಿಕೆ ಬೆಳೆಯನ್ನು ಮಾಡಿದ್ದು, ಕೆಲಸಗಾರರ ಕೊರತೆ, ಸರಿಯಾದ ನೀರು ನಿರ್ವಹಣೆ ಮಾಡದೆ ನನ್ನ ಮಿಸ್ಟೇಕ್‌ನಿಂದಾಗಿ ಒಂದು ಅಡಿಕೆ ತೋಟ ಹಾಳಾಗಿತ್ತು. ಆದರೆ ಈಗ ಎಚ್ಚೆತ್ತುಕೊಂಡಿದ್ದೇನೆ. ವೈಜ್ಞಾನಿಕವಾಗಿ ಅಡಿಕೆ ತೋಟವನ್ನು ಮಾಡಬೇಕೆಂದುಕೊಂಡಿದ್ದೇನೆ. ಒಂದು ಬೋರ್ ಕೊರೆಸಿದ್ದು, ನೀರಿನ ಕೊರತೆ ಇಲ್ಲ. ನನ್ನ ತಪ್ಪಿನ ಅರಿವಾಗಿದೆ ಅದನ್ನು ಸರಿಪಡಿಸಿಕೊಂಡು ಉತ್ತಮ ಕೃಷಿ ಮಾಡಬೇಕೆಂದಿದ್ದೇನೆ. ನೇಗಿಲ ಮಿಡಿತ ಪತ್ರಿಕೆ ಒಟ್ಟಾರೆ ಎಲ್ಲಾ ಬೆಳೆಗಳ ಉತ್ತಮ ತಾಂತ್ರಿಕ ಮಾಹಿತಿಯನ್ನು ನೀಡುತ್ತಿದೆ. ನಿಮ್ಮೆಲ್ಲರಿಗೂ ಅಭಿನಂದನೆಗಳನ್ನು ತಿಳಿಸುತ್ತೇನೆ.

ಸುಭಾಷ್ ಎಸ್. ಹಂಸಾಗರ
ರೋಟರಿ ಶಾಲೆ ಸಮೀಪ,
ರಾಣೆಬೆನ್ನೂರು ತಾಲ್ಲೂಕು,. ಹಾವೇರಿ ಜಿ.

ನೀವೂ ಬರೆಯಿರಿ

ನೇಗಿಲ ಮಿಡಿತಕ್ಕೆ ನೀವೂ ಬರೆಯಿರಿ. ನಿಮ್ಮ ಅನುಭವದ ಬರವಣಿಗೆ ಸಹಸ್ರಾರು ರೈತರಿಗೆ ದಾರಿದೀಪವಾಗಬಲ್ಲದು.

ಲೇಖಕರಿಗೆ ಸೂಚನೆ:

ರೈತರಿಗೆ ಮತ್ತು ಓದುಗರಿಗೆ ಕೃಷಿ ಕುರಿತು ರುಚಿಸುವಂತಿರಲಿ. ನುಡಿ ತಂತ್ರಾಂಶ ಬಳಸಿ ಲೇಖನಗಳನ್ನು ಬೆರಳಚ್ಚು ಮಾಡಿ ಇ–ಮೇಲ್ ಮೂಲಕ ಲೇಖನ ಕಳುಹಿಸಿ ಕೊಡಬೇಕು. ಛಾಯಾ ಚಿತ್ರಗಳನ್ನು ಪ್ರತ್ಯೇಕ jpg/tiff (2 MB ಗಿಂತ ಹೆಚ್ಚು) ಮಾದರಿ ಫೈಲ್‌ಗಳನ್ನು ಈ–ಮೇಲ್‌ಗೆ ಲಗತ್ತಿಸಬೇಕು.

ಮಿಂಚಂಚೆ (e-mail) : editorucc@uahs.edu.in ಈ ವಿಳಾಸಕ್ಕೆ ಕಳುಹಿಸಿ. ವಿಜ್ಞಾನಿಗಳು ಮತ್ತು ರೈತರು ಲೇಖನ ಕಳಿಸುವಾಗ ಸ್ಫುಟವಾಗಿ ಲೇಖನ ಬರೆದು ಕಳಿಸಬಹುದು. ಲೇಖನದಲ್ಲಿನ ಅಭಿಪ್ರಾಯಗಳು ಮತ್ತು ಮಾಹಿತಿಗೆ ಲೇಖಕರಿಗೆ ಹೊಣೆಗಾರರು. ಲೇಖನ ಆಯ್ಕೆಯ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ. ಛಾಯಾಚಿತ್ರಾಧಾರಿತ ಲೇಖನಗಳಿಗೆ ಆದ್ಯತೆ ನೀಡಲಾಗುತ್ತದೆ. ಲೇಖನಗಳು ಇತರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿರಬಾರದು.



http://uahs.edu.in/publications/

ಪ್ರಿಯಾ ಚಂದಾದಾರರೇ, ನೇಗಿಲ ಮಿಡಿತ ನಿಮ್ಮ ಪತ್ರಿಕೆ, ನಿಮ್ಮ ಸಲಹೆ ಸೂಚನೆ, ಅನಿಸಿಕೆಗಳಿದ್ದರೆ ಮಿಡಿತ–ತುಡಿತ ಅಂಕಣಕ್ಕೆ ಪೋಸ್ಟ್ ಕಾರ್ಡಿನಲ್ಲಿ ಬರೆದು ಕಳುಹಿಸಲು ವಿನಂತಿ ನಿಮ್ಮ ಪ್ರತಿಕ್ರಿಯೆ ನಮಗೆ ಬಹು ಅಮೂಲ್ಯ.

ಸಂಪಾದಕರು

ವಿಳಾಸ: ಸಂಪಾದಕರು, ವಿಶ್ವವಿದ್ಯಾಲಯ ಸಂವಹನ ಕೇಂದ್ರ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ–577 412. ಮಿಂಚಂಚೆ (e-mail) : editorucc@uahs.edu.in ಈ ವಿಳಾಸಕ್ಕೆ ಕಳುಹಿಸಿ.

ಇಂದ,

ಸಂಪಾದಕರು

ವಿಶ್ವವಿದ್ಯಾಲಯ ಸಂವಹನ ಕೇಂದ್ರ, ಶಿಕ್ಷಣ ನಿರ್ದೇಶನಾಲಯ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ

ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

ಇರುವಕ್ಕಿ ಮುಖ್ಯ ಆವರಣ- 577 412

RNI No:KARKAN/2015/65299

ಪತ್ರಿಕೆ ಚಂದಾದಾರ ಅವಧಿ ಮುಗಿದಿರುವ ಓದುಗರು ತಮ್ಮ ಚಂದಾದಾರಿಕೆಯನ್ನು ನವೀಕರಿಸಲು ಕೋರಿದೆ.

NEGILA MIDITHA Vol 11:1 January-February, 2025 KARNATAKA RNI No: KARKAN/2015/65299

ಹನಿಗೈಡ್ ಪಕ್ಷಿ

ನೇಗಿಲ ಮಿಡಿತ ಪತ್ರಿಕೆ ಚಂದಾದಾರಿಕೆ ಹಾಗೂ ಕೃಷಿ ಸಂಬಂಧಿತ ಪುಸ್ತಕಗಳ ಪ್ರತಿಗಳಿಗಾಗಿ ಸಂಪರ್ಕಿಸಿ: ಮೊ. 94808 38218, ಮಿಂಚಂಚೆ: editorucc@uahs.edu.in

ಪ್ರಕಟಣೆ: ಶಿಕ್ಷಣ ನಿರ್ದೇಶನಾಲಯ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, ಇರುವಕ್ಕಿ ಮುಖ್ಯ ಆವರಣ–577 412